ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೯ ಫೆಬ್ರವರಿ ೨೬, ೧೯೮೯ ರೂ. ೧-೦೦



ಆಫ್ಘಾನಿಸ್ತಾನದ ಮೇಲೆ ಅಂತರ್ಯುದ್ಧ ಹೇರಲು ಸಾಮ್ರಾಜ್ಯಶಾಹಿಗಳ ತಂತ್ರ

ಪಾಲಿಟ್‌ಬ್ಯೂರೋ ಖಂಡನೆ

ಸಾಮ್ರಾಜ್ಯಶಾಹಿಗಳು ಮತ್ತು ಅವರ ಏಜೆಂಟರು ಆಫ್ಘಾನಿಸ್ತಾನದ ಜನತೆಯ ಮೇಲೆ ಅಂತರ್ ಯುದ್ಧವನ್ನು ಹೇರುತ್ತಿದ್ದಾರೆ ಎಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಫೆಬ್ರವರಿ 11ರಂದು ಒಂದು ಹೇಳಿಕೆ ನೀಡಿ ತೀವ್ರವಾಗಿ ಖಂಡಿಸಿದೆ.

ಆಫ್ಘಾನಿಸ್ತಾನದಲ್ಲಿ ಬೆಳೆದು ಬರುತ್ತಿರುವ ಪರಿಸ್ಥಿತಿಗಳ ಬಗ್ಗೆ ತನ್ನ ತೀವ್ರ ಆತಂಕ ವ್ಯಕ್ತಪಡಿಸಿರುವ ಹೇಳಿಕೆ ಸಾಮ್ರಾಜ್ಯಶಾಹಿಗಳು ಶಾಂತಿಯುತ ರಾಷ್ಟ್ರೀಯ ಹೊಂದಾಣಿಕೆಗೆ ನಜಿಬುಲ್ಲಾ ಸರ್ಕಾರದ ಮತ್ತು ಸೋವಿಯತ್ ಒಕ್ಕೂಟದ ಪ್ರಯತ್ನಗಳನ್ನೆಲ್ಲಾ ಬುಡಮೇಲು ಮಾಡುತ್ತಿದ್ದಾರೆ ಎಂದು ನುಡಿದಿದೆ.

ಸೋವಿಯತ್ ಒಕ್ಕೂಟ ಮಾತ್ರವೇ ಏಕಪಕ್ಷೀಯವಾಗಿ ತನ್ನ ಸೇನಾಪಡೆಗಳನ್ನು ವಾಪಸ್ಸು ಪಡೆದು ಜಿನಿವಾ ಒಪ್ಪಂದವನ್ನು ಚಾಚೂತಪ್ಪದೆ ಪಾಲಿಸಿದೆ. ಸಾಮ್ರಾಜ್ಯಶಾಹಿಗಳು ಸತತವಾಗಿ ಹಾಡು ಹಗಲೇ ಒಪ್ಪಂದವನ್ನು ಉಲ್ಲಂಘಿಸಿ ಬಂಡುಕೋರರಿಗೆ ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಒದಗಿಸಿ ಕಾಬೂಲಿಗೆ ದಿಗ್ಬಂಧನ ಹಾಕಲು ಕುಮ್ಮಕ್ಕು ನೀಡಿ, ವಿಶ್ವಸಂಸ್ಥೆಯ ವಿಮಾನಗಳಿಗೆ ಕಾಬೂಲಿಗೆ ಹೋಗಲು ಅವಕಾಶ ನಿರಾಕರಿಸಿ ರಕ್ತಪಾತದ ಸನ್ನಿವೇಶ ಸೃಷ್ಟಿಸುತ್ತಿದ್ದಾರೆ ಎಂದು ಪಾಲಿಟ್‌ಬ್ಯೂರೋ ಆಪಾದಿಸಿದೆ.

ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನದ ಒಕ್ಕೂಟ ರಚಿಸಬೇಕೆಂಬ ಪಾಕಿಸ್ತಾನದ ಅಧ್ಯಕ್ಷರ ಸೂಚನೆಯನ್ನು ಪಾಲಿಟ್‌ಬ್ಯೂರೋ ಹೇಳಿಕೆ ಖಂಡಿಸಿತು. ಪಾಕಿಸ್ತಾನದ ಆಡಳಿತದ ಮೇಲೆ ಮಿಲಿಟರಿ ಶಾಹಿಗಳ ಹಿಡಿತ ಎಷ್ಟಿದೆ ಎಂಬುದನ್ನು ಇದು ತೋರಿಸುತ್ತದೆ. ಇದು ಆಫ್ಘಾನಿಸ್ತಾನದ ಸ್ವಾತಂತ್ರ್ಯದ ಆಧಾರವನ್ನೇ ಬುಡಮೇಲು ಮಾಡುತ್ತದಷ್ಟೇ ಅಲ್ಲ, ಈ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಯ ಪ್ರಧಾನ ದಲ್ಲಾಳಿಯಾಗಿ ಪಾಕಿಸ್ತಾನದ ಮಿಲಿಟರಿ ಪಾತ್ರವನ್ನು ಇದು ಬಯಲಿಗೆಳೆದಿದೆ ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ನಜೀಬುಲ್ಲಾ ಹಾಗೂ ಪಿ.ಡಿ.ಪಿ.ಎ. ನೇತೃತ್ವದ ಸರ್ಕಾರದೊಡನೆ ಸಿ.ಪಿ.ಐ.(ಎಂ)ನ ಸಂಪೂರ್ಣ ಸೌಹಾರ್ದತೆ ವ್ಯಕ್ತಪಡಿಸುತ್ತ ಪಾಲಿಟ್‌ಬ್ಯೂರೋ ಆಫ್ಘಾನಿಸ್ತಾನದ ಪ್ರಜಾಪ್ರಭುತ್ವ ಶಕ್ತಿಗಳು ತಮ್ಮ ದೇಶದ ಸಾರ್ವಭೌಮತೆ ಸ್ವಾತಂತ್ರ್ಯ ಮತ್ತು ಸಮಗ್ರತೆಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತದೆ ಎಂಬ ಭರವಸೆ ವ್ಯಕ್ತಪಡಿಸಿತು. ಸಾಮ್ರಾಜ್ಯಶಾಹಿ ಶಕ್ತಿಗಳ ಕುಯುಕ್ತಿಗಳ ವಿರುದ್ಧ ಬಲವಾದ ಪ್ರತಿಭಟನೆ ವ್ಯಕ್ತಪಡಿಸಿ ಆಫ್ಘಾನ್ ಜನತೆಗೆ ಪೂರ್ಣ ಬೆಂಬಲ ನೀಡಬೇಕೆಂದು ಭಾರತದ ಪ್ರಜಾಪ್ರಭುತ್ವ ಮತ್ತು ಪ್ರಗತಿಪರ ಶಕ್ತಿಗಳಿಗೆ ಸಿ.ಪಿ.ಐ.(ಎಂ) ಮನವಿ ಮಾಡಿಕೊಂಡಿದೆ.

ದೆಹಲಿಯಲ್ಲಿ ಪ್ರತಿಭಟನೆ

ಫೆಬ್ರವರಿ 13ರಂದು ನವದೆಹಲಿಯ ಶಾಂತಿಪಥದಲ್ಲಿ ಸಿ.ಪಿ.ಐ.(ಎಂ) ಕರೆಯ ಮೇರೆಗೆ ನೂರಾರು ಮಂದಿ ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಪಾಕಿಸ್ತಾನ ಜಿನಿವಾ ಒಪ್ಪಂದ ಮುರಿಯುತ್ತಿರುವುದರ ವಿರುದ್ಧ ಮತಪ್ರದರ್ಶನ ನಡೆಸಿದರು. ಪಾಲಿಟ್‌ಬ್ಯೂರೋ ಸದಸ್ಯ ಕಾ॥ ಹರ್ಕಿಶನ್ ಸಿಂಗ್ ಸುರ್ಜಿತ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸೋವಿಯತ್ ಒಕ್ಕೂಟ ಜಿನೇವಾ ಒಪ್ಪಂದದ ಒಂದಂಶವನ್ನು

▶ ಪುಟ 8

ದೇಶಕ್ಕೆ ಆಘಾತ ತಂದ ಭೋಪಾಲ ಶರಣಾಗತಿ

ಭೋಪಾಲ ಅನಿಲ ದುರಂತಕ್ಕೊಳಗಾದವರಿಗೆ ಪರಿಹಾರ ಪಡೆಯುವ ನಾಲ್ಕು ವರ್ಷಗಳ ಕಾನೂನು ಸಮರ "ಪೂರ್ಣವಾಗಿ ಮತ್ತು ಅಂತಿಮವಾಗಿ" ಇತ್ಯರ್ಥಗೊಂಡಿರುವ ರೀತಿಯಿಂದ ಎಲ್ಲಾ ದೇಶಪ್ರೇಮೀ ಶಕ್ತಿಗಳಿಗೆ ತೀವ್ರ ಆಘಾತವಾಗಿದೆ. ಬಹುರಾಷ್ಟ್ರೀಯ ಕಂಪೆನಿ ಯೂನಿಯನ್ ಕಾರ್ಬೈಡ್ ಎದುರು ಭಾರತ ಸರ್ಕಾರ ಮೊಣಕಾಲೂರಿದೆ ಎಂದು ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಈ "ಇತ್ಯರ್ಥ"ವನ್ನು ಖಂಡಿಸಿದೆ.

ಭಾರತ ಸರ್ಕಾರ ಮೂರು ಶತಕೋಟಿ ಡಾಲರುಗಳ ಪರಿಹಾರ ಬೇಕೆಂಬ ಆರಂಭದ ಒತ್ತಾಯದಿಂದ ಸರ್ರನೆ ಕೆಳಗಿಳಿದು ಕೇವಲ 47 ಕೋಟಿ ಡಾಲರುಗಳ ಪರಿಹಾರಕ್ಕೆ ಒಪ್ಪಿದೆ. ಇದು ತೀರಾ ಅಲ್ಪ ಹಾಗೂ ಏನೂ ಸಾಲದ ಪರಿಹಾರ ಎಂದು ಸಿ.ಪಿ.ಐ.(ಎಂ) ಖಂಡಿಸಿದೆ.

ಅಧಿಕೃತ ದಾಖಲೆಗಳ ಪ್ರಕಾರವೇ 3332 ಮಂದಿ ದುರುಂತದಲ್ಲಿ ಮಡಿದರು. 60 ಸಾವಿರಕ್ಕೂ ಹೆಚ್ಚು ಮಂದಿ ದುರಂತದ ನಾಲ್ಕು ವರ್ಷಗಳ ನಂತರವೂ ವಿಷಾನಿಲ ಸೇವನೆಯ ದುಷ್ಪರಿಣಾಮಗಳಿಂದ ನರಳುತ್ತಿದ್ದಾರೆ. ದುರಂತದಲ್ಲಿ ಸಾವಿಗೀಡದವರಿಗೆ ಪರಿಹಾರ ತೆತ್ತ ಮೇಲೆ ಬದುಕುಳಿದು ನರಳುತ್ತಿರುವ ಪ್ರತಿಯೊಬ್ಬರಿಗೆ ದೊರೆಯುವ ಪರಿಹಾರ ಕೇವಲ ಐದು ಸಾವಿರ ರೂ. ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ಈ ಇತ್ಯರ್ಥದ ಮೊತ್ತವನ್ನು ಯಾವ ಆಧಾರದ ಮೇಲೆ ಲೆಕ್ಕ ಹಾಕಲಾಯಿತು ಎಂದು ಸುಪ್ರಿಂಕೋರ್ಟ್ ವಿಷದಪಡಿಸಿಲ್ಲ. ಹಿಂದಿನ ಮಾತುಕತೆಗಳಲ್ಲಿ ನ್ಯಾಯಾಲಯದ ಹೊರಗಡೆ 65 0 ಕೋಟಿ ರೂ.ಗಳ ಪರಿಹಾರವನ್ನು ಭಾರತ ಸರ್ಕಾರ ತಿರಸ್ಕರಿಸಿತ್ತು ಎಂದು ಎಲ್ಲರಿಗೂ ತಿಳಿದಿದೆ. ಈಗ ಅದೇ ಸರ್ಕಾರ ಇದು ನ್ಯಾಯಪೂರ್ಣ ಇತ್ಯರ್ಥ ಎಂದು ಪರಿಗಣಿಸಿ ಈ ಬಗ್ಗೆ ಸಿವಿಲ್, ಕ್ರಿಮಿನಲ್ ಕೋರ್ಟುಗಳಲ್ಲಿನ ದಾವೆಗಳನ್ನೆಲ್ಲಾ ವಾಪಾಸುಪಡೆದಿರುವುದರ ಬಗ್ಗೆ ಸಿ.ಪಿ.ಐ.(ಎಂ) ಅಚ್ಚರಿ ವ್ಯಕ್ತಪಡಿಸಿದೆ.

ಇದು ಸರ್ಕಾರ ತನ್ನನ್ನೇ ಮಾರಿಕೊಂಡ ಇತ್ಯರ್ಥ ಎಂಬ ಗುಮಾನಿಯನ್ನು ಬಲಗೊಳಿಸುವ ಇನ್ನೊಂದು ಅಂಶವೆಂದರೆ ಯೂನಿಯನ್ ಕಾರ್ಬೈಡ್ ಉಂಟು ಮಾಡಿದ ಅನಾಹುತವನ್ನು ದಂಡನೀಯ ಅಪರಾಧವೆಂದು ಸ್ಪಷ್ಟವಾಗಿ ಹೇಳಲಾಗಿಲ್ಲ. ಇತ್ಯರ್ಥದ ಶರತ್ತುಗಳನ್ನು ಕೂಡಾ ಸಾರ್ವಜನಿಕರೆದುರು ಇಟ್ಟಿಲ್ಲ.

ಇದು ಪೂರ್ಣವಾಗಿ ಶರಣಾಗತಿ ಒಪ್ಪಿಕೊಂಡ ಇತ್ಯರ್ಥ ಎಂದು ಸಿ.ಪಿ.ಐ.(ಎಂ) ಪರಿಗಣಿಸುವುದಾಗಿ ತಿಳಿಸಿರುವ ಹೇಳಿಕೆ ದುರಂತಕ್ಕೊಳಗಾದವರಿಗೆ ಸರಿಯಾದ ಮರುವಸತಿ ಮತ್ತು ಪರಿಹಾರ ಒದಗಿಸುವ ಜವಾಬ್ದಾರಿಯಿಂದ ಸರ್ಕಾರ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಎಚ್ಚರಿಸಿದೆ. ಭಾರತ ಸರ್ಕಾರದ ಈ ಅತ್ಯಂತ ಖಂಡನಾರ್ಹ ಶರಣಾಗತಿಯ ವಿರುದ್ಧ ಪ್ರತಿಭಟಿಸಬೇಕೆಂದು ಪಾಲಿಟ್‌ಬ್ಯೂರೋ ಭಾರತದ ಜನತೆಗೆ ಕರೆ ನೀಡಿದೆ.



ಮುಖ್ಯಮಂತ್ರಿಗಳ ಸಭೆಯಲ್ಲಿ ಗಮನಾರ್ಹ ಗೆಲುವು

ಫೆಬ್ರವರಿ 9 ಮತ್ತು 10ರಂದು ದೆಹಲಿಯಲ್ಲಿ ನಡೆದ ಮುಖ್ಯಮಂತ್ರಿಗಳ ಸಭೆಯಲ್ಲಿ ರಾಜ್ಯ ಸರ್ಕಾರಗಳ ಸಂಪನ್ಮೂಲಗಳನ್ನು ಕಸಿದುಕೊಳ್ಳುವ ಕೇಂದ್ರದ ಪ್ರಯತ್ನಗಳ ವಿರುದ್ಧ ಸೀಮಿತ ಯಶಸ್ಸುಗಳಿಸಲು ಸಾಧ್ಯವಾಗಿದೆ. ಇದು ಸಾಧ್ಯವಾದದ್ದು ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳ ತೀವ್ರ ಟೀಕೆಗಳಿಂದಾಗಿ, ಕಾಂಗ್ರೆ ಮುಖ್ಯಮಂತ್ರಿಗಳು ಅವರಿಗೆ ಇದಕ್ಕಾಗಿ ಋಣಿ ಯಾಗಿರಬೇಕು.

ಈ ಸಭೆಯನ್ನು ಕೇಂದ್ರ ಸರ್ಕಾರ ಕರೆದ ಉದ್ದೇಶ ಇನ್ನೂ ಹಲವಾರು ಸರಕುಗಳನ್ನು ಕೇಂದ್ರ ಅಬಕಾರಿಗೆ ಬಾಧ್ಯವಾಗುವ ಪಟ್ಟಿಯಲ್ಲಿ ಸೇರಿಸುವಂತೆ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ತರುವುದು. ಈ ಪ್ರಸ್ತಾಪ ಮಂಜೂರಾಗಿದ್ದರೆ ರಾಜ್ಯಗಳಿಗೆ ಕೋಟ್ಯಾಂತರ ರೂಪಾಯಿಗಳ ನಷ್ಟ ಆಗುತ್ತಿತ್ತು-ಕಾಂಗ್ರೆ ರಾಜ್ಯಗಳಿಗೂ, ಇತರ ರಾಜ್ಯಗಳಿಗೂ. ಕಾಂಗ್ರೆಯೇತರ ಮುಖ್ಯಮಂತ್ರಿಗಳು ಇದನ್ನು ತೀವ್ರವಾಗಿ ವಿರೋಧಿಸಿದರು. ಕಾಂಗ್ರೆ ಮುಖ್ಯಮಂತ್ರಿಗಳ ಭಾವನೆಗಳೂ ಇದೇ ರೀತಿ ಇದ್ದರೂ ಅದನ್ನು ಬಲವಾಗಿ ವ್ಯಕ್ತಗೊಳಿಸುವ ಸ್ಥಿತಿಯಲ್ಲಿ ಅವರಿರಲಿಲ್ಲ. ಆದರೂ ಕೊನೆಗೆ ಹಗುರ ಮಾತುಗಳಲ್ಲಾದರೂ ಅವರೂ ಈ ಪ್ರಸ್ತಾಪವನ್ನು ವಿರೋಧಿಸಿದರು. ಕಾಂಗ್ರೆಯೇತರ ಮುಖ್ಯಮಂತ್ರಿಗಳ ತೀವ್ರ ಟೀಕೆ ಮತ್ತು ಕಾಂಗ್ರೆ ಮುಖ್ಯಮಂತ್ರಿಗಳ ಹಗುರ ಟೀಕೆಯಿಂದಾಗಿ ಕೇಂದ್ರ ಸರ್ಕಾರ ಅದನ್ನು ಕೈಬಿಡಬೇಕಾಯಿತು.

ತೀವ್ರ ಹೋರಾಟಕ್ಕೆ ಕಾರಣವಾದ ಇನ್ನೊಂದು ವಿಷಯವೆಂದರೆ ಕನ್ಸೈನ್‌ಮೆಂಟ್ ಟ್ಯಾಕ್ಸ್ (ಸರಕು ರವಾನೆ ತೆರಿಗೆ). ಕೇಂದ್ರ ಸರ್ಕಾರ ಇದರಲ್ಲೂ ಹಿಂದೆ ಸರಿಯಬೇಕಾಗಿ ಬಂತು. ಈ ಪ್ರಸ್ತಾಪವನ್ನು ಹಲವು ವರ್ಷಗಳ ಹಿಂದೆಯೇ ಒಪ್ಪಲಾಗಿತ್ತು. ಆದರೂ ವ್ಯಾಪಾರೀ ವಲಯಗಳ ವಿಪರೀತ ಒತ್ತಡದಿಂದಾಗಿ

▶ ಪುಟ 8

ಪಂಚಾಯತ್ ರಾಜ್ಯ ಎರಡು ವಿಧಾನಗಳು

ವಿಕೇಂದ್ರಿಕರಣ, ಪಂಚಾಯತೀ ರಾಜ್ಯ ಇತ್ತೀಚೆಗೆ ಕೇಂದ್ರಿಕರಣದತ್ತ ರಭಸದಿಂದ ಧಾವಿಸುತ್ತಿರುವ ಪ್ರಧಾನ ಮಂತ್ರಿಗಳ ಪ್ರಿಯಮಂತ್ರವಾಗಿದೆ. ಕಾಂಗ್ರೆಸ್(ಐ)ನ ಈ ಮಂತ್ರದ ನಿಜವಾದ ಉದ್ದೇಶವೇನು ಎಂಬುದನ್ನು ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ "ವಿಕೇಂದ್ರಿಕರಣವೋ, ಕೇಂದ್ರಿಕರಣವೋ" ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಲೇಖನದಲ್ಲಿ ಪಶ್ಚಿಮಬಂಗಾಳದ ಎಕರಂಗ ಸರ್ಕಾರ ಕಳೆದ ಒಂದು ದಶಕದಲ್ಲಿ ಕಾರ್ಯತಃ ಮಾಡಿ ತೋರಿದ ಪಂಚಾಯತೀ ರಾಜ್ಯದ ಪರ್ಯಾಯ ವಿಧಾನದ ಬಗ್ಗೆ ಕಾಂ. ಜ್ಯೋತಿ ಬಸು ವಿವರಿಸುತ್ತಾರೆ.

ಪಂಚಾಯತ್ ರಾಜ್ ಸಾಧನೆಗೆ ಎರಡು ವಿಧಾನಗಳಿವೆ. ಇವು ಗ್ರಾಮಾಂತರ ಅಭಿವೃದ್ಧಿ ಯೋಜನೆಯ ಎರಡು ಬದಲಿ ವಿಧಾನಗಳೂ ಹೌದು.

ಗ್ರಾಮಾಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಒಂದು ವಿಧಾನವೆಂದರೆ, ಸದ್ಯದ ಭೂಮಾಲೀಕತ್ವ ಹಂಚಿಕೆ ವಿಷಯದಲ್ಲಿನ ಅಸಮತೆಯನ್ನು ಒಪ್ಪುವುದು. ಅಂದರೆ ಭೂಸುಧಾರಣೆಗೆ ಸಂಬಂಧಿಸಿದಂತೆ ಯಾವುದೇ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳದೇ ಇರುವುದು. ಈ ವಿಧಾನವನ್ನು ಅನುಸರಿಸಿದ್ದೇ ಆದರೆ ನಾವು ಈ ಬಗೆಗಿನ ಕೆಲವು ಉತ್ತಮ ರೀತಿಯ ಹೇಳಿಕೆಗಳನ್ನು ನೀಡಿರುವುದನ್ನು ಬಿಟ್ಟರೆ ಭೂಹಿಡುವಳಿಯ ಅಸಮರ್ಪಕ ಹಂಚಿಕೆಯನ್ನು ತಪ್ಪಿಸುವ ಯಾವುದೇ ರೀತಿಯ ತೀವ್ರ ಕ್ರಮಗಳನ್ನು ಕೈಗೊಂಡಿಲ್ಲ ಎನ್ನುವ ರಾಷ್ಟ್ರೀಯ ಚಿತ್ರಣದ ಸಮೀಪಕ್ಕೆ ಬರುತ್ತೇವೆ. ಈ ಅಂಶ ಯೋಜನಾ ಆಯೋಗ ತನ್ನ ಏಳನೆಯ ಯೋಜನೆಯ ಮಧ್ಯಾವಧಿಅಂದಾಜಿನಲ್ಲೂ ಸಹ ವ್ಯಕ್ತಪಡಿಸಿದೆ. ಇತ್ತೀಚಿನ ಸಮೀಕ್ಷೆಯೊಂದರ ಅನ್ವಯ ಇಡೀ ರಾಷ್ಟ್ರದಲ್ಲಿರುವ ಭೂಕ್ಷೇತ್ರದಲ್ಲಿ ಕೇವಲ 28.8ರಷ್ಟು ಪ್ರದೇಶ ಸಣ್ಣ ಮತ್ತು ಅತಿ ಸಣ್ಣ ರೈತರ ಮಾಲೀಕತ್ವಕ್ಕೆ ಸೇರಿದೆ. ಉಳಿದ ಶೇಕಡಾ 71.2 ಜಮೀನಿನ ಮಾಲೀಕತ್ವ ದೊಡ್ಡ ರೈತರ ಕೈಲಿದೆ (ಮಧ್ಯಕಾಲೀನ ಅಂದಾಜಿನ ಎರಡನೇ ಅಧ್ಯಾಯ). ಇದರಿಂದಾಗಿ ಕೃಷಿರಂಗದ ಅಭಿವೃದ್ಧಿ ಸಿರಿವಂತ ರೈತರನ್ನೇ ಅವಲಂಬಿಸಿದೆ ಎಂದಾಯಿತು. ಅಷ್ಟೇ ಅಲ್ಲ, ಹೆಚ್ಚು ಬಂಡವಾಳ ಮತ್ತು ಕಡಿಮೆ ಮಂದಿ ಕಾರ್ಮಿಕರನ್ನು ಬಯಸುವ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಇದರಿಂದ ಕೃಷಿ ಕಾರ್ಮಿಕರ ನಿರುದ್ಯೋಗ ಸಮಸ್ಯೆಗೆ ದಾರಿ ಮಾಡಿಕೊಟ್ಟಿದೆ. ಶ್ರೀಸಾಮಾನ್ಯರ ಕೊಳ್ಳುವ ಶಕ್ತಿ ಕಡಿಮೆಯಾಗಲು ಕಾರಣವಾಗಿದೆ.

ಅಸಮರ್ಪಕ ವಿತರಣೆ

ಯೋಜನೆಯ ಮೂಲಭೂತ, ಆದ್ಯತೆಗಳು ಶ್ರೀಸಾಮಾನ್ಯನ ಪರವಾಗಿಲ್ಲದಿರುವಂತಹ ವಿಧಾನ ಇದಾಗಿದೆ. ಈ ಆದ್ಯತೆಗಳು ಗ್ರಾಮಾಂತರ ಪ್ರದೇಶದ ಪ್ರತಿಶತ ಹತ್ತರಷ್ಟರ ಶ್ರೀಮಂತ ಕುಟುಂಬಗಳ ಸುತ್ತ ಕೇಂದ್ರಿಕೃತವಾಗಿದೆ. ಇಂತಹ ಸನ್ನಿವೇಶದಲ್ಲಿ ಭೂಸುಧಾರಣೆಯಿಲ್ಲದೆ ಅಂತೆಯೇ ಇದೇ ಹಿನ್ನೆಲೆಯಲ್ಲಿನ ಉತ್ಪಾದಿತ ವಸ್ತುಗಳ ಅಸಮ ವಿತರಣೆಯಿಂದಾಗಿ ಪಂಚಾಯತ್ ಚುನಾವಣೆಗಳನ್ನು ಮುಂದೂಡಲು ಸನ್ನಾಹ ನಡೆಯುವುದು ಅಥವಾ ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾವಣೆಗಳು ನಡೆಯವು. (ಎಡರಂಗ ಸರ್ಕಾರ 1970ರಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಮುಂಚಿನ 15 ವರ್ಷಗಳ ಕಾಲ ಪಂಚಾಯತ್ ಚುನಾವಣೆಗಳು ನಡೆಯಲೇ ಇಲ್ಲ.) ಒಂದು ವೇಳೆ ಚುನಾವಣೆಗಳು ನಡೆದದ್ದೇ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕೇವಲ ಸಿರಿವಂತ ವರ್ಗದವರು ಮಾತ್ರ ಆಯ್ಕೆಯಾಗಿ ಬರುತ್ತಾರೆ. ಈ ದೃಷ್ಟಿಯಲ್ಲಿ, ಗ್ರಾಮಾಂತರ ಪ್ರದೇಶಗಳ ಬಡವರ ಪ್ರಾತಿನಿಧ್ಯವಿಲ್ಲದೆ ಪಂಚಾಯತ್ ರಾಜ್ಯ ತನ್ನ ನಿಜವಾದ ಅರ್ಥವನ್ನು ಕಳೆದುಕೊಳ್ಳುವುದು. ಅತ್ಯಂತ ಕೆಳ ಮಟ್ಟದ ವ್ಯವಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಶ್ರೀಸಾಮಾನ್ಯರು ಪಾಲ್ಗೊಳ್ಳದಂತಾಗುವುದು. ಅತ್ಯಂತ ಕೆಳ ಹಂತದಲ್ಲಿ ವಿಕೇಂದ್ರಿಕರಣ ಸಾಧನೆ ಕಷ್ಟಸಾಧ್ಯದ ಮಾತಾಗುವುದು. ಜನತೆಯ ಸಕ್ರಿಯ ಪಾತ್ರವಿಲ್ಲದೆ ಹೋದರೆ ಪಂಚಾಯತ್ ರಾಜ್ಯ ಬರವಣಿಗೆಯಲ್ಲಷ್ಟೇ ಉಳಿಯುತ್ತದೆ.

ಬದಲೀ ವಿಧಾನ ಭೂಸುಧಾರಣೆಗಳು ಆರಂಭವಾಗುತ್ತದೆ.

ಪಶ್ಚಿಮ ಬಂಗಾಳದಲ್ಲಿ ಕಳೆದ ಸುಮಾರು 11ವರ್ಷಗಳಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ ಬದಲಿ ವಿಧಾನವನ್ನು ಅನುಸರಿಸಲಾಗಿದೆ. ನಿಯಮಿತ ಸಾಮಾಜಿಕ-ಆರ್ಥಿಕ ಚೌಕಟ್ಟಿನಲ್ಲಿ, ಲಭ್ಯವಿರುವ ಭೂಮಿಯನ್ನು ಮತ್ತು ಉತ್ಪಾದನೆಗೆ ನೆರವಾಗುವ ಆಸ್ತಿಯನ್ನು ಸಾರ್ಥಕವಾಗಿ ವಿತರಣೆ ಮಾಡುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಇದು ಭೂಸುಧಾರಣಾ ಕಾರ್ಯಕ್ರಮದಿಂದ ಆರಂಭವಾಗುತ್ತದೆ.

ಭೂಸುಧಾರಣೆಯೆಂದರೆ ಕೇವಲ ಭೂಮಿಯನ್ನು ಬಡವರಿಗೆ ದಾನ ಮಾಡುವುದೆಂದಲ್ಲ. ಅದು ಕೃಷಿ ಕಾರ್ಮಿಕರ ಅತ್ಯುತ್ತಮ ಕಾರ್ಯದಕ್ಷತೆಯ ಆಧಾರದ ಮೇಲೆ ಕೈಗೊಂಡ ಒಂದು ಉತ್ಪಾದನಾ ಚಟುವಟಿಕೆ. ಭೂಸುಧಾರಣೆ ವಿಷಯದಲ್ಲಿ ಪಶ್ಚಿಮಬಂಗಾಳ ರಾಷ್ಟ್ರದಲ್ಲೇ ಬಹಳ ಪ್ರಗತಿಯನ್ನು ಸಾಧಿಸಿದೆ. ಇಡೀ ಭಾರತದಲ್ಲಿ ಈವರೆಗೆ ವಿತರಣೆಯಾಗಿರುವ ಒಟ್ಟು ಭೂಮಿಯಲ್ಲಿ 20% ಪಶ್ಚಿಮ ಬಂಗಾಳದಲ್ಲಿದೆ. ರಾಷ್ಟ್ರದಲ್ಲಿರುವ ಒಟ್ಟು ಕೃಷಿ ಕ್ಷೇತ್ರದಲ್ಲಿ ಪಶ್ಚಿಮ ಬಂಗಾಳದ ಪಾಲು ಕೇವಲ ಶೇಕಡಾ 4ರಷ್ಟಿದ್ದು ಭೂ ವಿತರಣೆ ಕಾರ್ಯದಲ್ಲಿ ಯಶಸ್ಸು ಬಹು ಮಹತ್ವದ್ದಾಗಿದೆ. ರಾಷ್ಟ್ರೀಯ ಮಾದರಿ ಸಮೀಕ್ಷಾ ವರದಿಯ ಪ್ರಕಾರ ಯಶಸ್ವೀ ಭೂಸುಧಾರಣೆಯಿಂದಾಗಿ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇಂದು ಒಟ್ಟು ಭೂಮಿಯ ಶೇಕಡಾ 60ರಷ್ಟು ಜಮೀನು ಸಣ್ಣ ಮತ್ತು ಅತಿ ಸಣ್ಣ ರೈತರ ಮಾಲೀಕತ್ವಕ್ಕೆ ಬಂದಿದೆ. ರಾಷ್ಟ್ರಮಟ್ಟದಲ್ಲಿ, ಈ ಸಂಖ್ಯೆ ಶೇಕಡಾ 28.8ರಷ್ಟಿದೆ ಎಂದು ತಿಳಿಸಿದೆ. ಬಡ ಕೃಷಿ ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು ಕೃಷಿ ಯೋಜನೆಗಳನ್ನು ರೂಪಿಸುವ ಕಾಲದ ಸೃಷ್ಟಿಯಾಗಿದೆ.

ಸೂಕ್ತ ತಂತ್ರಜ್ಞಾನ ಬಳಕೆ

ಭೂಸುಧಾರಣಾ ಕಾರ್ಯಕ್ರಮವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲು ನೀರಾವರಿ ಕೃಷಿ ಉಪಕರಣಗಳು, ರಾಸಾಯನಿಕ ಗೊಬ್ಬರ, ಗೊಬ್ಬರ, ಸಾಲದ ನೆರವು, ಮಾರುಕಟ್ಟೆ ನೆರವು ಮತ್ತಿತರ ಭೂಮಿಯೇತರ ಮೂಲ ವಸ್ತುಗಳನ್ನು ರೈತರಿಗೆ ಒದಗಿಸುವುದು ಅತ್ಯಗತ್ಯ. ಈ ವಿವಿಧ ಭೂಮಿಯೇತರ ಮೂಲ ವಸ್ತುಗಳನ್ನು ದೊರಕಿಸುವುದರಲ್ಲೂ ಸೂಕ್ತವಾದ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವುದು ಅಗತ್ಯ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಮಾನವಸಂಪನ್ಮೂಲ ಲಭ್ಯವಾಗಿದೆ. ಸ್ಥಳೀಯ ಸಂಪನ್ಮೂಲಗಳೂ ಸಾಕಷ್ಟಿವೆ. ಇವುಗಳನ್ನು ಬಳಸಿಕೊಳ್ಳಲು ಸಾಮಾಜಿಕವಾಗಿ ಸೂಕ್ತವಾಗಬಲ್ಲ ತಂತ್ರಜ್ಞಾನವನ್ನು ಆಯ್ದುಕೊಳ್ಳಬೇಕು. ಇಂತಹ ಆಯ್ಕೆ ನಿರುದ್ಯೋಗ ಸಮಸ್ಯೆಗೆ ಉತ್ತಮ ಪರಿಹಾರ ದೊರಕಿಸುತ್ತದೆ. ಅಷ್ಟೇ ಅಲ್ಲ; ಶ್ರೀಸಾಮಾನ್ಯನ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬಲ್ಲದು. ಸೂಕ್ತ ತಂತ್ರಜ್ಞಾನವನ್ನು ಗಮನದಲ್ಲಿಟ್ಟುಕೊಂಡು ಪಶ್ಚಿಮ ಬಂಗಾಳ ರಾಜ್ಯದಲ್ಲಿ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇತ್ತೀಚೆಗೆ ಸಣ್ಣ ನೀರಾವರಿ ಯೋಜನೆಗಳ ಮೂಲಕ ಹೆಚ್ಚು ಹೆಚ್ಚು ಕೃಷಿ ಪ್ರದೇಶಗಳಿಗೆ ನೀರಿನ ಸೌಲಭ್ಯವನ್ನು ಒದಗಿಸಲಾಗಿದೆ. ಕ್ಷೇತ್ರ ಕಾಲುವೆ ಹಾಗೂ ಭಾರಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ಭೂ ಸುಧಾರಣಾ ಕ್ರಮಗಳು, ನೀರಾವರಿ ಹಾಗೂ ಭೂಮಿಯೇತರ ಅತ್ಯವಶ್ಯಕಗಳಲ್ಲೊಂದಾದ ರಾಸಾಯನಿಕ ಗೊಬ್ಬರ ಸರಬರಾಜು ವಿಷಯಗಳಲ್ಲಿ ಕೈಗೊಂಡ ವಿವಿಧ ಕ್ರಮಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ರಾಜ್ಯದ ಕೃಷಿ ಉತ್ಪಾದನೆ ಸಾಕಷ್ಟು ಏರಿದೆ. 1976-77ರಲ್ಲಿ ರಾಜ್ಯದ ಆಹಾರ ಧಾನ್ಯಗಳ ಉತ್ಪಾದನಾ ಪ್ರಮಾಣ 74.5 3 ಲಕ್ಷ ಟನ್ನುಗಳಷ್ಟಿದ್ದು ಇದು 1986-87ರ ವೇಳೆಗೆ 96.26 ಲಕ್ಷ ಟನ್‌ಗಳಿಗೇರಿದೆ. ಈ ರಾಜ್ಯದಲ್ಲಿ ಇದೊಂದು ಮಹತ್ವದ ಸಾಧನೆಯಷ್ಟೇ ಅಲ್ಲ ಆ ವರ್ಷದಲ್ಲಿ ಅಕ್ಕಿ ಬೆಳೆಯುವ ರಾಜ್ಯಗಳಲ್ಲೊಂದು ಎಂದು ದಾಖಲೆಯಾಗಿದೆ. 1986-87ರಲ್ಲಿ ಪಶ್ಚಿಮ ಬಂಗಾಳದಲ್ಲಿ 84.63 ಲಕ್ಷ ಟನ್ ಅಕ್ಕಿಯನ್ನು ಉತ್ಪಾದಿಸಲಾಗುತ್ತಿದ್ದು, ಇದು ರಾಷ್ಟ್ರದಲ್ಲಿ ಅಕ್ಕಿ ಬೆಳೆಯುವ ರಾಜ್ಯಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ್ದಾಗಿದೆ. 1987-88ರಲ್ಲೂ ರಾಜ್ಯದ ಒಟ್ಟು 17 ಜಿಲ್ಲೆಗಳ ಪೈಕಿ 12 ಜಿಲ್ಲೆಗಳು ನೆರೆ ಹಾವಳಿ ಕಷ್ಟ ನಷ್ಟಗಳನ್ನನುಭವಿಸಿದರೂ ಆಹಾರ ಧಾನ್ಯ ಉತ್ಪಾದನೆ 102ಲಕ್ಷ ಟನ್‌ಗಳಿಗೇರಿದ್ದು ಇದೊಂದು ದಾಖಲೆಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಉತ್ಪಾದನಾ ಪ್ರಮಾಣ ಏರಿದಂತೆ ಕೃಷಿ ಕಾರ್ಮಿಕರ ಸರಾಸರಿ ಕೂಲಿ ದರವು ಏರುತ್ತಿದೆ. 1976-77ರಲ್ಲಿ ಕೃಷಿ ಕಾರ್ಮಿಕರ ನಗದು ಮತ್ತು ಧಾನ್ಯ ರೂಪದಲ್ಲಿನ ದಿನಕೂಲಿ 5 ರೂ. 60 ಪೈಸೆಯಷ್ಟಿದ್ದು ಇತ್ತೀಚೆಗೆ ಅದು 14 ರೂ.ಗಳಿಗಿಂತಲೂ ಹೆಚ್ಚಿದೆ. ರಾಜ್ಯದ ದಕ್ಷಿಣ ಭಾಗದ ಕೆಲವು ಜಿಲ್ಲೆಗಳಲ್ಲಿ ಸರಾಸರಿ ಕೂಲಿ ದರ 20 ರೂ.ಗಳಷ್ಟಿದೆ.

ಗುಡಿ ಕೈಗಾರಿಕೆಗಳ ಬೆಳವಣಿಗೆ

ಗ್ರಾಮಾಂತರ ಪ್ರದೇಶಗಳಲ್ಲಿನ ಕಾರ್ಮಿಕರು ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ನೆರವಾಗುವ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದರಿಂದಾಗಿ ಗ್ರಾಮೀಣ ಜನತೆಯ ಕೊಳ್ಳುವ ಶಕ್ತಿಯೂ ಹೆಚ್ಚಿದೆ. ಅಷ್ಟೇ ಅಲ್ಲದೆ ಈ ಪ್ರದೇಶಗಳಲ್ಲಿ ಕೃಷಿಯನ್ನಾಧರಿಸಿದ ಗುಡಿ ಮತ್ತು ಸಣ್ಣ ಕೈಗಾರಿಕೆಗಳು ಬೆಳೆಯಲು ನೆರವು ದೊರೆದಂತಾಗಿದೆ. ಕೈಮಗ್ಗ ವಸ್ತುಗಳ ಉತ್ಪಾದನೆಯೂ ಏರಿದೆ. ಕಳೆದ 10ವರ್ಷಗಳಲ್ಲಿ ಸಣ್ಣ ಕೈಗಾರಿಕಾ ಘಟಕಗಳ ದಾಖಲಾತಿಯಲ್ಲಿ ಮಹತ್ವದ ಹೆಚ್ಚಳ ಕಂಡುಬಂದಿದೆ. 1976-77ರಲ್ಲಿ ಇಡೀ ರಾಜ್ಯದಲ್ಲಿ 1ಲಕ್ಷಕ್ಕಿಂತಲೂ ಕಡಿಮೆ ಇದ್ದ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ಇಂದು 2.5 ಲಕ್ಷಗಳಿಗೇರಿದೆ. ಇತ್ತೀಚಿನ ವರ್ಷಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ಪ್ರತಿವರ್ಷ ಸರಾಸರಿ 14,000 ಹೊಸ ಘಟಕಗಳು ಕಾರ್ಯಾರಂಭ ಮಾಡತೊಡಗಿವೆ. ಈ ಹೊಸ ಘಟಕಗಳ ಸ್ಥಾಪನೆಯಿಂದಾಗಿ ಪ್ರತಿವರ್ಷ 80ಸಾವಿರ ಮಂದಿ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ದೊರೆಯುತ್ತಿದೆ. ಸಣ್ಣ ಕೈಗಾರಿಕಾ ಪ್ರಗತಿಯಷ್ಟೇ ಅಲ್ಲದೆ ಕೈಮಗ್ಗ ಉದ್ಯಮವೂ ಗಣನೀಯವಾಗಿ ಬೆಳೆಯುತ್ತಿದೆ. 1976-77ರಲ್ಲಿ ಕೈಮಗ್ಗ ಕ್ಷೇತ್ರದಲ್ಲಿ ಬಟ್ಟೆ ಉತ್ಪಾದನೆ ಕೇವಲ 20 ಕೋಟಿ ಮೀಟರ್‌ಗಳಿದ್ದು 1987-88ರ ವೇಳೆಗೆ 40 ಕೋಟಿ ಮೀಟರ್‌ಗಳಿಗೇರಿ ಉತ್ಪಾದನಾ ಪ್ರಮಾಣ ದ್ವಿಗುಣಗೊಂಡಿದೆ.

ಯೋಜನೆಯಲ್ಲಿನ ಆದ್ಯತೆಗಳನ್ನು ಶ್ರೀಸಾಮಾನ್ಯರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಿದರೆ ಅದರಲ್ಲೂ ಭೂಸುಧಾರಣೆ, ಉದ್ಯೋಗಾವಕಾಶಗಳನ್ನು ಹೆಚ್ಚಿಸುವಂಥಹ ತಂತ್ರಜ್ಞಾನದ ಬಳಕೆ ಶ್ರೀಸಾಮಾನ್ಯರ ಕೊಳ್ಳುವ ಶಕ್ತಿಯ ವರ್ಧನೆಗೆ ನೆರವಾಗುವಂತಹ ಸಣ್ಣ ಕೈಗಾರಿಕಾಭಿವೃದ್ಧಿ ಮುಂತಾದವುಗಳ ಕ್ರಮ ಕೈಗೊಂಡರೆ ಜನ ಸಾಮಾನ್ಯರು ಇಂತಹ ಯೋಜನೆಗಳಲ್ಲಿ ವ್ಯವಸ್ಥಿತವಾಗಿ ಪಾಲ್ಗೊಳ್ಳುವ ಮೂಲ ಉದ್ದೇಶ ಸಾಧನೆಯಾಗುವುದು. ಯೋಜನೆಗಳನ್ನು ರೂಪಿಸುವುದು ಹಾಗೂ ಜಾರಿಗೊಳಿಸುವುದರಲ್ಲೂ ಅವರ ನೆರವನ್ನು ಪಡೆದಂತಾಗುವುದು. ಇದೇ ಉದ್ದೇಶದಿಂದ ಪಶ್ಚಿಮಬಂಗಾಳದಲ್ಲಿ 15 ವರ್ಷಗಳಿಂದ ನಿಲ್ಲಿಸಿದ್ದ ಪಂಚಾಯತ್ ಚುನಾವಣೆಗಳನ್ನು ನಮ್ಮ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ 1978ರಲ್ಲಿ ನಡೆಸಲಾಯಿತು. ಆದಾದನಂತರ ಪ್ರತಿ 5 ವರ್ಷಗಳಿಗೊಮ್ಮೆ 1983 ಮತ್ತು ಇತ್ತೀಚೆಗೆ 1988ರಲ್ಲಿ ಪಂಚಾಯತ್ ಚುನಾವಣೆಗಳು ನಡೆದಿದೆ. ಚುನಾಯಿತ ಪ್ರತಿನಿಧಿಗಳಲ್ಲಿ ಸುಮಾರು 8ರಷ್ಟು ಮಂದಿ ಸಣ್ಣ ರೈತರು ಮತ್ತು ಅವರಿಗಿಂತ ಕಡಿಮೆ ಜಮೀನು ಇರುವ ಮಂದಿಯೆಂಬ ಅಂಶ ಚುನಾವಣೆಗಳ ನಂತರ ಸಂಗ್ರಹಿಸಿದ ಮಾಹಿತಿಯಿಂದ ತಿಳಿದುಬಂದಿದೆ.

ಪಂಚಾಯತ್‌ಗಳ ಏರುತ್ತಿರುವ ಹೊಣೆಗಾರಿಕೆ

ನಮ್ಮ ರಾಜ್ಯದಲ್ಲಿ ಬಡವ ಮತ್ತು ದುರ್ಬಲ ವರ್ಗದವರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಪಂಚಾಯತಿಗಳಿಗೆ ಹೆಚ್ಚು ಹೆಚ್ಚು ಜವಾಬ್ದಾರಿಯನ್ನು ವಹಿಸಲಾಗಿದೆ. ಬೇನಾಮಿ ಭೂ ಹಿಡುವಳಿಗಳನ್ನು ಗುರುತಿಸುವುದು, ಅಂತಹ ಭೂಮಿಯನ್ನು ಬಡ ರೈತರಿಗೆ ಹಂಚುವುದು ಇತ್ಯಾದಿ ಕೆಲಸಗಳನ್ನು ಪಂಚಾಯತ್‌ಗಳಿಗೆ ವಹಿಸಿಕೊಡಲಾಗಿತ್ತು. ನಂತರದಲ್ಲಿ ಕೂಲಿಗೆ ಕಾಳು ಕಾರ್ಯಕ್ರಮ ಮತ್ತು ಗ್ರಾಮಾಂತರ ಭೂರಹಿತ ಕಾರ್ಮಿಕರ ಉದ್ಯೋಗ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುವ ಕಾರ್ಯದಲ್ಲೂ ಪಂಚಾಯತಿಗಳ ನೇರ ಸಹಕಾರ ಪಡೆಯಲಾಯಿತು. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಫಲಾನುಭವಿಗಳನ್ನು ಗುರುತಿಸುವುದು, ವಿವಿಧ ಕಾರ್ಯಕ್ರಮಗಳ ಆಯ್ಕೆ ಮುಂತಾದ ಕೆಲಸಗಳನ್ನು ಪಂಚಾಯತ್ ಸಮಿತಿಗಳಿಗೆ ವಹಿಸಿಕೊಡಲಾಯಿತು. ಈ ಕಾರ್ಯದಲ್ಲಿ ಬ್ಲಾಕ್ ಅಭಿವೃದ್ಧಿ ಸಿಬ್ಬಂದಿಯವರ ನೆರವನ್ನು ಅವರಿಗೆ ಒದಗಿಸಲಾಯಿತು. ಜಿಲ್ಲಾ ಗ್ರಾಮಾಂತರ ಅಭಿವೃದ್ಧಿ ಸಂಸ್ಥೆ ಮತ್ತು ಜಿಲ್ಲಾಪರಿಷತ್ ಕಾರ್ಯ ಚಟುವಟಿಕೆಗಳಲ್ಲೂ ಜಿಲ್ಲಾ ಪರಿಷತ್ ಅಧ್ಯಕ್ಷ ಮತ್ತು ಸದಸ್ಯರು ನೇರವಾಗಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಲಾಗಿದೆ. ಇಷ್ಟೇ ಅಲ್ಲದೆ ಬರಗಾಲ ಪೀಡಿತ ಪ್ರದೇಶಗಳ ಅಭಿವೃದ್ಧಿ ಯೋಜನೆ, ಕೃಷಿ ಅಭಿವೃದ್ಧಿಯ 'ಮಿನಿಕಿಟ್' ವಿತರಣಾ ಯೋಜನೆ, ಸಣ್ಣ ನೀರಾವರಿ, ಸಮಾಜ, ಅರಣ್ಯ, ಗ್ರಾಮಾಂತರ ನೀರು ಪೂರೈಕೆ, ಗ್ರಾಮಾಂತರ ವಸತಿ ಸೌಲಭ್ಯ ಮತ್ತಿತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನತಾ ಕಲ್ಯಾಣ ಕಾರ್ಯಕ್ರಮಗಳನ್ನು ಪಂಚಾಯತ್‌ಗಳಿಗೆ ವಹಿಸಿಕೊಡಲಾಗಿದೆ.

ಪಂಚಾಯತಿ ಸಮಿತಿಗಳು ದಿನೇ ದಿನೇ ಏರುತ್ತಿರುವ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿರ್ವಹಿಸಿವೆ. ಅಗತ್ಯವಾದ ಸಿಬ್ಬಂದಿ, ತಾಂತ್ರಿಕ ನೆರವಿಗೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ. ಪಂಚಾಯಿತಿಗಳ ಲೆಕ್ಕಪತ್ರಗಳನ್ನು ಪರಿಶೀಲಿಸುವ ಬಗ್ಗೆ ವ್ಯವಸ್ಥಿತ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೇ ಆಯಾ ಪ್ರದೇಶಗಳಿಗೆ ಅಗತ್ಯವಾದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ವಿಷಯವನ್ನು ಸಾರ್ವಜನಿಕ ಸಭೆಗಳ ಮೂಲಕ ಜನತೆಯೊಂದಿಗೆ ನೇರವಾಗಿ ಚರ್ಚಿಸುವ ಅವಕಾಶವನ್ನೂ ಕಲ್ಪಿಸಲಾಗುತ್ತಿದೆ. ಪಂಚಾಯತಿ ಸಮಿತಿಗಳ ವಾರ್ಷಿಕ ಬಜೆಟನ್ನು ಸಾರ್ವಜನಿಕ ಸಭೆಯಲ್ಲೇ ಮಂಡಿಸಲಾಗುವುದು.

ಯೋಜನೆಯಲ್ಲಿ ಉತ್ತಮ ಸಮನ್ವಯ

ಮೇಲ್ಕಂಡ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ, ಪಂಚಾಯತಿಗಳ ಪಾತ್ರ ಬಹು ಪರಿಣಾಮಕಾರಿಯಾಗಿದೆ. ಭೂಸುಧಾರಣಾ ಕಾರ್ಯಕ್ರಮದಲ್ಲಿ ಪಂಚಾಯತಿ ಮೂಲಕ ಶ್ರೀ ಸಾಮಾನ್ಯನು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿದ್ದರಿಂದಾಗಿ ಈ ಕಾರ್ಯಕ್ರಮ ಯಶಸ್ವಿ ಆಗಿದೆ. ರಾಜ್ಯದಲ್ಲಿ ಕೂಲಿಗೆ ಕಾಳು, ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಭರವಸೆ, ಕಾರ್ಯಕ್ರಮಗಳ ಯಶಸ್ಸಿಗೂ ಪಂಚಾಯತಿಗಳು ಕಾರಣವಾಗಿವೆ. ಯೋಜನಾ ಆಯೋಗದ ಸಮೀಕ್ಷಾ ವರದಿಯೊಂದರಲ್ಲಿ, ಪಂಚಾಯತಿಗಳ ನೆರವು ಯೋಜನೆಗಳ ಸಮನ್ವಯ ಮತ್ತು ಅನುಷ್ಠಾನಗಳಿಗೆ ದೊರೆತಿದೆ ಎಂದು ತಿಳಿಸಿದೆ. ಪಶ್ಚಿಮ ಬಂಗಾಳದಲ್ಲಿನ ಗ್ರಾಮ ಪಂಚಾಯತಿಗಳು ಸಭೆ ಸೇರಿ 'ಗ್ರಾಮಾಂತರ ಪ್ರದೇಶಗಳಿಗೆ ಅಗತ್ಯವಾದ ಕಾರ್ಯ ಯೋಜನೆಗಳನ್ನು ರೂಪಿಸುತ್ತವೆ ಹಾಗೂ ಅತಿ ಅಗತ್ಯವಾದ ಯೋಜನೆಗಳ ಅನುಷ್ಠಾನದ ಬಗ್ಗೆ ನಿರ್ಧಾರವನ್ನು ಕೈಗೊಳ್ಳುತ್ತದೆ' ಎಂಬುದಾಗಿ ಈ ವರದಿ ತಿಳಿಸಿದೆ. ಪಂಚಾಯತಿಗಳು ಜಾರಿಗೊಳಿಸುವ ಯೋಜನೆಗಳಿಗೆ ತಗಲುವ ವೆಚ್ಚವೂ ಸಹ ಕಡಿಮೆ ಪ್ರಮಾಣದಲ್ಲಿರುತ್ತದೆ. ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪಂಚಾಯತ್ ಸಮಿತಿಯ ಸದಸ್ಯರೇ ಪಾಲ್ಗೊಳ್ಳುವುದರಿಂದ ಕಂಟ್ರಾಕ್ಟರ್ ಮತ್ತು ಮೇಲ್ವಿಚಾರಣೆಯ ವಿಷಯದಲ್ಲಿ ತಗಲುವ ವೆಚ್ಚವನ್ನು ಉಳಿಸಬಹುದಾಗಿದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುವುದರಲ್ಲಿ ಪಂಚಾಯತ್ ಸದಸ್ಯರು ಭಾಗವಹಿಸುವುದರಿಂದ ಮಧ್ಯವರ್ತಿಗಳನ್ನು ತಪ್ಪಿಸಬಹುದಾಗಿದೆ. ಸಮಗ್ರ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 'ನಬಾರ್ಡ್' ಇತ್ತೀಚೆಗೆ ನಡೆಸಿದ ಮಾದರಿ ಸಮೀಕ್ಷೆ ಪಶ್ಚಿಮ ಬಂಗಾಳದಲ್ಲಿ ಈ ಕಾರ್ಯಕ್ರಮದ ಫಲಾನುಭವಿಗಳನ್ನು ಗೊತ್ತುಪಡಿಸುವ ವಿಷಯದಲ್ಲಿ ಯಾವುದೇ ತಪ್ಪು ಆಯ್ಕೆ ನಡೆದಿಲ್ಲ, ಬ್ಲಾಕ್ ಸಿಬ್ಬಂದಿ ಮತ್ತು ಗ್ರಾಮ ಪಂಚಾಯತಿಗಳ ಸದಸ್ಯರು ಬಡ ಕುಟುಂಬಗಳನ್ನು ಗುರುತಿಸುವ ಕೆಲಸಕ್ಕೆಗೊಂಡು ಇದರ ಯೋಜನೆಯ ಫಲ ಅರ್ಹ ಕುಟುಂಬಗಳಿಗೆ ದೊರಕಿಸುವುದರಲ್ಲಿ ನೆರವಾಗಿದೆ ಎಂದು ತಿಳಿಸಿದೆ. ಪಂಜಾಬ್ ಬಿಟ್ಟರೆ ಬಡತನ ರೇಖೆಯನ್ನು ದಾಟಿದ ಫಲಾನುಭವಿಗಳ ಸಂಖ್ಯೆ ಪಶ್ಚಿಮಬಂಗಾಳದಲ್ಲಿ ಹೆಚ್ಚು ಎಂದು ವರದಿಯಿಂದ ತಿಳಿದುಬಂದಿದೆ.

ಪಶ್ಚಿಮಬಂಗಾಳ ರಾಜ್ಯದಲ್ಲಿನ ಕಾರ್ಯಾಚರಣೆ ವಿಷಯದಲ್ಲಿ ಪಂಚಾತ್‌ಗಳು ದಾಖಲೆ ಸ್ಥಾಪಿಸಿವೆ. ಈ ಹಿನ್ನೆಲೆಯಲ್ಲಿ 4 ವರ್ಷಗಳ ಹಿಂದೆ ಸಾಮಾನ್ಯ ವ್ಯಕ್ತಿಗಳನ್ನೊಳಗೊಂಡಂತೆ ಅತಿ ಕೆಳ ಹಂತದಲ್ಲಿ ಅಧಿಕಾರ ಮತ್ತು ಸಮನ್ವಯದ ವಿಷಯದಲ್ಲಿ ಹೊಸ ಕ್ರಮವನ್ನು ಕೈಗೊಂಡಿದ್ದೇವೆ. ಜಿಲ್ಲಾ ಮತ್ತು ಬ್ಲಾಕ್ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿ ಮತ್ತು ಬ್ಲಾಕ್ ಯೋಜನಾ ಸಮಿತಿಗಳನ್ನು ರೂಪಿಸಲಾಗಿದೆ. ಪಂಚಾಯತ್ ಮತ್ತು ಇತರೆ ಆಯ್ಕೆಯಾದ ಜನತಾ ಪ್ರತಿನಿಧಿಗಳನ್ನು ಈ ಸಮಿತಿಗಳಲ್ಲಿ ಸೇರಿಸಲಾಗಿದೆ. ಜಿಲ್ಲಾ ಸಮಿತಿಗಳಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಸಭಾಪತಿಯಾಗಿ, ಜಿಲ್ಲಾ ಮ್ಯಾಜಿಸ್ಟ್ರೇಟ್ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಬ್ಲಾಕ್ ಮಟ್ಟದಲ್ಲಿ ಪಂಚಾಯತ್ ಸಭಾಪತಿ ಯೋಜನಾ ಸಮಿತಿಯ ಅಧ್ಯಕ್ಷರಾಗಿದ್ದು ಬ್ಲಾಕ್ ಅಭಿವೃದ್ಧಿ ಅಧಿಕಾರಿ ಬ್ಲಾಕ್ ಯೋಜನಾ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

▶ ಪುಟ ೩

ಕರ್ನಾಟಕ ಪ್ರಾಂತ ರೈತ ಸಂಘ 9ನೇ ಸಮ್ಮೇಳನದತ್ತ

ತಾ॥ 17ರಂದು ತೊಕ್ಕೋಟಿನಲ್ಲಿ ಬೃಹತ್ ಸಾರ್ವಜನಿಕ ಸಭೆ

ಭೂ ಒಡೆತನದ ಹಕ್ಕು ಜ್ಯಾರಿಗೊಳಿಸಲು ಒತ್ತಾಯ

ಮಂಗಳೂರು ತಾಲ್ಲೂಕು ರೈತ ಸಮ್ಮೇಳನವು ತಾ॥ 17-2-89ರಂದು ತೊಕ್ಕೋಟಿನಲ್ಲಿ ಜರುಗಿತು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಬಿ.ಬಾಬು ಪೂಜಾರಿಯವರು ಧ್ವಜಾರೋಹಣ ಮಾಡಿದ ಬಳಿಕ ಹುತಾತ್ಮ ರೈತ ಮುಖಂಡರುಗಳಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಪ್ರತಿನಿಧಿ ಸಭೆಯ ಪ್ರಾರಂಭದಲ್ಲಿ ದ.ಕ. ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ॥ ಕೆ.ಆರ್. ಶ್ರೀಯಾನ್‌ರವರು ಸಮ್ಮೇಳನವನ್ನು ಉದ್ಘಾಟಿಸಿದರು. ಅವರು ದೇಶದ ಜನತೆಗೆ ಆಹಾರವನ್ನೊದಗಿಸಿಕೊಡುವ ರೈತರಿಗೆ ಅವರು ದುಡಿಯುತ್ತಿರುವ ಹೊಲದ ಮೂಲ ಒಡೆತನದ ಹಕ್ಕನ್ನು ಪಡೆಯಲು ಕಾಯಿದೆಯಲ್ಲಿ ತಿದ್ದುಪಡಿ ತರುವಂತಹ ಸರಕಾರವನ್ನು ಒತ್ತಾಯಿಸಲು ರೈತರು ಸಂಘಟಿತ ಚಳುವಳಿ ನಡೆಸಬೇಕೆಂದು ಕರೆಯಿತ್ತರು. ಬಳಿಕ ಕಾರ್ಯದರ್ಶಿ ಕಾ॥ ರಾಮಚಂದ್ರ ಉಚ್ಚಿಲ್ ಕಳೆದ 3 ವರ್ಷಗಳ ಚಟುವಟಿಕೆಯ ವರದಿಯನ್ನು ಪ್ರತಿನಿಧಿ ಸಭೆಗೆ ವಿವರಿಸಿದ ಬಳಿಕ ವರದಿಯ ಮೇಲೆ ಚರ್ಚೆ ನಡೆದು ತಿದ್ದುಪಡಿಯೊಂದಿಗೆ ವರದಿ ಅಂಗೀಕಾರವಾಯಿತು.

ಬಳಿಕ ಪ್ರತಿನಿಧಿ ಸಭೆಯನ್ನುದ್ದೇಶಿಸಿ ಕಾ॥ ರಾಮಚಂದ್ರರಾವ್ ಮಾತನಾಡಿ ರೈತರು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗೆ ಸಂಘಟಿತ ಹೋರಾಟ ನಡೆಸಿದರೆ ಮಾತ್ರ ಸಮಸ್ಯೆ ಪರಿಹಾರವಾದೀತು. ಸರ್ಕಾರಿ ಜಮೀನಿನಲ್ಲಿ ಮನೆ ನಿವೇಶನ ಮಾಡಿಕೊಂಡವರಿಗೆ ಇತರ ಭೂಮಿ ಪಡೆದಿರುವ ರೈತರಿಗೆ ಕೂಡಲೇ ಸ್ವಾಧೀನದ ದಾಖಲೆ ಕೊಡಲು ಚಳುವಳಿ ತೀವ್ರಗೊಳಿಸಲು ಕರೆ ನೀಡಿದರು. ಕಾ॥ ಯು. ಲೋಕಯ್ಯ, ಯು.ಜನಾರ್ಧನ ನ್ಯಾಕ್ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ಸಂಜೆ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾ॥ ಜನಾರ್ಧನ ನ್ಯಾಕ್ ವಹಿಸಿದ್ದರು. ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ ಕಾ॥ ಟಿ.ಯಂ. ರಾಮಯ್ಯಶೆಟ್ಟಿ, ಕೆ.ಆರ್. ಶ್ರೀಯಾನ್,ಬಿ.ಮಾಧವ, ಪಿ.ರಾಮಚಂದ್ರರಾವ್ ರೈತರ ವಿವಿಧ ಸಮಸ್ಯೆಗಳನ್ನು ವಿವರಿಸಿ, ಇದನ್ನು ಪರಿಹರಿಸಲು ಸಂಘಟಿತ ಚಳುವಳಿ ನಡೆಸಬೇಕೆಂದು ಕರೆ ನೀಡಿ ಸಾರ್ವಜನಿಕರ ಬೆಂಬಲ ಕೋರಿದರು.

ಪ್ರತಿನಿಧಿ ಸಭೆಯಲ್ಲಿ ನ್ಯಾಯ ಬೆಲೆಯಲ್ಲಿ ಕನಿಷ್ಠ 30 ಕಿಲೋ ಅಕ್ಕಿ ಪ್ರತಿ ಕಾರ್ಡುದಾರರಿಗೆ ಗ್ರಾಮಾಂತರ ಪ್ರದೇಶದಲ್ಲಿ ಕೊಡಬೇಕೆಂದೂ, ಮನೆ ನಿವೇಶನದಾರರಿಗೆ ಹಕ್ಕು ಪತ್ರ ಕೊಡಬೇಕು, ನಗರಾಸ್ತಿಮಿತಿ ಕಾಯಿದೆಯಲ್ಲಿ ಕೃಷಿ ಭೂಮಿಯನ್ನು ಕಾಯಿದೆಯಿಂದ ಹೊರತುಪಡಿಸುವ ತಿದ್ದುಪಡಿ ತರಬೇಕೆಂದೂ, ಗ್ರಾಮಾಂತರ ಪ್ರದೇಶದಲ್ಲಿರುವ ತೋಡುಗಳ ಹಾಗೂ ಕೆರೆಗಳ ಮಣ್ಣನ್ನು ತೆಗೆದು ಆಳವಡಿಸಬೇಕೆಂದೂ, ರೈತರಿಗೆ ಸಾಲಕ್ಕೆ ಸಬ್ಸಿಡಿ ಕೊಡಬೇಕೆಂದೂ, ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಭೂಮಿಗೆ ಬೆಲೆ ಕೊಡಲು ತೆಗೆದುಕೊಂಡ ಸಾಲವನ್ನು ಮಾಫಿ ಮಾಡಬೇಕೆಂದೂ, ಭೂ ನ್ಯಾಯ ಮಂಡಳಿಯಲ್ಲಿ ತೀರ್ಮಾನಿಸಿ ಘೋಷಿಸಿದ ಭೂಮಿಯ ಒಡೆತನದ ಸಂಪೂರ್ಣ ಹಕ್ಕು ಪರಿಹಾರ ರಹಿತ ದೊರೆಯಬೇಕೆಂದೂ, ಇದೀಗ ಪರಿಹಾರ ಕಟ್ಟಲು ರೈತರಿಗೆ ಕೊಡುವ ನೋಟೀಸನ್ನು ಕೂಡಲೇ ನಿಲ್ಲಿಸಬೇಕೆಂದೂ ಅಕ್ರಮ ಭೂಮಿಯನ್ನು ಸಕ್ರಮಗೊಳಿಸಬೇಕೆಂದೂ ಸರ್ಕಾರವನ್ನು ಒತ್ತಾಯಿಸುವ, ಸರ್ಕಾರಿ ಸ್ಥಳದಲ್ಲಿ ಮನೆ ಕಟ್ಟಿಕೊಂಡವರಿಗೆ ಮನೆ ನಂಬ್ರ ಕೊಡಲು ಯಾವುದೇ ಷರತ್ತು ಮತ್ತು ಜುಲ್ಮಾನೆ ವಿಧಿಸಬಾರದೆಂದು ಮಂಡಲ ಪಂಚಾಯತ್‌ಗಳನ್ನು ವಿನಂತಿಸುವ ನಿರ್ಣಯ ಸ್ವೀಕರಿಸಲಾಯಿತು.

ತೊಕ್ಕೋಟು ಚೆಕ್‌ಪೋಸ್ಟ್ ಬಳಿ ರಸ್ತೆಯನ್ನು ಅಗಲಗೊಳಿಸಿ, ಪ್ರಯಾಣಿಕರಿಗೆ ಒದಗಬಹುದಾದ ಅಪಾಯವನ್ನು ತಪ್ಪಿಸಬೇಕೆಂದೂ, ಕರ್ನಾಟಕ ವಿದ್ಯುತ್ ಮಂಡಳಿಯವರು ವಿದ್ಯುತ್ ಬಳಕೆದಾರರಿಂದ ಹೊಸ ಕಡ್ಡಾಯ ಠೇವಣಿ ವಸೂಲಾತಿಯನ್ನು ಕೈಬಿಡಬೇಕೆಂದು ವಿನಂತಿಸುವ, ರೈತರಿಂದ ಲೆವಿ ವಸೂಲಾತಿಗಾಗಿ ಕಳುಹಿಸುವ ನೋಟೀಸನ್ನು ಹಿಂತೆಗೆದುಕೊಳ್ಳಬೇಕೆಂದು ವಿನಂತಿಸುವ ನಿರ್ಣಯ ಸ್ವೀಕರಿಸಲಾಯಿತು.

ಮಂಗಳೂರು ತಾಲ್ಲೂಕು ಸಮಿತಿಗೆ 35 ಮಂದಿಯನ್ನು ಆರಿಸಲಾಗಿ ಬಿ. ಬಾಬು (ಅಧ್ಯಕ್ಷ) ಉಗ್ಗಪ್ಪಶೆಟ್ಟಿ, ಎಂ. ಎಸ್.ನಾರಾಯಣ (ಉಪಾಧ್ಯಕ್ಷರು) ರಾಮಚಂದ್ರ ಉಚ್ಚಿಲ್ (ಕಾರ್ಯದರ್ಶಿ) ಯು.ಪಿ.ಡಿಸೋಜ ಎಂ.ಕೃಷ್ಣ ಗಂಗಯ್ಯ ಗಟ್ಟಿ (ಜೊತೆ ಕಾರ್ಯದರ್ಶಿಗಳು) ಪಿ.ಪರಮೇಶ್ವರ ಶೆಟ್ಟಿ ಕೋಶಾಧಿಕಾರಿಯಾಗಿ ಆರಿಸಲಾಯಿತು.

ಕೊನೆಯಲ್ಲಿ ಕಾ॥ ರಾಮಚಂದ್ರ ಉಚ್ಚಿಲರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಬೆಂಗಳೂರು ಜಿಲ್ಲಾ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘ (ಎ.ಐ.ಕೆ.ಎಸ್) ಬೆಂಗಳೂರು ಜಿಲ್ಲಾ ಸಮಿತಿಯ 6ನೇ ಸಮ್ಮೇಳನ ದೊಡ್ಡಬಳ್ಳಾಪುರದಲ್ಲಿ ದಿ. 20 ಮತ್ತು 21 ಫೆಬ್ರವರಿ 89ರಂದು ನಡೆಯಿತು.

ಸಮ್ಮೇಳನವನ್ನು ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾ॥ ಎಂ.ಎಸ್. ಉಗ್ರಪ್ಪನವರು ಉದ್ಘಾಟನೆ ಮಾಡಿ ವಿದೇಶಿ ಸಾಲದಿಂದ ಬಾಧಿತವಾಗಿರುವ ಬಗ್ಗೆ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಬಂಜರು ಭೂಮಿ ಹಂಚುವುದರಲ್ಲಿ, ಬಡವರಿಗೆ ಹಸಿರುಕಾರ್ಡು ನೀಡುವುದಲ್ಲಿ ಆಗಿರುವ ವಂಚನೆಯ ವಿರುದ್ಧ ರೈತರು ಸಂಘಟಿತರಾಗಿ ಹೋರಾಟ ನಡೆಸಲು ಕರೆ ನೀಡಿದರು.

ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕಾ॥ ಚಂದ್ರಶೇಖರ್‌ಬಾಳಿಯವರು ಸಮಾರೋಪ ಭಾಷಣ ಮಾಡಿ, ಅಸಂಘಟಿತ ಕೃಷಿ ಕೂಲಿಕಾರರನ್ನು ಮತ್ತು ಬಡರೈತರನ್ನು ಸಂಘಟಿಸಿ, ಉತ್ತಮ ಜೀವನಕ್ಕಾಗಿ ಹೋರಾಟ ಮಾಡುವುದರೊಂದಿಗೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸಬೇಕೆಂದು ಹೇಳಿದರು.

ಕಳೆದ 3ವರ್ಷಗಳ ಚಟುವಟಿಕೆಯ ವರದಿಯನ್ನು ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾ॥ ಪಿ.ಜಗನ್ನಾಥ್ ಮಂಡಿಸಿದರು.

ಸಮ್ಮೇಳನ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿತು. ನಿರ್ಣಯಗಳನ್ನು ಕಾ॥ ವೆಂಕಟಾಚಲಯ್ಯ ಮತ್ತು ರಾಮಭದ್ರಯ್ಯರವರುಗಳು ಮಂಡಿಸಿದರು. 1. ಕನಿಷ್ಠ ಕೂಲಿಯನ್ನು ಸರ್ಕಾರ ಖಡ್ಡಾಯಗೊಳಿಸಿ ಜಾರಿಗೊಳಿಸಬೇಕು. 2. ವಿದ್ಯುಚ್ಛಕ್ತಿ ಮಂಡಳಿಯವರು ಬಳಕೆದಾರರಿಂದ ಠೇವಣಿ ಹಣವನ್ನು ಹೆಚ್ಚು ಮಾಡಿ, ವಸೂಲಿ ಮಾಡಲು ಹೊರಟಿರುವುದನ್ನು ರಾಜ್ಯ ಸರ್ಕಾರ ತಡೆಯಬೇಕು. 3. ಕೇಂದ್ರ ಸರ್ಕಾರ ರಾಜ್ಯಕ್ಕೆ ಬಿಡುಗಡೆ ಮಾಡುತ್ತಿದ್ದ ಪಡಿತರ ಅಕ್ಕಿಯನ್ನು ಖೋತಾ ಮಾಡಿ ಬೆಲೆ ಏರಿಸಿರುವುದನ್ನು ಖಂಡಿಸಿ ಕೂಡಲೆ ಹಿಂದಿನಂತೆ ರಾಜ್ಯಕ್ಕೆ ಅಕ್ಕಿ ಬಿಡುಗಡೆ ಮಾಡಿ ಏರಿಸಿರುವ ದರವನ್ನು ಇಳಿಸಬೇಕು. ಮತ್ತು ಇತರ ಮೂರು ನಿರ್ಣಯಗಳ ಜಾರಿಗಾಗಿ ಒತ್ತಾಯಿಸಿ ಹೋರಾಟ ಮಾಡಬೇಕೆಂದು ನಿರ್ಧರಿಸಲಾಯಿತು.

ಸಮ್ಮೇಳನದ ಮೊದಲು ಭೂಸುಧಾರಣ ಸಮಾವೇಶ ಕಾ॥ ಹೆಚ್. ಮುವಾಶಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ॥ ಪಿ.ರಾಮಚಂದ್ರರಾವ್‌ರವರು ಉದ್ಘಾಟನೆ ಮಾಡಿದರು. ಪಶ್ಚಿಮಬಂಗಾಳದ ಎಡರಂಗ ಸರ್ಕಾರ ಭೂಸುಧಾರಣೆಯಲ್ಲಿ ತಂದಿರುವ ನೀತಿಯನ್ನು ಉದಹರಿಸಿ ಮಾತನಾಡಿ ರೈತ-ಕಾರ್ಮಿಕ ಸರ್ಕಾರ ಅಧಿಕಾರಕ್ಕೆ ಬಂದರೆ ಮಾತ್ರ ಭೂಮಿ ಸಮಸ್ಯೆ ಬಗೆಹರಿಯಲು ಸಾಧ್ಯವೆಂದರು. ಸಿ ಮತ್ತು ಡಿ ಭೂಮಿಯನ್ನು ಭೂರಹಿತರಿಗೆ ಹಂಚಬೇಕು, ಸರ್ಕಾರ ಹಂಚದಿದ್ದರೆ ಹೋರಾಟಗಳನ್ನು ಮಾಡಿ ಭೂಮಿ ಪಡೆಯಬೇಕೆಂದರು.

ಸಮ್ಮೇಳನದ ಪ್ರಾರಂಭದಲ್ಲಿ ಅಗಲಿದ ರೈತ ಕಾರ್ಮಿಕ ನಾಯಕರುಗಳಿಗೆ ಶ್ರದ್ಧಾಂಜಲಿ ನಿರ್ಣಯಗಳನ್ನು ಕಾ॥ ಎ.ವಿ.ರಮೇಶ್ ಮಂಡಿಸಿದರು.

ಕಾ॥ ಲಕ್ಕಣ್ಣ, ಕಾ॥ ರಾಮಭದ್ರಪ್ಪ ಮತ್ತು ಕಾ॥ ಗಂಗಯ್ಯನವರನ್ನೊಳಗೊಂಡ ಅಧ್ಯಕ್ಷ ಮಂಡಳಿಯಲ್ಲಿ ಸಮ್ಮೇಳನ ನಡೆಯಿತು.

ಸಮ್ಮೇಳನ ಆರಿಸಿದ ನೂತನ ಸಮಿತಿ ಹೀಗಿದೆ-ಅಧ್ಯಕ್ಷರು: ಕಾ॥ ಹೆಚ್.ಮೂಗವಾಳಪ್ಪ, ಉಪಾಧ್ಯಕ್ಷರುಗಳು: ಕಾ॥ ಜಿ.ಎನ್.ನಾಗರಾಜ್, ಶಂಕರಪ್ಪ, ಹೆಚ್.ಸಿ.ಶ್ಯಾಮರೆಡ್ಡಿ, ಪ್ರಧಾನ ಕಾರ್ಯದರ್ಶಿ: ಕಾ॥ ಪಿಜಗನ್ನಾಥ್, ಕಾರ್ಯದರ್ಶಿಗಳು: ಕಾ॥ ಎ.ವಿ.ರಮೇಶ್, ಕಾ॥ ವೆಂಕಟಾಚಲಯ್ಯ, ಕಾ॥ ಮನೋಹರ, ಕಾ॥ ವೆಂಕಟರಾಮು. ಖಜಾಂಚಿ ಕಾ॥ ಲಕ್ಕಣ್ಣ.

24 ಬೇಡಿಕೆಗಳಿಗಾಗಿ ಹೋರಾಡಲು ಬಳ್ಳಾರಿಜಿಲ್ಲಾ ಸಮ್ಮೇಳನದ ನಿರ್ಧಾರ

ಬಳ್ಳಾರಿ ನಗರದಲ್ಲಿ ದಿನಾಂಕ 4 ಮತ್ತು 5 ನೇ ಫೆಬ್ರವರಿ 1989ರಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಮೊದಲನೇ ದಿನದ ಕಾರ್ಯಕ್ರಮದ ಮುಖ್ಯವಾಗಿ ಭೂ ಸಮಾವೇಶವಾಗಿತ್ತು. ಜಿಲ್ಲಾ ಅಧ್ಯಕ್ಷರಾದ ಕಾ॥ ಬಿ.ಪರಶುರಾಂ, ಉದ್ಘಾಟನೆ ಮಾಡಿದರು. ಜಿಲ್ಲೆಯಲ್ಲಿ ರೈತ ಸಂಘದ ನೇತೃತ್ವದಲ್ಲಿ ಭೂ ಹಿಡುವಳಿ ಚಳುವಳಿ ನಡೆದಿದ್ದು ಸುಮಾರು 5 ,000 ಎಕರೆಗೂ ಹೆಚ್ಚು ಭೂಮಿ ಭೂಹೀನ ಬಡ ರೈತರಿಗೆ ಹಂಚಲಾಗಿದೆ. ಆದರೆ ಸ್ಥಳೀಯ ಸ್ವಾರ್ಥ ಪಟ್ಟಭದ್ರ ಹಿತಾಸಕ್ತಿಗಳೊಂದಿಗೆ ಅರಣ್ಯ ಅಧಿಕಾರಿಗಳು ಶಾಮೀಲಾಗಿ ಒಕ್ಕಲೆಬ್ಬಿಸುವ ಕೃತ್ಯ ತೊಡಗಿಸಿದ್ದನ್ನು ಖಂಡಿಸಿದರು. ಜಿಲ್ಲೆಯಲ್ಲಿ ಖಾಲಿ ಇರುವ ಭೂಮಿಯನ್ನು ಹಂಚುವುದರಲ್ಲಿ, ಭೂ ಸುಧಾರಣಾ ಕಾನೂನು ಜಾರಿ ಮಾಡುವಲ್ಲಿ ಆಳುವ ಸರ್ಕಾರಗಳು ವಿಫಲವಾಗಿರುವುದು ಇಂದಿನ ಜನರ ಅನುಭವವಾಗಿದ್ದು ಇದರಿಂದಾಗಿ ದೇಶದ ಐಕ್ಯತೆಗೆ ಧಕ್ಕೆ ಬಂದಿದೆ ಎಂದು ಒತ್ತಿ ಹೇಳಿದರು. ನಿರುದ್ಯೋಗ ನಿರ್ಮೂಲನೆ ಹಾಗೂ ಕೃಷಿಯ ಅಭಿವೃದ್ಧಿ, ದೇಶದ ಐಕ್ಯತೆ, ಭೂಮಿಗಾಗಿ ಹೋರಾಟದಿಂದ ಬೇರ್ಪಡಿಸಲಾಗದೆಂದು ಹೇಳಿ, ಪ್ರಸ್ತ ಭೂ ಸುಧಾರಣಾ ಕಾನೂನಿನ ದೋಷಗಳನ್ನು ಸರಿಪಡಿಸಿ ಕಾನೂನು ಜಾರಿಗಾಗಿ ಜನತೆ ತೀವ್ರ ಹೋರಾಟ ಮಾಡಬೇಕೆಂದು ಕರೆ ನೀಡಿದರು.

ನಂತರ ನಿರ್ಣಯಗಳನ್ನು ಕಾ॥ ಯು. ಬಸವರಾಜ್, ಸಹಕಾರ್ಯದರ್ಶಿಗಳು ಮಂಡಿಸಿದರು. ಕಾ॥ ವೀರಸಂಗಯ್ಯ, ಅಧ್ಯಕ್ಷತೆ ವಹಿಸಿದ್ದರು. ಪಿ.ಆರ್.ವೆಂಕಟೇಶ್, ಜಿಲ್ಲಾ ಕಾರ್ಯದರ್ಶಿಗಳು ಸ್ವಾಗತಿಸಿದರು. ಈ ಸಮಾವೇಶಕ್ಕೆ ಬೇರೆ ಬೇರೆ ತಾಲ್ಲೂಕಿನಿಂದ ಸುಮಾರು 130 ಕಿ.ಮಿ. ಕಾಲು ಜಾತ, ಲಾರಿ ಜಾತ, ಮೂಲಕ 5 00 ಪ್ರತಿನಿಧಿಗಳು ಹಾಜರಿದ್ದು, ಸಮಾವೇಶದ ತೀರ್ಮಾನಗಳನ್ನು ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಲಾಗಿದೆ. ಬಹಿರಂಗ ಸಭೆಯಲ್ಲಿ ರಾಜ್ಯ ನಾಯಕರಾದ ಸಿ.ಎಸ್. ಬಾಳಿಯವರು ಈ ದೇಶದ ಆಳುವ ಸರ್ಕಾರಗಳ ನೀತಿಯನ್ನು ವಿವರಿಸಿ, ಭೂಮಿಯ ಪ್ರಶ್ನೆ ಭೂ ಹೀನರದೇ ಸಮಸ್ಯೆ ಅಲ್ಲ, ನಾಗರೀಕರ ಸಮಸ್ಯೆ ಕೂಡ ಎಂಬುದನ್ನು ವಿವರಿಸಿದರು. ಬೆಂಬಲವಾಗಿ ಸಿ.ಐ.ಟಿ.ಯು. ಪ್ರಸನ್ನಕುಮಾರ್, ಸಿ.ಪಿ.ಐ.(ಎಂ) ವೈ. ಭೀಮಸೇನಾಚಾರ್ ಮಾತನಾಡಿದರು.

ಒಂದನೇ ಜಿಲ್ಲಾ ಸಮ್ಮೇಳನದಿಂದ ಇಲ್ಲಿವರೆಗಿನ ಸಂಘಟನೆ ವಿಸ್ತಾರವಾಗಿದ್ದು, ಹಿಂದಿನ ಸಮ್ಮೇಳನ ಪ್ರಮುಖ ಅಂಶ 'ವಿಸ್ತಾರ' ಯಶಸ್ವಿಯಾಗಿದ್ದು ಜಿಲ್ಲೆಯಾದ್ಯಂತ ವ್ಯಾಪಿಸಿದ್ದು, ಬಲಿಷ್ಠ ಹೋರಾಟಗಳು ಬೆಳೆದು ಬಂದಿರುವ ಹಿನ್ನೆಲೆಯಲ್ಲಿ ಉಂಟಾಗಿರುವ, ಹಾಗೂ ಹೊರಗೆ ಸಂಘಟನೆ ರೈತರ ವಿರೋಧಿಯಾದ ಭೂಮಾಲಕ ಬಂಡವಾಳದಾರರ ವಿರೋಧಿಯಿರುವಾಗಲೇ ಅಂತರಿಕವಾಗಿ ಕಾರ್ಯಕರ್ತರು ಹಾಗೂ ಸಮಿತಿಯ ಮುಖಂಡತ್ವದಲ್ಲಿರುವ ಪಾಳೇಯಗಾರಿ ಬಂಡವಾಳಶಾಹಿ ಮೌಲ್ಯಗಳ ವಿರುದ್ಧದ ಸತತ ಹೋರಾಟದ ಬಗ್ಗೆ, ಸಂಘಟನೆಯ ಬಗ್ಗೆ ಸಮ್ಮೇಳನ ನಿರ್ದೇಶನ ನೀಡಿತು.

60 ಪ್ರತಿನಿಧಿಗಳು ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಅಧ್ಯಕ್ಷರಾಗಿ ಮರು ಆಯ್ಕೆ ಆಗಿ ಬಿ.ಪರಶುರಾಂ, ಕಾರ್ಯದರ್ಶಿಯಾಗಿ ಯು. ಬಸವರಾಜ, ಸಹಕಾರ್ಯದರ್ಶಿಯಾಗಿ ವೀರಸಂಗಯ್ಯ, ಉಪಾಧ್ಯಕ್ಷರಾಗಿ ಬಸವನಗೌಡ, ಸುರೇಂದ್ರ ಮರೇಗೌಡ, ಖಜಾಂಚಿಯಾಗಿ ಎನ್.ಶಂಕಣ್ಣ, ಆಯ್ಕೆ ಆದರು.

ಕರ್ನಾಟಕ ಪ್ರಾಂತ ರೈತ ಸಂಘ 9ನೇ ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿ

ಅಖಿಲ ಭಾರತ ಕಿಸಾನ್ ಸಭಾದ 26ನೇ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಕರ್ನಾಟಕ ಪ್ರಾಂತ ರೈತ ಸಂಘದ 9ನೇ ಸಮ್ಮೇಳನ ಬಳ್ಳಾರಿ ನಗರದಲ್ಲಿ ಮಾರ್ಚ್ 14ರಿಂದ 16ರವರೆಗೆ ನಡೆಯಲಿದೆ. ರಾಜ್ಯಾದ್ಯಂತ 5 00 ರೈತ ಪ್ರತಿನಿಧಿಗಳು ಭಾಗವಹಿಸುವ ಈ ಸಮ್ಮೇಳನದಲ್ಲಿ ಎ.ಐ.ಕೆ.ಎಸ್. ಪ್ರಧಾನ ಕಾರ್ಯದರ್ಶಿ ಕಾ॥ ಎನ್. ಶಂಕರಯ್ಯ ಹಾಗೂ ಕೇಂದ್ರ ಸಮಿತಿ ಸದಸ್ಯರೂ, ಪ್ರಸಿದ್ಧ ಆರ್ಥಿಕ ತಜ್ಞರೂ ಆದ ಕಾ॥ ಬಿಪ್ಲವ್‌ದಾಸಗುಪ್ತ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆ. ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಕಾ॥ ಇ.ಕೆ.ನಾಯನಾರ್ ಮಾತನಾಡಲಿದ್ದಾರೆ.

ಈ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಈಗಾಗಲೇ ಸಿದ್ಧತೆಗಳು ಭರದಿಂದ ನಡೆದಿವೆ. ನಗರದ ಸಾಮೂಹಿಕ ಸಂಘಟನೆಗಳ ಮುಖಂಡರನ್ನು ಹಾಗೂ ಗಣ್ಯ ವ್ಯಕ್ತಿಗಳನ್ನೊಳಗೊಂಡ 65 ಸದಸ್ಯರುಗಳ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ನಗರದ ಪ್ರಖ್ಯಾತ ವಕೀಲರಾದ ಶ್ರೀ ಹೆಚ್.ದಯಾನಂದ ಅವರ ಅಧ್ಯಕ್ಷತೆಯ ಈ ಸಮಿತಿಗೆ ಸಿ.ಐ.ಟಿ.ಯು. ಮುಖಂಡ ಕಾ॥ ಎಸ್.ಪ್ರಸನ್ನಕುಮಾರ್ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಕರ್ನಾಟಕ ಜಲಮಂಡಲಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಕಾ॥ ರಘುನಾಥ್ ಖಜಾಂಚಿಯಾಗಿದ್ದಾರೆ.

ಬೀದರ್ ಜಿಲ್ಲಾ ರೈತ ಸಮ್ಮೇಳನ

ಬೀದರ್ ಜಿಲ್ಲಾ ರೈತ ಸಂಘದ ಸಮ್ಮೇಳನ ಡಿ.ಸಿ.ಸಿ.ಬ್ಯಾಂಕ್ ಹಾಲಿನಲ್ಲಿ ಫೆ 20ರಂದು ಶಿವಶೆಟ್ಟಿಯಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸುತ್ತಾ ರೈತ-ಕಾರ್ಮಿಕ ಮುಖಂಡರಾದ ಎನ್.ಕೆ.ಉಪಾಧ್ಯಾಯರು ದೇಶ ಸ್ವಾತಂತ್ರವಾದ ನಂತರ ದೇಶದ ಪರಿಸ್ಥಿತಿಯನ್ನು ವಿವರಿಸಿ, ಕಾಂಗ್ರೆ ಆಳ್ವಿಕೆಯಲ್ಲಿ ಪರಿಸ್ಥಿತಿ ದೈನಂದಿನ ಕೆಡುತ್ತಿದ್ದಂತೆಯೇ ದೇಶದ ಬೆನ್ನೆಲುಬು ಬಾಗಿರುವ ರೈತಾಪಿ ಜನರು ಸಾಲದ ಭಾರ, ಬೆಲೆಯೇರಿಕೆ, ನೀರಾವರಿ ಸೌಲಭ್ಯದ ಅಭಾವ, ಬೆಳೆಗೆ ಸಿಗಬೇಕಾದ ಬೆಲೆ ಸಿಗದಿರುವಿಕೆಗಳಿಂದ ಕಂಗಾಲಾಗಿದ್ದಾರೆಂದೂ. ಹೆಚ್ಚುವರಿ ಭೂಮಿ ಬಡ ರೈತರಿಗೆ, ಕೃಷಿ ಕೂಲಿಕಾರರಿಗೆ ವಿತರಣೆಯಾಗದೆ ದೇಶದ ಅಭಿವೃದ್ಧಿಗೆ ತೊಂದರೆಯಾಗಿದೆಂದೂ ಹೇಳಿ, ಸಿ.ಪಿ.ಐ(ಎಂ) ನೇತೃತ್ವದ ಪ.ಬಂಗಾಳ ಮತ್ತು ಕೇರಳಗಳಲ್ಲಿರುವ ಸರ್ಕಾರಗಳು ರೈತರ ಸಮಸ್ಯೆಗಳನ್ನು ಹೇಗೆ ಬಗೆಹರಿಸಿವೆಂಬುದನ್ನು ವಿವರಿಸಿ, ರೈತರು ಭೂಮಿಯ ಹಕ್ಕಿಗಾಗಿ, ಹೋರಾಟ ಮುಂದುವರಿಸಬೇಕೆಂದು ಕರೆಯಿತ್ತಿದೆ, ರೈತರ ಮತ್ತು ಇತರ ದುಡಿಯುವ ಜನರ ಸಮಸ್ಯೆಗಳು ಬಗೆಹರಿಯಬೇಕಾದರೆ, ಹೋರಾಟ ಮಾಡುತ್ತಿದ್ದಂತೆಯೇ ಕಾಂಗ್ರೆಗೆ ವಿರುದ್ಧವಾಗಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಪರ್ಯಾಯ ವ್ಯವಸ್ಥೆ ಬೆಳೆದು ಬಂದು ಅಧಿಕಾರಕ್ಕೆ ಬರುವಂತೆ ಪ್ರಯತ್ನಿಸಬೇಕೆಂದೂ ಹೇಳಿದರು.

ಗುಲ್ಬರ್ಗಾ ಜಿಲ್ಲಾ ಮುಖಂಡರಾದ ಮಾರುತಿ ಮಾನ್ಪಡೆಯವರು ಮಾತಾಡುತ್ತಾ ರೈತರ ಶೋಷಣೆ ಯಾವ ರೀತಿ ಮುಂದುವರೆಯುತ್ತಿದೆ, ಅದಕ್ಕೆ ಪರಿಹಾರವೇನೆಂಬುದನ್ನು ವಿವರಿಸುತ್ತಾ ರೈತರು ಕೃಷಿ ಕಾರ್ಮಿಕರೇ ತಮ್ಮ ಸಂಘಟನೆಯನ್ನು ಬಲಗೊಳಿಸಿ ಹೋರಾಡಬೇಕೆಂದು ಹೇಳಿದರು. ಕಾರಂಜಿ ಕೆಲಸಗಾರ ಸಂಘದ ಕಾರ್ಯದರ್ಶಿ ನೆಹರೂಜಿ, ಮಂಡಲಪಂಚಾಯತ್ ನೌಕರ ಸಂಘದ ಮಲ್ಲಪ್ಪ, ವಿದ್ಯಾರ್ಥಿ ಸಂಘಟನೆಯ ನಾರಾಯಣ ಮೊದಲಾದವರು ಶುಭ ಕೋರಿ ಮಾತನಾಡಿದರು. ಸಂಗ್ರಾಮ ವಕೀಲರು ಸ್ವಾಗತಿಸಿದರು. ಈಶ್ವರಪ್ಪ ಆಭಾರ ಮನ್ನಣೆ ಮಾಡಿದರು. ಹೊಸ ಸಕ್ಕರೆ ಕಾರ್ಖಾನೆ ಸ್ಥಾಪನೆಯಾಗಬೇಕು. ಈಗಾಗಲೇ ಸಾಗು ಮಾಡುತ್ತಿರುವ ರೈತರಿಗೆ ಭೂಮಿಯ ಪಟ್ಟಾ ಸಿಗಬೇಕು, ಕಾರಂಜಿ ನೀರಾವರಿ ಯೋಜನೆಯನ್ನು ಕೂಡಲೇ ಪೂರ್ಣಗೊಳಿಸಬೇಕು, ಹರಿಜನ-ಗಿರಿಜನ, ಅಲ್ಪ ಮತಸ್ಥರ ಮೇಲೆ ನಡೆದಿರುವ ದಬ್ಬಾಳಿಕೆ ನಿಲ್ಲಬೇಕೆಂದು ಹೇಳಿರುವ ನಿರ್ಣಯಗಳು ಪಾಸಾದವು.

ಅದೇ ದಿವಸ ರಾತ್ರಿ ಕಮಠಾಣಾ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಎನ್.ಕೆ.ಉಪಾಧ್ಯಾಯ, ಮಾರುತಿಮಾನ್ಪಡೆ, ನೀಲಾ ಸಂಗ್ರಾಮ, ಮತ್ತು ಶಿವಶೆಟ್ಟಿ ಚೆಲುವಾರವರು ಮಾತಾಡಿ ದೇಶದ-ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ರೈತ-ಕಾರ್ಮಿಕರ ಸಂಘಟನೆ ಬೆಳೆಸಲು ಕರೆ ನೀಡಿದರು.

ಶಿವಶೆಟ್ಟಿ ಚೆಲುವ ಅವರ ಅಧ್ಯಕ್ಷತೆಯಲ್ಲಿ 27 ಜನರ ಜಿಲ್ಲಾ ರೈತ ಸಂಘದ ಕಮಿಟಿಯನ್ನು ಆರಿಸಲಾಯಿತು.

ಸ್ವಾತಂತ್ರ್ಯದ ಮೊದಲ ದಿನಗಳಲ್ಲಿ ಯೋಜನಾಬದ್ಧ ಆರ್ಥಿಕ ಬೆಳವಣಿಗೆ ಮತ್ತು ಸಾರ್ವಜನಿಕ ವಲಯದ ಆರ್ಥಿಕ ಉದ್ದಿಮೆಗಳ ಮೂಲಕ ಸರ್ಕಾರದ ಮಧ್ಯಪ್ರವೇಶ ನಮ್ಮ ಹಿಂದುಳಿದ ಸಮಾಜದ ತ್ವರಿತ ಪರಿವರ್ತನೆಗೆ ಅಗತ್ಯ ಸಾಧನಗಳೆಂದು ಪರಿಗಣಿಸಲಾಗಿತ್ತು. ಬಿ.ಹೆಚ್.ಇ.ಎಲ್., ಓ.ಎನ್.ಜಿ.ಸಿ., ಹೆಚ್.ಎಂ.ಟಿ., ಬಿ.ಇ.ಎಲ್., ಐ.ಟಿ.ಐ. ಇವೆಲ್ಲಾ ನಮ್ಮ ದೇಶದ ಮಹತ್ಸಾಧನೆಗಳೆಂದು ಬೂರ್ಜ್ವಾಗಳೇ ಹೇಳಿಕೊಳ್ಳುತ್ತಿದ್ದರು. ಆದರೆ ಈಗಿನ ರಾಜಕೀಯ ಸನ್ನಿವೇಶದ ಸಂದರ್ಭ ಸಾಧಿಸಿ ಬೂರ್ಜ್ವಾ ಸಿದ್ಧಾಂತಿಗಳು ಸಾರ್ವಜನಿಕ ವಲಯದ ಮೇಲೆ ಪ್ರಹಾರ ನಡೆಸುತ್ತಿದ್ದಾರೆ. ಅವರ ವಾದಗಳ ಪೊಳ್ಳುತನದ ಒಂದು ಚಿತ್ರ ಇಲ್ಲಿದೆ.

ಸಾರ್ವಜನಿಕ ವಲಯ ರಾಷ್ಟ್ರದ ಬೆನ್ನೆಲುಬು

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ವಲಯದ ಮೇಲೆ ಅವ್ಯಾಹತವಾಗಿ ದಾಳಿ ನಡೆಯುತ್ತಿದೆ. ದೇಶ ಇಂದು ಎದುರಿಸುತ್ತಿರುವ ಹಾಗೂ ದಿನೇದಿನೇ ತೀವ್ರವಾಗುತ್ತಿರುವ ಆರ್ಥಿಕ ಬಿಕ್ಕಟ್ಟಿಗೆ ಸಾರ್ವಜನಿಕ ವಲಯವೇ ಕಾರಣ ಎಂಬ ಕೂಗು ಹಲವು ಖಾಸಗಿ ಬಂಡವಾಳಿಗರು ಮತ್ತು ಅವರನ್ನು ಪ್ರತಿನಿಧಿಸುತ್ತಿರುವ ಸರ್ಕಾರಗಳಿಂದ ಕೇಳಿ ಬರುತ್ತಿದೆ. ನಾಲ್ಕು ದಶಕಗಳ ದೀರ್ಘ ಕಾಲ ಆಳಿದ ಬೂರ್ಜ್ವಾ ಭೂಮಾಲಿಕ ಸರ್ಕಾರ ಮಾಡಿದ ಮತ್ತು ಮಾಡುತ್ತಿರುವ ಎಲ್ಲ ತಪ್ಪುಗಳ ಫಲವನ್ನು ನಯವಾಗಿ ಸಾರ್ವಜನಿಕ ವಲಯದ ತಲೆಗೆ ಕಟ್ಟುವ ಪ್ರಯತ್ನಗಳು ನಡೆಯುತ್ತಿವೆ. ಸುಳ್ಳುಗಳ ಸರಮಾಲೆಯನ್ನೇ ಹೆಣೆದು ಜನರ ಗಮನವನ್ನು ಬೇರೆಡೆಗೆ ಸೆಳೆದು ಖಾಸಗೀ ವಲಯದವರು ತಮ್ಮ ಲಾಭಕೋರತನದ ಫಲವನ್ನು ಬಚ್ಚಿಡುವ ವ್ಯವಸ್ಥಿತ ಪ್ರಯತ್ನ ಇದು. ಸಮಾಜವಾದೀ ಸಿದ್ಧಾಂತಗಳ ಸ್ಫೂರ್ತಿಯಿಂದ ಸ್ಫುಟಗೊಂಡು ದೇಶದುದ್ದಗಲಕ್ಕೂ ಬೆಳೆದು ನಿಂತು ದೇಶದ ಬೆನ್ನೆಲುಬಾಗಿರುವ ಸಾರ್ವಜನಿಕ ವಲಯದ ಮೇಲೆ ಕೊಡಲಿ ಪ್ರಹಾರ ಮಾಡುವ ದುಷ್ಟ ಪ್ರಯತ್ನ ಇದು.

ಸೂಕ್ತ ಮಾಹಿತಿಗಳ ಕೊರತೆಯಿರುವ ಸಂದರ್ಭದಲ್ಲಿ ಜನಸಾಮಾನ್ಯನೊಬ್ಬ 'ಇರಬಹುದೇನೋ' ಎಂಬ ಅರೆ ಸಂಶಯದ ನಂಬಿಕೆಬೆಳೆಸಿಕೊಳ್ಳುವಂತಹ ಹಲವು ವಾದಗಳನ್ನು ಅವರು ಮುಂದಿಡುತ್ತಾರೆ. ಸಾಧಾರಣವಾಗಿ ಆ ವಾದಗಳು ಕೆಳಗಿನಂತಿವೆ.

"ಸಾರ್ವಜನಿಕ ವಲಯದಿಂದುಂಟಾದ ಆಕಿಸ್ತು ಮತ್ತು ಹಾನಿಯಿಂದಲೇ ದೇಶದ ಸಮಸ್ಯೆಗಳು ಉಂಟಾದವು. ಖಾಸಗೀ ವಲಯದ ಎಲ್ಲ ಉಳಿತಾಯಗಳನ್ನು ಸಾರ್ವಜನಿಕ ವಲಯ ನುಂಗಿ ಹಾಕುತ್ತದೆ. ಸಾರ್ವಜನಿಕ ವಲಯ ಕಡಿಮೆ ಕೆಲಸಕ್ಕೆ ಹೆಚ್ಚಿನ ಸಂಬಳ ನೀಡುತ್ತ ಹಾನಿಗೊಳಗಾಗಿ ಅದನ್ನು ದೇಶದ ಸಮರ್ಥ ಖಾಸಗೀ ವಲಯಕ್ಕೆ ವರ್ಗಾಯಿಸುತ್ತದೆ. ಸಾರ್ವಜನಿಕ ವಲಯದ ನೌಕರರು ಹೋರಾಟಗಳಲ್ಲೇ ಜನರ ಅನ್ನವನ್ನು ಕಸಿದು ತಿನ್ನುವ ಸಮಾಜ ವಿರೋಧಿ ಘಾತುಕರು. ಸರ್ಕಾರ ಸಂಸತ್ತು ಮತ್ತು ಇತರ ಪ್ರಜಾಸತ್ತಾತ್ಮಕ ಸಂಸ್ಥೆಗಳ ಅನಪೇಕ್ಷಿತ ಹಸ್ತಕ್ಷೇಪ ಸಾರ್ವಜನಿಕ ವಲಯದ ಹಿನ್ನಡೆಗಳಿಗೆ ಕಾರಣ..." ಹೀಗೇ ವಾದ ಸರಣಿ ಬೆಳೆಯುತ್ತಲೇ ಹೋಗುತ್ತವೆ. ಅವರು ಈ ಸಮಸ್ಯೆಗಳಿಗೆ ಸೂಚಿಸುವ ಪರಿಹಾರ? ಸಾಧ್ಯವಿರುವ ಎಲ್ಲ ಕ್ಷೇತ್ರಗಳ ಖಾಸಗೀಕರಣ ಸಾರ್ವಜನಿಕ ವಲಯದ ಹೂಡಿಕೆಗಳಲ್ಲಿನ ಕಡಿತ

ಸಾರ್ವಜನಿಕ ವಲಯದ ರಚನೆ ಮತ್ತು ಸಂಯೋಜನೆಗಳ ಆಳಕ್ಕಿಳಿದು ಪರಿಚಯ ಮಾಡಿಕೊಳ್ಳುತ್ತ ಹೋದಂತೆಲ್ಲ ಯಾವುದೇ ವಿವರಣೆಯ ಅವಶ್ಯಕತೆಯೂ ಇಲ್ಲದೇ ಖಾಸಗಿ ವಲಯದವರ ಈ ವಾದಗಳ ಪೊಳ್ಳುತನ ಪೂರೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ಸಾರ್ವಜನಿಕ ವಲಯದ ಸ್ವರೂಪ

ಸಾರ್ವಜನಿಕ ವಲಯದ ಬಂಡವಾಳ ಹೂಡಿಕೆ ಮತ್ತು ಅದು ಸೃಷ್ಟಿಸುವ ಉದ್ಯೋಗಗಳ ಗಾತ್ರದ ಸುತ್ತವೇ ಬೂರ್ಜ್ವಾಗಳ ಟೀಕೆ ಇರುತ್ತದೆ. ಅವರ ಪ್ರಕಾರ ಸಾರ್ವಜನಿಕ ವಲಯದಲ್ಲಿ ತಕ್ಕ ಪ್ರಮಾಣದಲ್ಲಿ ದೇಶದ ಆರ್ಥಿಕತೆಗೆ ಲಾಭ ಬರದಿದ್ದರೂ ಬೃಹತ್ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಯಾಗುತ್ತಿದೆ. ಒಂದು ಅಂದಾಜಿನ ಪ್ರಕಾರ ಸಾರ್ವಜನಿಕ

ಕೋಷ್ಟಕ

ಸಾರ್ವಜನಿಕ ವಲಯ	ಶೇಖಡಾವಾರು ಪಾಲು	
	ಮಾನವಶಕ್ತಿ	ರಾಷ್ಟ್ರೀಯ ವರಮಾನ
ಸಾರ್ವಜನಿಕ ವಲಯ	6	19
ಸಂಘಟಿತ ಖಾಸಗೀ ವಲಯ	19	42
ಅನಧಿಕೃತ ವಲಯ ಖಾಸಗಿ	75	39
ಒಟ್ಟು	100	100

ವಲಯದಲ್ಲಿನ ಬಂಡವಾಳ ಶೇಖರಣೆ ವಾರ್ಷಿಕ ಶೇ. 8.1ರಷ್ಟು ಸರಾಸರಿ ಬೆಳೆದರೆ ಅದೇ ಖಾಸಗೀ ವಲಯದಲ್ಲಿ ಅದು ಶೇ. 4.8ರಷ್ಟು ಸರಾಸರಿಯಾಗಿ ಬೆಳೆಯುತ್ತಿದೆ. ಈ ವ್ಯತ್ಯಯಿಕ ಬೆಳವಣಿಗೆಯಿಂದಾಗಿ ರಾಷ್ಟ್ರೀಯ ಬಂಡವಾಳ ಶೇಖರಣೆಯಲ್ಲಿ ಸಾರ್ವಜನಿಕ ವಲಯದ ಪಾಲು 1961ರಲ್ಲಿ ಶೇ. 26ರಷ್ಟಿದ್ದುದು 1984ರಲ್ಲಿ ಶೇ. 42ರಷ್ಟಾಯಿತು. ಈ ಅಂದಾಜಿನ ಪ್ರಕಾರ 1984-85 ರಲ್ಲಿ ಬಂಡವಾಳ ದಾಸ್ತಾನು ಸಾರ್ವಜನಿಕ ವಲಯದಲ್ಲಿ 1,06,413 ಕೋಟಿ ರೂ.ಗಳಾಗಿದ್ದರೆ ಅದೇ ಖಾಸಗೀ ವಲಯದಲ್ಲಿ ಅದು 1144733 ಕೋಟಿ ರೂ.ಗಳಷ್ಟಾಗಿತ್ತು.

ಸಾರ್ವಜನಿಕ ವಲಯದ ಪ್ರತಿಯೊಂದು ವಿಭಾಗದಲ್ಲಿನ ಬಂಡವಾಳ ಮತ್ತು ಮಾನವಶಕ್ತಿಯ ಬೆಳವಣಿಗೆಯ ವಿಶ್ಲೇಷಣೆ ಅದರ ಮೂಲಭೂತ ಗುಣಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಬಹಳ ಸಹಾಯ ಮಾಡುತ್ತದೆ. ನಾವು ಇದಕ್ಕಾಗಿ ಲಭ್ಯವಿರುವ 1960-61ರಿಂದ 1983-84ರವರೆಗಿನ 23 ವರ್ಷಗಳ ವಿವಿಧ ವಿಭಾಗಗಳಲ್ಲಿನ ಬಂಡವಾಳ ಶೇಖರಣೆಯ ಸಂಚಯಿತ ಮೊತ್ತವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಕೃಷಿ ವಲಯ: ಈ ಅವಧಿಯಲ್ಲಿ ಕೃಷಿಯಲ್ಲಿನ ಬಂಡವಾಳ ಶೇಖರಣೆ ಶೇ. 12ರಷ್ಟಿತ್ತು. ಇದು ಮುಖ್ಯವಾಗಿ ಸಾರ್ವಜನಿಕ ನೀರಾವರಿ ಪದ್ಧತಿಗಳನ್ನು ಅಭಿವೃದ್ಧಿಗೊಳಿಸುವ ಸಲುವಾಗಿತ್ತು. ಆದರೆ ಈ ವಿಭಾಗ ಬರೀ ಶೇ. 4ರಷ್ಟು ಆದಾಯವನ್ನು ನೀಡಿತು. ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಇದು ಶೇ. 6ರಷ್ಟು ಹೂಡಿಕೆ ಮತ್ತು ಶೇ. 1ಕ್ಕಿಂತ ಕಡಿಮೆ ಆದಾಯವನ್ನು ಪ್ರತಿನಿಧಿಸುತ್ತದೆ. ನಾವು ಇಲ್ಲಿ ಗಮನಿಸಬೇಕಾದ್ದು ನೀರಾವರಿ ವ್ಯವಸ್ಥೆಯ ಪೂರ್ಣ ವೆಚ್ಚವನ್ನು ಬೆಳೆಗಾರರಿಗೆ ವರ್ಗಾಯಿಸಲಾಗುವುದಿಲ್ಲ ಅಥವಾ ಈ ಸೇವೆಗೆ ಅಧಿಕೃತವಾಗಿ ಸಹಾಯಧನ ನೀಡಲಾಗುವುದಿಲ್ಲ. ಹಾಗೇ 1984-85 ನೇ ಸಾಲಿನಲ್ಲಿ ಈ ಸಾರ್ವಜನಿಕ ನೀರಾವರಿ ಕಾರ್ಯಗಳಿಂದಾಗಿ ಉಂಟಾದ ನಷ್ಟವನ್ನು 700 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಅಧಿಕಾರ ಶಾಹಿಗಳಿಂದಲೇ ನಿರ್ವಹಿಸಲ್ಪಟ್ಟು, ರೈತರ ಭಾಗವಹಿಸುವಿಕೆಯ ಕೊರತೆಯಿರುವ ಇಲ್ಲಿ ರೂಪಿಸಿರುವ ಪದ್ಧತಿಯ ಪೂರ್ಣ ಪ್ರಮಾಣದ ಪ್ರಯೋಜನ ಆಗುತ್ತಿಲ್ಲ. ತತ್ಪರಿಣಾಮವಾಗಿ ಈ ಸಾರ್ವಜನಿಕ ನೀರಾವರಿ ಸೇವೆ ತನ್ನ ಗುಣಮಟ್ಟವನ್ನು ಕಳೆದುಕೊಳ್ಳುತ್ತಲಿದೆ.

ವಿದ್ಯುಚ್ಛಕ್ತಿ ವಲಯ: ಸಾರ್ವಜನಿಕ ವಲಯದ ಬಂಡವಾಳ ಹೂಡಿಕೆಯ ಐದನೇ ಒಂದು ಭಾಗ ಶಕ್ತಿ ಉತ್ಪಾದನೆಯಲ್ಲಿದೆ. ಇದರಿಂದ ಬರುವ ಆದಾಯ ಅತೀ ಕಡಿಮೆ. ಆದರೆ ಇಲ್ಲಿ ಗಮನಿಸಬೇಕಾದ ಅತಿ ಮುಖ್ಯ ಅಂಶವೆಂದರೆ ನಮ್ಮ ದೇಶದಲ್ಲಿ ವಿದ್ಯುತ್ತಿನ ದರ ಕಡಿಮೆ ಎಂಬುದು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ವಿದ್ಯುತ್ ದರಕ್ಕೆ ಹೋಲಿಸಿದರೂ ಇದು ಕಡಿಮೆಯೇ. ಇದೇ ಕಾರಣಕ್ಕೆ ಜಾಗತಿಕ ಬ್ಯಾಂಕು ಭಾರತದ ಸರ್ಕಾರವನ್ನು ವಿದ್ಯುತ್ ದರವನ್ನು ಹೆಚ್ಚಿಸುವಂತೆ ಒತ್ತಾಯಿಸುತ್ತಿದೆ. ಅದರ ಪ್ರಕಾರ ವಿದ್ಯುತ್ ದರ ಉತ್ಪಾದನೆಯ ನಿಜವಾದ ವೆಚ್ಚವನ್ನೂ ಪ್ರತಿಬಿಂಬಿಸುವಂತಾದರೆ ಮಾತ್ರ ಖಾಸಗಿ ಬಂಡವಾಳವನ್ನು ಆಕರ್ಷಿಸುವುದು ಸಾಧ್ಯವಾಗುತ್ತದೆ. ಸಾಳೆ ಯೆಂಬ ಕೇಂದ್ರ ಮಂತ್ರಿ ಮಹೋದಯ ಭಾರತದ ಬಂಡವಾಳಿಗರಿಗೆ 'ನಿಮ್ಮಲ್ಲಿರುವ ಕಪ್ಪು ಹಣವನ್ನು ಶಕ್ತಿ ಉತ್ಪಾದನಾ ವಿಭಾಗದಲ್ಲಿ ತೊಡಗಿಸಿ' ಎಂಬ ಮನವಿ ಮಾಡುವ ಮಟ್ಟಕ್ಕೆ ಹೋದ.

ಸಾರಿಗೆ-ಸಂಪರ್ಕ: ಹಾಗೇ ಸಾರ್ವಜನಿಕ ಉದ್ದಿಮೆಗಳ ಉತ್ಪನ್ನಗಳಿಗೆ

> ರಾಷ್ಟ್ರೀಕರಣದ ನಂತರ ಹಣಕಾಸು ಸಂಸ್ಥೆಗಳ ಅಗಾಧ ವಿಸ್ತರಣೆ ಎರಡು ಸಂಗತಿಗಳನ್ನು ಸ್ಪಷ್ಟಪಡಿಸುತ್ತದೆ. 1) ಖಾಸಗೀ ಬಂಡವಾಳ ಶಾಹಿಗಳ ಬಗ್ಗೆ ಭಾರತೀಯ ಜನತೆಯ ತೀವ್ರ ಅಪನಂಬಿಕೆ 2) ಸಾರ್ವಜನಿಕ ವಲಯದಲ್ಲಿ, ಯೋಜನಾಬದ್ಧ ವಿಧಾನದಿಂದ ದೇಶದ ಆರ್ಥಿಕತೆಯ ಅಗಾಧ ಬೆಳವಣಿಗೆಯ ಸಾಧ್ಯತೆ.

ಕಡಿಮೆ ದರಗಳಿವೆ. ಇಂತಹ ಇನ್ನೊಂದು ದೊಡ್ಡ ನಿದರ್ಶನ ಭಾರತದ ರೈಲ್ವೆ. ಕಳೆದ 25 ವರ್ಷಗಳಲ್ಲಿ ಶೇ. 10ರಷ್ಟು ಮಾನವಶಕ್ತಿ ಮತ್ತು ಶೇ. 10ರಷ್ಟು ಬಂಡವಾಳವನ್ನು ರೈಲ್ವೆಯಲ್ಲಿ ಹೂಡಲಾಗಿದೆ ಆದರೆ ರೈಲ್ವೆಯಿಂದ ಬರುವ ಆದಾಯ ಶೇ. 5 ಕ್ಕಿಂತ ಕಡಿಮೆ ಇದೇ ರೀತಿಯಲ್ಲಿವೆ. ಇತರೆ ಸಾರಿಗೆ ವ್ಯವಸ್ಥೆಗಳು. ಸುಲಭ ಬೆಲೆಯ ಈ ವ್ಯವಸ್ಥೆಯ ಪ್ರಯೋಜನ ಯಾರಿಗಾಗುತ್ತವೆ ? ಖಂಡಿತವಾಗಿಯೂ ಖಾಸಗೀ ವಲಯದ ಉದ್ದಿಮೆಗಳೇ ಇದರ ಲಾಭ ಪಡೆಯುವವರು.

ಸಾರಿಗೆ ವ್ಯವಸ್ಥೆಯಲ್ಲಿ ಅಲ್ಪ ಪ್ರಮಾಣದಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆ ಇದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಸಂಪರ್ಕ ವ್ಯವಬಸ್ಥೆಯಲ್ಲಿ ಸಾರ್ವಜನಿಕ ವಲಯದಷ್ಟೇ ಏಕ ಸ್ವಾಮ್ಯ. ಯಥಾಪ್ರಕಾರ ಲಾಭವನ್ನು ಬಾಚಿಕೊಳ್ಳುವವರು ಖಾಸಗಿ ವಲಯದ ಉದ್ದಿಮೆಗಳು.

ಹಣಕಾಸು ವಲಯ: ಹಣಕಾಸು ಮತ್ತು ವಿಮಾ ಸಂಸ್ಥೆಗಳು ಬಂಡವಾಳ ಹೂಡಿಕೆಯಲ್ಲಿ ಶೇ. 1ಕ್ಕಿಂತ ಕಡಿಮೆ ಪಾಲನ್ನು ಹೊಂದಿದ್ದರೂ ಸಾರ್ವಜನಿಕ ವಲಯದ ; ವರಮಾನದಲ್ಲಿ ಶೇ. 13ರಷ್ಟನ್ನು ನೀಡುತ್ತವೆ. ಬ್ಯಾಂಕುಗಳು ರಾಷ್ಟ್ರೀಕರಣದ ನಂತರ ಶಾಖೆಗಳ ಸಂಖ್ಯೆ ಐವತ್ತು ಪಟ್ಟುಗೂ ಹೆಚ್ಚಾಗಿವೆ. ಖಾತೆಗಳ ಸಂಖ್ಯೆ ನೂರು ಪಟ್ಟು ಹೆಚ್ಚಾಗಿವೆ. ಇವು ಸಣ್ಣ ಉಳಿತಾಯಗಳನ್ನು ಹೆಚ್ಚಿಸಲು ಸಹಾಯ ಮಾಡಿವೆ. ಹೀಗೆ ಹೆಚ್ಚಿದ ಉಳಿತಾಯದಿಂದ ಅದನ್ನು ಉತ್ಪಾದಕ ಕಾರ್ಯಗಳಲ್ಲಿ ಹೂಡುವುದು ಸಾಧ್ಯವಾಗಿದೆ.

ವ್ಯಾಪಾರ ಮತ್ತು ಹೋಟೆಲ್‌ಗಳು ಬಂಡವಾಳ ಹೂಡಿಕೆ (41%) ಮತ್ತು ಮಾನವ ಶಕ್ತಿ ಸಂಪನ್ಮೂಲದ (0.78 %) ಪಾಲು ಈ ಪ್ರಮಾಣದಲ್ಲಿರುವುದು ಸಾಧ್ಯವಾಗಿರುವುದು ಸಾರ್ವಜನಿಕ ವಲಯದ 'ಭಾರತ್ ಆಹಾರ ನಿಗಮ' ಹೊಂದಿರುವ ಆಹಾರ ದಾಸ್ತಾನಿನಿಂದ. ಮಾರುಕಟ್ಟೆಗಳಲ್ಲಿ ಆಹಾರ ಧಾನ್ಯಗಳ ಸಲುವಾಗಿನ ಸರ್ಕಾರದ ಮಧ್ಯಪ್ರವೇಶ ಬೂರ್ಜ್ವಾಗಳಿಗೂ ಒಪ್ಪಿತ.

ಹೀಗೆ ಈ ಎಲ್ಲ ಆರ್ಥಿಕತೆಯ ಆಧಾರಭೂತ ವಲಯಗಳು ಕೃಷಿ (ಮುಖ್ಯವಾಗಿ ನೀರಾವರಿ) ಶಕ್ತಿ, ಸಾರಿಗೆ ಮತ್ತು ಸಂಪರ್ಕ, ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆ ಮತ್ತು ವ್ಯಾಪಾರ ಇವೆಲ್ಲ ಸೇರಿದರೆ ಅವುಗಳ ಹೂಡಿಕೆ ಶೇ. 5 3.2 ಮತ್ತು ಶೇ. 30.5 ರಷ್ಟು ಉದ್ಯೋಗಗಳನ್ನು ಸಾರ್ವಜನಿಕ ವಲಯ ವಹಿಸಿಕೊಂಡಿದೆ. ಇವುಗಳನ್ನು ಹೊರತುಪಡಿಸಿ ಬಹು ಮುಖ್ಯವಾದ ಇತರ ಸರ್ಕಾರಿ ಕಾರ್ಯಗಳಿವೆ-ಆಡಳಿತ, ರಕ್ಷಣೆ ಮತ್ತು ಶಿಕ್ಷಣ ಮತ್ತು ಆರೋಗ್ಯ ಮತ್ತಿತರ ಸಮುದಾಯ ಸೇವೆಗಳು. ಈ ವಿಬಾಗಗಳೂ ಸಾರ್ವಜನಿಕ ವಲಯದ ಹೂಡಿಕೆಗಳಲ್ಲಿ ಪಾಲು ಹೊಂದಿವೆ. ಕಳೆದ ಕಾಲು ಶತಮಾನದಲ್ಲಿ ಅಂದರೆ 1960ರಿಂದ 1985 ರವರೆಗಿನ ಸಾರ್ವಜನಿಕ ವಲಯದ ಹೂಡಿಕೆಯ ಐದನೇ ಒಂದು ಭಾಗವನ್ನು ಸರ್ಕಾರೀ ಆಡಳಿತ ರಕ್ಷಣೆ ಮತ್ತು ಆರೋಗ್ಯ ಮತ್ತು ಶಿಕ್ಷಣಗಳಂತ ಸಾಮಾಜಿಕ ಸೇವೆಗಳಲ್ಲಿ ಹೂಡಲಾಯಿತು. ಸಾರ್ವಜನಿಕ ವಲಯದಲ್ಲಿನ ಅರ್ಧಕ್ಕಿಂತ ಹೆಚ್ಚಿನ ಮಾನವ ಶಕ್ತಿಯನ್ನು (5 3.7%) ಈ ವಿಭಾಗಗಳಲ್ಲಿ ವಿನಿಯೋಗಿಸಲಾಯಿತು. ಇವಿಷ್ಟು ಸರ್ಕಾರದ ಜವಾಬ್ದಾರಿಯಾದ ಪ್ರಮುಖ ಕಾರ್ಯಗಳಲ್ಲಿನ ಹೂಡಿಕೆಗಳಾದವು. ಈ ಹೂಡಿಕೆಗಳಲ್ಲದೇ ನೇರವಾಗಿ ಸರ್ಕಾರದ ಜವಾಬ್ದಾರಿಯಲ್ಲದ ಕಾರ್ಯ ವಿಭಾಗಗಳಾದ ಗಣಿ ಮತ್ತು ಉತ್ಪಾದನೆಗಳಲ್ಲಿಯೂ ಹೂಡಿಕೆಯಿದೆ. ಇವೂ ಸಾರ್ವಜನಿಕ ವಲಯದ ಭಾಗಗಳೇ.

ಗಣಿ ಮತ್ತು ಉತ್ಪಾದನೆ: ಗಣಿಯ ಚಟುವಟಿಕೆಗಳಲ್ಲಿಯೂ ಸಹ (ಹೂಡಿಕೆ ಮತ್ತು ಉದ್ಯೋಗ) ಸಾರ್ವಜನಿಕ ವಲಯದ್ದೇ ಹೆಚ್ಚಿನ ಪಾಲಿದೆ. ಗಣಿ ಕೊರೆಯುವುದರಿಂದ ಬರುವ ರಾಷ್ಟ್ರೀಯ ಉತ್ಪನ್ನದ ಶೇ. 90ರಷ್ಟು ಸಾರ್ವಜನಿಕ ವಲಯದಿಂದಲೇ ಬಂದಂತಹವು.

ಕಳೆದ ಶತಮಾನದಲ್ಲಿ ಕಂಡು ಹಿಡಿದ ಶಕ್ತಿ. ಮೂಲಗಳಲ್ಲೆಲ್ಲ ಕಲ್ಲಿದ್ದಲು ಅತ್ಯಂತ

ನಮ್ಮ ಸಾರ್ವಜನಿಕ ವಲಯದಲ್ಲಿ ಸೋವಿಯತ್ ಯೂನಿಯನ್‌ನ ಪಾತ್ರ

ಭಾರತದ ತೈಲ ವಿಭಾಗಗಳ ಅಭಿವೃದ್ಧಿಯಲ್ಲಿ ಸೋವಿಯತ್ ಯೂನಿಯನ್ ವಹಿಸಿದ ಮಹತ್ತರ ಪಾತ್ರವನ್ನು ನೆನಸಲೇ ಬೇಕಾಗುತ್ತದೆ. ಸ್ವಾತಂತ್ರ್ಯ ಬಂದಾಗ ತೈಲ ಉತ್ಪಾದನೆ ಮತ್ತು ಶುದ್ಧೀಕರಣ ಇವೆರಡನ್ನೂ ಬ್ರಿಟಿಷ್ ಮತ್ತು ಅಮೆರಿಕದ ಬಂಡವಾಳದಿಂದ ನಿರ್ವಹಿಸಲಾಗುತ್ತಿತ್ತು. ನಮ್ಮ ಸ್ವಂತದ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವಲ್ಲಿ ನಮ್ಮ ಸರ್ಕಾರದೊಂದಿಗೆ ಸಹಕರಿಸಲು ಅವು ನಿರಾಕರಿಸಿದವು. ವಿಖ್ಯಾತ ಭೂಶಾಸ್ತ್ರಜ್ಞ ಎನ್.ಎ.ಕಾಲಿನಿನ್‌ರ ನೇತೃತ್ವದಲ್ಲಿ ನಿಯೋಗವೊಂದು 195 5 ರಲ್ಲಿ ಭಾರತಕ್ಕೆ ಸಹಕಾರದ ಮನವಿಯ ಮೇರೆಗೆ, ಭೇಟಿ ನೀಡಿತು. ಅವರು ನಮ್ಮಲ್ಲಿರುವ ಎಲ್ಲ ವಿವರಗಳ ವ್ಯಾಪಕ ಅಧ್ಯಯನ ನಡೆಸಿ ವಿವಿಧ ಸ್ಥಳಗಳನ್ನೂ ಸಂದರ್ಶಿಸಿದರು. ಎನ್.ಎ.ಕಾಲಿನಿನ್ ಭಾರತದಲ್ಲಿ ಸಾಕಷ್ಟು ತೈಲ ಮತ್ತು ನೈಸರ್ಗಿಕ ಅನಿಲಗಳ ನಿಕ್ಷೇಪಗಳಿವೆ ಎಂಬ ಪ್ರೋತ್ಸಾಹದಾಯಕ ವರದಿ ನೀಡಿದರು. ತೈಲ ಮತ್ತು ನೈಸರ್ಗಿಕ ಅನಿಲಗಳ ಕಮೀಷನ್ ಅನ್ನು 195 6ರಲ್ಲಿ ಸ್ಥಾಪಿಸಲಾಯಿತು. ಸೋವಿಯತ್ ಸಹಾಯದೊಂದಿಗೆ ಮಾಡಿದ ಶೋಧನೆಯಿಂದ ಹಲವು ನಿಕ್ಷೇಪಗಳನ್ನು ಪತ್ತೆ ಹಚ್ಚಲು ಸಾಧ್ಯವಾಗಿದೆ.

ಸೋವಿಯತ್ ತಜ್ಞರು ಭಾರತೀಯರನ್ನು ತರಬೇತು ಮಾಡಲು ಸಹಾಯ ಮಾಡಿದರು. ಸೋವಿಯತ್‌ನ ಸಹಾಯದೊಂದಿಗೆ ಬರೋಡದಲ್ಲಿ ತೈಲ ಸಂಸ್ಥೆಯೊಂದನ್ನು ಸ್ಥಾಪಿಸಲಾಯಿತು. ಡೆಹ್ರಾಡೂನ್‌ನಲ್ಲಿ 'ಹಿಂದ್' ತೈಲ ನಿಯೋಜನ ಸಂಸ್ಥೆ ಮತ್ತು ತರಬೇತು ಸಂಸ್ಥೆಯನ್ನು ಮೊದಲಿನಿಂದಲೂ ಹಿಡಿದು ಸೋವಿಯತ್ ಸಂಘ ಸಹಾಯದೊಂದಿಗೆ ಬೆಳೆಸಲಾಯಿತು. ಇಂದಿನ ತೈಲ ರಂಗದಲ್ಲಿ ದುಡಿಯುತ್ತಿರುವ ಒಂದು ಲಕ್ಷಕ್ಕೂ ಹೆಚ್ಚು ವಿಜ್ಞಾನಿಗಳು ಇಂಜಿನಿಯರ್‌ಗಳು ದುಡಿಮೆಗಾರರು ದೇಶದ ದೊಡ್ಡ ಸಂಪತ್ತು. ಅವರು ದೇಶದ ಸ್ವಾವಲಂಬನೆಯನ್ನು ರಕ್ಷಿಸಬಲ್ಲ ಒಂದು ದೊಡ್ಡ ಶಕ್ತಿಯಾಗಿದ್ದಾರೆ.

ಮುಖ್ಯವಾದದ್ದು. ಇವತ್ತಿನ ಪ್ರಮಾಣದಲ್ಲೇ (ಅದರೆ ವಾರ್ಷಿಕ 15 0 ಮಿಲಿಯ ಟನ್ನುಗಳಷ್ಟು) ಕಲ್ಲಿದ್ದಲಿನ ಉಪಯೋಗವಾದರೆ ಭಾರತಕ್ಕೆ ಮುಂದಿನ 200 ವರ್ಷಗಳಿಗೆ ಸಾಕಾಗುವಷ್ಟು ಕಲ್ಲಿದ್ದಲು ನಮ್ಮ ದೇಶದಲ್ಲಿದೆ.

ನಮ್ಮ ದೇಶದಲ್ಲಿನ ಕಲ್ಲಿದ್ದಲು ಉತ್ಪಾದನಾ ವಿಧಾನಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ರೂಪಿಸಿದ್ದರೂ ಖಾಸಗೀ ಬಂಡವಾಳದಿಂದಲೇ ಅದು ನಡೆಯಬೇಕಾಗಿತ್ತು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ತೀವ್ರವಾಗಿ ಹೆಚ್ಚಿದ ಶಕ್ತಿಯ ಬೇಡಿಕೆ ಮತ್ತು ಉಕ್ಕು ತಯಾರಿಕೆಗೆ ಬೇಕಾದ ಕಲ್ಲಿದ್ದಲಿನ ಅವಶ್ಯಕತೆಗಳನ್ನು ಪೂರೈಸುವುದು ಖಾಸಗೀ ಬಂಡವಾಳಕ್ಕೆ ಸಾಧ್ಯವಿರಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ 195 6ರಲ್ಲಿ ಸೋವಿಯೆತ್ ಒಕ್ಕೂಟದೊಂದಿಗೆ ಒಪ್ಪಂದದಡಿ ಸಾರ್ವಜನಿಕ ವಲಯದಲ್ಲಿ ಸ್ಥಾಪನೆಗೊಂಡ ರಾಷ್ಟ್ರೀಯ ಕಲ್ಲಿದ್ದಲು ಅಭಿವೃದ್ಧಿ ನಿಗಮ ಕೊಬ್ರ್ಾ ಕಲ್ಲಿದ್ದಲು ಅಭಿವೃದ್ಧಿಪಡಿಸುವಲ್ಲಿ ಅತ್ಯಂತ ಹಿರಿಯ ಪಾತ್ರ ವಹಿಸಿತು. ರಷ್ಯಾದ ಸಹಾಯದಿಂದ ಕಲ್ಲಿದ್ದಲು ಗಣಿ ಕೊರೆಯುವ ಯಂತ್ರಗಳ ಉತ್ಪಾದನೆಯನ್ನು 'ಗಣಿ ಮತ್ತು ಇತರ ಯಂತ್ರಗಳ ನಿಗಮ' ಪ್ರಾರಂಭಿಸಿತು. ಕಲ್ಲಿದ್ದಲು ಉತ್ಪಾದನೆ ಐದು ಪಟ್ಟು ಹೆಚ್ಚಾಗಿ 15 0 ಮಿಲಿಯ ಟನ್ನುಗಳಿಗೇರಿತು. ಕೆಲಸಗಾರರ ಸಂಖ್ಯೆ 3.8 ಲಕ್ಷದಿಂದ 6.4ಲಕ್ಷಕ್ಕೇರಿತು. ಈ ಮೂವತ್ತು ವರ್ಷಗಳಲ್ಲಿ ದುಡಿಮೆಗಾರನ ತಲಾ ಉತ್ಪಾದನೆ ಇಮ್ಮಡಿಸಿತು. ಭಾರತದಲ್ಲಿ ಕಲ್ಲಿದ್ದಲಿನ ಬೆಲೆಯನ್ನು ಅತಿ ಕಡಿಮೆ ಪ್ರಮಾಣದಲ್ಲಿಡಲಾಗಿದೆ. ಇದರಿಂದ ಸಾರ್ವಜನಿಕ ವಲಯದ ಕಲ್ಲಿದ್ದಲು ಉದ್ದಿಮೆ ಪ್ರತಿವರ್ಷ 300 ಕೋಟಿ ರೂ. ಗಳಷ್ಟು ಹಾನಿ ಅನುಭವಿಸುತ್ತಿದೆ.

ತಮ್ಮ 'ದಕ್ಷ' ಉದ್ದಿಮೆಗಳಿಗೆ ಬೇಕಾದ ಮೂಲಭೂತ ಪರಿಹಾರಗಳನ್ನು ಅತ್ಯಂತ ಸುಲಭ ದರದಲ್ಲಿ ಸರ್ಕಾರ (ಸಾರ್ವಜನಿಕ ವಲಯದ ಮೂಲಕ) ಒದಗಿಸಬೇಕೆಂದು ಒತ್ತಾಯಿಸುವ ಖಾಸಗೀ ಉದ್ಯಮಿಗಳು ತಾವು ಉತ್ಪಾದಿಸಿದ ವಸ್ತುಗಳಿಗೆ ಯಾವ ಹಣಕಾಸು ದೃಷ್ಟಿಯಿಂದಲೂ ಸಮರ್ಥಿಸಲಾಗದ ದೊಡ್ಡ ಬೆಲೆಯನ್ನು ಕೇಳುತ್ತಾರೆ. ಇಂತಹ ಶೋಷಣಾತ್ಮಕ ಸಂಬಂಧವನ್ನು ಗಮನಿಸದೆ ಈ ಎರಡು ವಲಯಗಳನ್ನು ಹೋಲಿಸುವುದು ಅರ್ಥಹೀನ.

ಸಾರ್ವಜನಿಕ ವಲಯದ ಎಣ್ಣೆ ಕಂಪನಿಗಳು ಮತ್ತು ಎಣ್ಣೆ ಮತ್ತು ನೈಸರ್ಗಿಕ ಅನಿಲದ ನಿಗಮಗಳು ತಮ್ಮ ಅತ್ಯಧಿಕ ಲಾಭಗಳಿಕೆಯಿಂದಾಗಿ ಇದಕ್ಕೆ ತದ್ವಿರುದ್ಧವಾಗಿ ಕಾಣುತ್ತವೆ. ವಿದೇಶೀ ವಿನಿಮಯದ ಉಳಿತಾಯ ಮಾಡುವ ಉದ್ದೇಶದಿಂದ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಹೆಚ್ಚಾಗೇ ಇಟ್ಟಿರುವುದರಿಂದ ಇದು ಸಾಧ್ಯವಾಗಿದೆ.

ಸಾರ್ವಜನಿಕ ವಲಯದಲ್ಲಿ ಕೇಂದ್ರ ಸರ್ಕಾರದ ಉದ್ದಿಮೆಗಳಾದ ಗಣಿ ಮತ್ತು ಉತ್ಪಾದನಾ ಉದ್ದಿಮೆಗಳಲ್ಲಿ ಆದಾಯ ಮತ್ತು ಉದ್ಯೋಗಾವಕಾಶಗಳ ಸೃಷ್ಟಿಯ ಸಿಂಹಪಾಲು ಕೇಂದ್ರ ಸರ್ಕಾರೀ ಉದ್ದಿಮೆಗಳದ್ದು. ಈ ಉದ್ದಿಮೆಗಳು ಸುಮಾರು ಮೂರನೇ ಎರಡರಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಿದವು. ಉಳಿದ ಭಾಗವನ್ನು ಇಲಾಖಾ ಉದ್ದಿಮೆಗಳಾದ ಮದ್ದು-ಗುಂಡುಗಳ ಫ್ಯಾಕ್ಟರಿ ಇತ್ಯಾದಿಗಳು ಭರಿಸುತ್ತವೆ.

ಖಾಸಗೀ ವಲಯದ ಕಾರ್ಯ ನಿರ್ವಹಣೆ

ನಮ್ಮ ಬಂಡವಾಳ ಶಾಹಿಗಳು ಖಾಸಗೀ ವಲಯವನ್ನು ಬಣ್ಣದಿಂದ ಬೆಳಗಿಸುತ್ತಾರೆ. ಆದರೆ ಈ ಬಣ್ಣದ ಹಿಂದೆ ಇರುವ ಕೊಳೆತು ನಾರುವ ಭಾಗವನ್ನು ಮರೆ ಮಾಡಲು ಪ್ರಯತ್ನಿಸುತ್ತಾರೆ. ಮೊಟ್ಟ ಮೊದಲನೆಯದಾಗಿ ನಾವು ಗಮನಿಸಬೇಕಾದ ಅಂಶ ಖಾಸಗಿ ವಲಯದ ಲಾಭ ಎಂದರೆ ಸಾರ್ವಜನಿಕ ವಲಯದ ಹಾನಿ ಎಂದೇ ಅರ್ಥ. ಆರ್ಥಿಕ ಚಟುವಟಿಕೆಗಳಿಗೆ ಹರಹುಳ್ಳ ಅಂತರ್ರಚನೆಯ ತಳಹದಿಯನ್ನೊದಗಿಸುವ ಸಾರ್ವಜನಿಕ ವಲಯ ಬರೇ ಲಾಭಕೋರತನವನ್ನು ಪ್ರದರ್ಶಿಸುವುದು ಸಾಧ್ಯವಿಲ್ಲ. ವ್ಯತಿರಿಕ್ತವಾಗಿ, ಬಹಳ ಕಡಿಮೆ ಬೆಲೆಯಲ್ಲಿ ಈ ಅನುಕೂಲಗಳನ್ನು ಸೃಜಿಸಿಕೊಡಲಾಗುತ್ತದೆ. ಆದರ ನೇರ ಲಾಭ ಪಡೆಯುವುದು ಖಾಸಗೀವಲಯ. ಅಂಕಿ ಸಂಖ್ಯೆಗಳನ್ನು ಗಮನಿಸುವಲ್ಲಿ ನಾವು ಕಾಣುವುದು- ಶೇ. 74ಕ್ಕೂ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಶೇ. 84ಕ್ಕಿಂತ ಹೆಚ್ಚಿನ ಉದ್ಯೋಗ ನೀಡಿಕೆಯನ್ನು ಸಾರ್ವಜನಿಕ ವಲಯ (ಈ ಕಡಿಮೆ ಬೆಲೆಯ ಅಂತರ್ರಚನೆಯನ್ನು) ಖಾಸಗೀ ವಲಯದ ಉಪಯೋಗಕ್ಕಾಗಿ ನೀಡುತ್ತದೆ.

ಉಳಿದ ಬಂಡವಾಳದಲ್ಲಿ ಅರ್ಧದಷ್ಟನ್ನು ಇತರೆ ಉತ್ಪನ್ನಗಳ ಉದ್ದಿಮೆಗಳಲ್ಲಿ ವಿನಿಯೋಗಿಸಿದ್ದರೆ ಇನ್ನರ್ಧ ಖಾಸಗಿ ವಲಯದಿಂದ ವಹಿಸಿಕೊಂಡ ರೋಗ ಪೀಡಿತ ಉದ್ದಿಮೆಗಳಿಗಾಗಿ ವ್ಯಯವಾಗುತ್ತಿದೆ. ಬಹಳ ಕಣ್ಣಿಗೆ ರಾಚುವ ಒಂದು ಉದಾಹರಣೆ: ಭಾರತೀಯ ಬಂಡವಾಳಗರಿಗೆ ಬಹುದೊಡ್ಡ ಅರ್ಥಮೂಲ- ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಸಾರ್ವಜನಿಕ ವಲಯದ ಇತರ ಹಣಕಾಸು ಸಂಸ್ಥೆಗಳು. ಖಾಸಗೀ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ವಿವಿಧ ರಾಜ್ಯ ಸರ್ಕಾರಗಳು ವಿವಿಧ ಸವಲತ್ತುಗಳನ್ನು ನೀಡುತ್ತ ತಮ್ಮ ತಮ್ಮೊಳಗೇ ಸ್ಪರ್ಧಿಸುತ್ತಿರುವ ವಿಷಯ ತೀರ ಸಾಮಾನ್ಯವಾಗಿದೆ. ಇಷ್ಟೆಲ್ಲ ಪ್ರಾಮುಖ್ಯತೆಯನ್ನು ನೀಡಿದಾಗ್ಯೂ ಭಾರತದ ಬಂಡವಾಳಿಗರ ಕಾರ್ಯ ನಿರ್ವಹಣೆ ಹೇಗಿದೆ?

ಸಹಸ್ರಾರು ರೋಗಪೀಡಿತ ಉದ್ದಿಮೆಗಳನ್ನು ಪ್ರತಿವರ್ಷವೂ ನಮ್ಮ ಖಾಸಗೀ ವಲಯ ದೇಶಕ್ಕೆ ಅರ್ಪಿಸುತ್ತಿವೆ. ಕೋಟ್ಯಂತರ ರೂ.ಗಳ ಆಸ್ತಿ-ಬಂಡವಾಳವನ್ನು ಬರಡುಗೊಳಿಸಲಾಗುತ್ತಿದೆ. ಸರ್ಕಾರದಿಂದ ದೊರೆಯುವ ಸಹಾಯಧನ ಮತ್ತು ಇತರೆ ಸವಲತ್ತುಗಳಿಂದಾಗಿ ಇಂದು ಖಾಸಗೀ ವಲಯದಲ್ಲಿ ಉದ್ದಿಮೆ ಪ್ರಾರಂಭಿಸುವುದೇ ಒಂದು ದೊಡ್ಡ ವ್ಯಾಪಾರವಾಗಿದೆ. 'ಹಸಿದು ಕೊತ್

ಮಿಲಿಯಗಟ್ಟಲೇ ಜನರ ಉಳಿತಾಯಗಳನ್ನು ಬರಡು ಕೊರಡಿನ ಮೇಲೆ ಹೂಡಲಾಗುತ್ತಿದೆ. ಹಾಗೇ ನೋಡಿದರೆ ಭಾರತದ ಬೂರ್ಜ್ವಾ ವರ್ಗ ಸಾರ್ವಜನಿಕ ವಲಯದ ಮೇಲೆ ಮಾಡುತ್ತಿರುವ ಆಪಾದನೆಗಳು ಅದಕ್ಕೇ ಅನ್ವಯವಾಗುತ್ತವೆ.

ದೇಶದ ಶೇರು ಮಾರುಕಟ್ಟೆ ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳನ್ನು ಗಮನಿಸಿದರೆ ಖಾಸಗೀ ವಲಯದ ಹಗರಣಕಾರಕ ಕಾರ್ಯನಿರ್ವಹಣೆ ಗೊತ್ತಾಗುತ್ತದೆ. ಖಾಸಗೀ ವಲಯದಲ್ಲಿ ಸುಮಾರು 117000ಕ್ಕೂ ಹೆಚ್ಚು ಜಾಯಿಂಟ್ ಸ್ಟಾಕ್ ಕಂಪನಿಗಳಿವೆ. ಅದರಲ್ಲಿ ಸುಮಾರು 15 000 ಗಳಷ್ಟು ಸಾರ್ವಜನಿಕ ನಿಯಮಿತ ಕಂಪನಿಗಳು (ಪಬ್ಲಿಕ್ ಲಿಮಿಟೆಡ್) ಇವುಗಳಲ್ಲಿ ಕೆಲವೇ ಕಂಪನಿಗಳ ಷೇರುಗಳನ್ನು ಮಾತ್ರ ಷೇರು ಮಾರುಕಟ್ಟೆಯಲ್ಲಿ ಕಾಣಬಹುದು. ಇನ್ನುಳಿದ ಬಹುತೇಕ ಪ್ರಸಂಗಗಳಲ್ಲಿ ಷೇರು ಸರ್ಟಿಫಿಕೇಟ್‌ಗಳಿಗೆ ಅವುಗಳು ಮುದ್ರಿತವಾಗಿರುವ ಕಾಗದದ ಬೆಲೆಯೂ ಇರುವುದಿಲ್ಲ.

ಹೀಗೆ ಖಾಸಗೀ ವಲಯಕ್ಕೆ ಸಾರ್ವಜನಿಕ ವಲಯದೊಂದಿಗೆ ಪರೋಪಜೀವಿಯ ಸಂಬಂಧವಿದೆ. ಪ್ರತಿವರ್ಷವೂ ಸಾರ್ವಜನಿಕ ವಲಯ ಖರೀದಿ ಸಾಗಿಸಿ ಮತ್ತು ಕಟ್ಟಡಗಳ ಮೇಲೆ ಸಾವಿರಾರು ಕೋಟಿಗಳಷ್ಟು ಖರ್ಚು ಮಾಡುತ್ತದೆ. ಆದರ ಪೂರ್ಣ ಲಾಭವನ್ನು ಖಾಸಗೀ ವಲಯ ಪಡೆಯುತ್ತಿದೆ. • ಪುಟ 8

ಸಾರ್ವಜನಿಕ ವಲಯದ ಬಂಡವಾಳ ಹೂಡಿಕೆಯಲ್ಲಿ ಮುಕ್ಕಾಲು ಪಾಲು ವಿನಿಯೋಗವಾಗುವುದು ಖಾಸಗೀ ಉದ್ದಿಮೆಗಳಿಗೆ ಅಗತ್ಯ ವಿದ್ಯುತ್, ಸಾಗಿಣೆ, ಹಣಕಾಸು ಮತ್ತಿತರ ಮೂಲಭೂತ ಪರಿಕರಗಳನ್ನು ಒದಗಿಸುವುದಕ್ಕಾಗಿಯೇ. ಖಾಸಗೀ ಬಂಡವಾಳಿಗರು ತಮ್ಮದೇ ಸೊತ್ತು ಎನ್ನಬಹುದಾದ ಗಣಿ ಮತ್ತು ಉತ್ಪಾದನೆಯ ರಂಗದ ಶ್ರಮಶಕ್ತಿಯ ಕೇವಲ 1% ಮಾತ್ರವೇ ಸಾರ್ವಜನಿಕ ವಲಯದಲ್ಲಿದೆ. ಈ 1% ದೇಶದ ರಾಷ್ಟ್ರೀಯ ವರಮಾನಕ್ಕೆ ಸಲ್ಲಿಸುವ ಕಾಣಿಕೆ 4%. ದೇಶದ ಅಪಾರ ಬಂಡವಾಳವನ್ನು ನಿರುಪಯೋಗಿ ಉದ್ಯೋಗಾವಕಾಶ ಸೃಷ್ಟಿಸಲು ಸಾರ್ವಜನಿಕ ವಲಯ ಪೋಲು ಮಾಡುತ್ತಿದೆ ಎಂಬ ವಾದದ ಪೊಳ್ಳುತನಕ್ಕೆ ಬೇರೆ ಆಧಾರ ಬೇಕೆ ?

ವಿಕೇಂದ್ರೀಕರಣವೋ-ಕೇಂದ್ರೀಕರಣವೋ

ಪ್ರಧಾನಮಂತ್ರಿಗಳ ಬಾಯಿಂದ ಈಗ ಪಂಚಾಯತೀ ರಾಜ್ಯದ, ವಿಕೇಂದ್ರೀಕರಣದ ಮಾತುಗಳು ಬಹಳ ಕೇಳಬರುತ್ತಿವೆ. ಇದಕ್ಕಾಗಿ ಸಂವಿಧಾನ ತಿದ್ದುಪಡಿಯ ಮಾತು ಕೇಳಬರುತ್ತಿದೆ. ಇದೇಕೆ? ಪ್ರಜಾಸತ್ತಾತ್ಮಕ ವಿಕೇಂದ್ರಿಕರಣದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತಿದೆಯೇ ? ಅಥವಾ ನಿಜವಾದ ವಿಕೇಂದ್ರಿಕರಣದ ಪ್ರಶ್ನೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನವೇ ? ಇದನ್ನು ವಿಶ್ಲೇಷಿಸಿದ ಪಿ.ಡಿ.ಸಂಪಾದಕೀಯದ ಸಂಗ್ರಹಾನುವಾದ ಇದು.

ಪಂಚಾಯತೀ ರಾಜ್ಯದ ಮೊದಲ ಪ್ರಾದೇಶಿಕ ಸಮ್ಮೇಳನ ದೆಹಲಿಯಲ್ಲಿ ಜನವರಿ ಅಂತ್ಯದಲ್ಲಿ ನಡೆಯಿತು. ಇದು ಉತ್ತರ ಮತ್ತು ಪಶ್ಚಿಮದ ರಾಜ್ಯಗಳದ್ದು. ಇದೇ ರೀತಿ ಪೂರ್ವದ ರಾಜ್ಯಗಳದ್ದು ಕಲ್ಕತ್ತೆಯಲ್ಲಿ, ದಕ್ಷಿಣದ್ದು ಬೆಂಗಳೂರಿನಲ್ಲಿ ನಡೆಯಲಿದೆಯಂತೆ.

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನತೆಯ ಪರಿಣಾಮಕಾರಿ ಭಾಗವಹಿಸುವಿಕೆ ಬಹು ಮುಖ್ಯ. ಜಿಲ್ಲಾ ಯೋಜನಾ ವ್ಯವಸ್ಥೆಯ ಹಾಗೂ ವಿಕೇಂದ್ರಿಕೃತ ಕಾರ್ಯಕ್ರಮ ಜ್ಯಾರಿಯ ಸಾಮರ್ಥವನ್ನು ಹೆಚ್ಚಿಸುವ ಪ್ರಶ್ನೆಗಳನ್ನು ಗುರುತಿಸುವುದು ಸಮ್ಮೇಳನದ ಉದ್ದೇಶ ಎಂದು ಹೇಳಲಾಗಿತ್ತು. ಮೊದಲು ಜಿಲ್ಲಾ ಕಲೆಕ್ಟರುಗಳೊಂದಿಗೆ, ಮುಖ್ಯ ಸರಕಾರೀ ಕಾರ್ಯದರ್ಶಿಗಳೊಂದಿಗೆ ಪ್ರಧಾನ ಮಂತ್ರಿಗಳ ಭೇಟಿಗಳಿಂದ ಪ್ರಜಾಸತ್ತಾತ್ಮಕ ವಿಕೇಂದ್ರಿಕರಣದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತಿದೆಯೇ? ಕಾಂಗ್ರೆಸ್(ಐ) ಹಾಗೆಂದು ಹೇಳಿಕೊಳ್ಳುತ್ತಿದೆ.

"ಗಾಂಧೀ, ನೆಹರೂ ತತ್ವಗಳಿಗೆ ಅನುಗುಣವಾಗಿ ದೇಶದ ಪ್ರಜಾಪ್ರಭುತ್ವದ ಈ ಪ್ರಮುಖ ಭಾಗಕ್ಕೆ, ಮೂರನೇ ಹಂತದ ಸಂಸ್ಥೆಗಳಿಗೆ ಹೊಸ ದಿಕ್ಕು ನೀಡಲಾಗುತ್ತಿದೆ. ಈ ವಿಕೇಂದ್ರಿಕರಣ ತರುವಲ್ಲಿ ತಡವಾಗಿದೆ ನಿಜ. ಜಿಲ್ಲಾ ಪರಿಷತ್ತುಗಳಿಗೆ, ಬ್ಲಾಕ್ ಸಮಿತಿಗಳಿಗೆ, ಗ್ರಾಮ ಪಂಚಾಯತುಗಳಿಗೆ ಹೆಚ್ಚು ಅಧಿಕಾರ ನೀಡಲು ನಾವು ವಚನಬದ್ಧರು. ಇದು ಅಭಿವೃದ್ಧಿಯಲ್ಲಿ ಹೊಸ ಯುಗವನ್ನು ತರುತ್ತದೆ. ಯಾಕೆಂದರೆ ತಮ್ಮ ಪ್ರದೇಶದ ಬಗ್ಗೆ ಇತರರಿಗಿಂತ ಹೆಚ್ಚು ಅರಿವಿರುವ ಜನ ತಮ್ಮ ಪ್ರದೇಶದ ವಿಶಿಷ್ಟ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುತ್ತಾರೆ" ಎಂದೆಲ್ಲಾ ಪ್ರಧಾನಮಂತ್ರಿಗಳು ಈ ಸಮ್ಮೇಳನದಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಈ ಎಲ್ಲಾ ವಿಚಾರಗಳನ್ನು ಗಂಭೀರವಾಗಿ ತಗೊಂಡಿದ್ದರೆ ಪ್ರಧಾನಮಂತ್ರಿಗಳು ತಮ್ಮ ಚರ್ಚೆಯನ್ನು ಆರಂಭಿಸಬೇಕಾಗಿದ್ದದ್ದು ಜಿಲ್ಲಾ ಕಲೆಕ್ಟರುಗಳೊಂದಿಗೆ ಅಥವಾ ಮುಖ್ಯ ಸರಕಾರೀ ಕಾರ್ಯದರ್ಶಿಗಳೊಂದಿಗೆ ಅಲ್ಲ, ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಆರಂಭಿಸಬೇಕಾಗಿತ್ತು. ಅದರ ವೇದಿಕೆಯಾದ ರಾಷ್ಟ್ರಿಯ ಅಭಿವೃದ್ಧಿ ಮಂಡಳಿಯಲ್ಲಿ ಚರ್ಚಿಸಬೇಕಾಗಿತ್ತು. ಈ ಮಂಡಳಿಯ ತೀರ್ಮಾನದ ನಂತರವೇ ರಾಜ್ಯ ಸರಕಾರಗಳ ಮೂಲಕವಷ್ಟೇ ಜಿಲ್ಲಾ ಕಲೆಕ್ಟರುಗಳ, ಮುಖ್ಯ ಕಾರ್ಯದರ್ಶಿಗಳ ಅಭಿಪ್ರಾಯ ಕೇಳಬೇಕಾಗಿತ್ತು.

ಆದರೆ ಹೀಗೆ ಮಾಡಲಿಲ್ಲ. ಯಾಕೆಂದರೆ ಆಗ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಅಖಿಲ ಭಾರತ ಕೇಂದ್ರ ಮತ್ತು ರಾಜ್ಯಗಳ ನಡುವೆ ವಿಕೇಂದ್ರಿಕರಣವೋ ಅಥವಾ ಕೇಂದ್ರಿಕರಣವೋ ಎಂಬ ಪ್ರಶ್ನೆಯನ್ನು, ಕಾಂಗ್ರೆಸ್(ಐ)ಗೆ ಮತ್ತು ಕೇಂದ್ರ ಸರಕಾರಕ್ಕೆ ಪ್ರತಿಕೂಲವಾದ ಪ್ರಶ್ನೆಯನ್ನು ಎತ್ತಿದರೆ ಏನೆಂದು ಉತ್ತರಿಸುವುದು?

'ಪಂಚಾಯತೀ ರಾಜ್ಯ'ದಂತೆ ಕೇಂದ್ರ-ರಾಜ್ಯ ಸಂಬಂಧಗಳೂ ಹಲವು ಬಾರಿ ಚರ್ಚೆಗೆ, ಪರೀಕ್ಷೆಗೆ ಒಳಗಾದ ವಿಷಯ ಒಂದು ವರ್ಷದ ಹಿಂದೆ ಸಲ್ಲಿಸಲ್ಪಟ್ಟ ಸರ್ಕಾರಿಯಾ ಆಯೋಗದ ವರದಿ ಇದರಲ್ಲಿ ಇತ್ತೀಚಿಗಿನದ್ದು. ಯೋಜನಾ ಪ್ರಕ್ರಿಯೆ ಮತ್ತು ಕೇಂದ್ರದಲ್ಲಿ ಏಕೈಕ ಪಕ್ಷದ ದೀರ್ಘ ಪ್ರಾಬಲ್ಯದಿಂದಾಗಿ ಹೇಗೆ ರಾಜ್ಯಗಳ ಅಧಿಕಾರಗಳು ಮೆಲ್ಲ-ಮೆಲ್ಲನೆ ಸವೆಯುತ್ತಾ ಬಂದು ಕೇಂದ್ರದ ಅಧಿಕಾರಗಳು ಹೆಚ್ಚುತ್ತಾ ಬಂದವು ಎಂಬುದನ್ನು ಸರ್ಕಾರಿಯಾ ವರದಿ ತೋರಿಸಿಕೊಟ್ಟಿದೆ. ಕೇಂದ್ರ ಸರ್ಕಾರದ ಕೈಯಲ್ಲಿ ಸಂವಿಧಾನ ಇಟ್ಟ ಅಧಿಕಾರ ಹೇಗೆ ಕೇಂದ್ರದ ಆಳುವ ಪಕ್ಷದ ಸಂಕುಚಿತ ಹಿತಾಸಕ್ತಿಗಳಿಗಾಗಿ ದುರುಪಯೋಗವಾಯಿತು; ಆಳುವ ಪಕ್ಷದೊಳಗೂ ರಾಜ್ಯದಲ್ಲಾಳುತ್ತಿದ್ದ ಗುಂಪುಗಳ ವಿರುದ್ಧ ಕೇಂದ್ರದಲ್ಲಾಳುತ್ತಿದ್ದ ಗುಂಪುಗಳ ಹಿತಾಸಕ್ತಿಗಳಿಗಾಗಿ ದುರುಪಯೋಗವಾಯಿತು ಎಂಬ ಸಂಗತಿಯೂ ಈ ವರದಿಯಿಂದ ಕಂಡುಬರುತ್ತದೆ. ಆದ್ದರಿಂದಲೇ ಜನವರಿ ಕೊನೇವಾರದಲ್ಲಿ ಕಲ್ಕತ್ತೆಯಲ್ಲಿ ಸಭೆಸೇರಿದ್ದ ಕಾಂಗ್ರೆಯೇತರ ಮುಖ್ಯಮಂತ್ರಿಗಳು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಈ ವರದಿಯ ಚರ್ಚೆಯಾಗಬೇಕೆಂದು ಒತ್ತಾಯಿಸಿರುವುದು.

ಹೀಗೆ ಪ್ರಧಾನಮಂತ್ರಿಗಳು ಪಂಚಾಯತೀ ರಾಜ್ಯದ ಬಗ್ಗೆ ಮೇಲಿಂದ ಮೇಲೆ ಮಾತನಾಡುತ್ತಿರುವುದರ ಉದ್ದೇಶ ಕೇಂದ್ರ-ರಾಜ್ಯ ಸಂಬಂಧಗಳ ಕುರಿತಾದ ದೀರ್ಘಕಾಲದ ಪ್ರಶ್ನೆಯ ಪರಿಶೀಲನೆಯಿಂದ ತಪ್ಪಿಸಿಕೊಳ್ಳುವುದೇ ಆಗಿದೆ. ಅದೇ ರೀತಿ ರಾಜ್ಯಗಳ ಮಂತ್ರಿಮಂಡಳಿಗಳನ್ನು ಬದಿಗೊತ್ತಿ ಸಂವಿಧಾನದ ಪ್ರಕಾರ ರಾಜ್ಯಸರಕಾರಗಳ ನೇರ ಉಸ್ತುವಾರಿಗೊಳಗಾಗಿರುವ ಆಡಳಿತಾಧಿಕಾರಿಗಳೊಂದಿಗೆ ವರ್ತಿಸುವ ಅವರ ಕ್ರಮ ನವದೆಹಲಿಯಲ್ಲಿ ಅಧಿಕಾರಗಳನ್ನು ಕೇಂದ್ರೀಕರಿಸುವ ಪ್ರಯತ್ನದ ದ್ಯೋತಕ. ಪ್ರಜಾಪ್ರಭುತ್ವ-ವಿರೋಧಿ ಹಾಗೂ ರಾಜ್ಯಗಳ ಅಧಿಕಾರಗಳನ್ನು ಆಕ್ರಮಿಸಿಕೊಳ್ಳುವ ಪ್ರಸ್ತಾಪಗಳೂ ಬಂದಿವೆ. ಅವುಗಳಲ್ಲೊಂದು ಬ್ರಿಟಿಷರ ಕಾಲದಲ್ಲಿದ್ದಂತೆ ಜಿಲ್ಲಾ ಮಾಜಿಸ್ಟ್ರೇಟ್‌ಗಳಿಗೆ ನ್ಯಾಯಾಂಗದ ಅಧಿಕಾರಗಳನ್ನು ಕೊಡಮಾಡುವುದು! ಪಂಚಾಯತುಗಳಿಗೆ ಚುನಾವಣೆಗಳನ್ನು ಕೇಂದ್ರಿಯ ಚುನಾವಣಾ ಆಯೋಗವೇ ನಡೆಸುವುದು ಮತ್ತು ಈ ಸಂಸ್ಥೆಗಳ ಮೇಲೆ ಮತ್ತು ಜಿಲ್ಲಾ ಯೋಜನಾ ವ್ಯವಸ್ಥೆಯ ಮೇಲೆ ಕೇಂದ್ರದ ನೇರ ಹತೋಟಿಯನ್ನು ಅಧಿಕೃತ ರೂಪ ಕೊಡಲು ಸಂವಿಧಾನದ ತಿದ್ದುಪಡಿ-ಚುನಾಯಿತ ರಾಜ್ಯ ಸರಕಾರಗಳನ್ನು ಬದಿಗೆ ತಳ್ಳಿ ಇವನ್ನೆಲ್ಲಾ ಮಾಡಲಾಗುವುದು!

ಭಾರತದ ಸ್ವದೇಶದಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣವೆಂದರೆ ಎಲ್ಲಾ ಹಂತಗಳಲ್ಲಿ-ಕೇಂದ್ರ, ರಾಜ್ಯಗಳು, ಜಿಲ್ಲೆಗಳು, ಮಧ್ಯದ ಹಂತಗಳು, ಮತ್ತು ಹಳ್ಳಿಗಳಲ್ಲಿ ಆಡಳಿತದ ಚುನಾಯಿತ ಸಂಸ್ಥೆಗಳಿರಬೇಕು. ಖಾಯಂ ಸೇವಾ ಸಿಬ್ಬಂದಿ ಈ ಸಂಸ್ಥೆಗಳಿಗೆ ಅಧೀನವಾಗಿರಬೇಕು. ಪ್ರತೀ ಹಂತದ ಆಡಳಿತದ ಚಟುವಟಿಕೆಯ ವ್ಯಾಪ್ತಿ ಮತ್ತು ಅಧಿಕಾರಗಳನ್ನು ನಿರ್ದಿಷ್ಟಪಡಿಸಬೇಕು.

ಆದರೆ ಈಗ ಸಿದ್ಧಗೊಳ್ಳುತ್ತಿರುವ ಕಾಂಗ್ರೆಸ್(ಐ) ಮಾದರಿಯ ಪಂಚಾಯತೀ ರಾಜ್ಯ ಎಲ್ಲಾ ಆಡಳಿತ ಅಧಿಕಾರಿಗಳನ್ನು ಕೇಂದ್ರದಲ್ಲಿ ಒಟ್ಟಾಗಿಸಿ ಕೇಂದ್ರ-ರಾಜ್ಯ ಸಂಬಂಧಗಳ ಪ್ರಜಾಸತ್ತಾತ್ಮಕ ಪುನರ್ರಚನೆಯ ಅವಕಾಶಗಳನ್ನೇ ನಾಶಪಡಿಸುವಂತಹದು. ಪ್ರಜಾಪ್ರಭುತ್ವದ ವಿಸ್ತರಣೆಯಲ್ಲಿ, ಸರ್ವಾಧಿಕಾರವನ್ನು ಪ್ರತಿರೋಧಿಸುವಲ್ಲಿ ಆಸಕ್ತಿ ಹೊಂದಿರುವ ಪ್ರಜಾಪ್ರಭುತ್ವ ಶಕ್ತಿಗಳೆಲ್ಲಾ ಒಟ್ಟಾಗಿ ರಾಜ್ಯಗಳ ಕಾನೂನುಬದ್ಧ ಅಧಿಕಾರ ವಲಯವನ್ನು ಬುಡಮೇಲು ಮಾಡುವ ಸೂಚನೆಗಳನ್ನು ವಿರೋಧಿಸಬೇಕು.

ಈ ಪ್ರಶ್ನೆಯ ಪರಿಶೀಲನೆ ನಡೆಯುತ್ತಿರುವುದು ಇದು ಮೊದಲ ಬಾರಿಯೇನಲ್ಲ. 195 0ರ ದಶಕದಲ್ಲಿ ಬಲವಂತರಾಯ್ ಮೆಹ್ತಾ ಸಮಿತಿ, 1970ರ ದಶಕದಲ್ಲಿ ಅಶೋಕ ಮೆಹ್ತಾ ಸಮಿತಿ ಈ ಪ್ರಶ್ನೆಗಳನ್ನು ಗುರುತಿಸಿ, ಪರೀಕ್ಷಿಸಿ ನಿರ್ಧಿಷ್ಟ ಶಿಫಾರಸುಗಳನ್ನು ಕೊಟ್ಟಿದ್ದವು. ಅವು ಧೂಳು ತಿನ್ನುತ್ತಿವೆ. ತಪ್ಪು ಯಾರದು? ಪ್ರಥಮತಃ ಕಾಂಗ್ರೆಸ್‌ನದ್ದೇ. ಯಾಕೆಂದರೆ ಆ ಅವಧಿಯ ಬಹುಪಾಲು ಕೇಂದ್ರದಲ್ಲಿ ಮತ್ತು ಹೆಚ್ಚಿನ ರಾಜ್ಯಗಳಲ್ಲಿ ಆಡಳಿತದ ಸೂತ್ರ ಆ ಪಕ್ಷದ ಕೈಯಲ್ಲೇ ಇತ್ತು. 1970ರ ದಶಕದ ಉತ್ತರಾರ್ಧದಲ್ಲಿ, 1980ರ ದಶಕದ ಮೊದಲ ಭಾಗದಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ಸೇತರ ಸರ್ಕಾರಗಳು ತಮ್ಮ ರಾಜ್ಯಗಳಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಿದವು. ಕಾಂಗ್ರೆಸ್ ಸರಕಾರಗಳು ಸುಮಾರಾಗಿ ಚುನಾವಣೆ ನಡೆಸಲೇ ಇಲ್ಲ.

ಅಂದರೆ ಈ ಸಮ್ಮೇಳನ, ಅದಕ್ಕೆ

ಪ್ರಥಮ ಬೆಳಗಾಂ ಜಿಲ್ಲಾ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಘಟಕದ ಪ್ರಥಮ ಸಮ್ಮೇಳನವು ಸವದತ್ತಿ ತಾಲ್ಲೂಕಿನ ಮುನವಳ್ಳಿಯಲ್ಲಿ ಫೆಬ್ರವರಿ 12 ಮತ್ತು 13ರಂದು ಯಶಸ್ವಿಯಾಗಿ ನಡೆಯಿತು.

ಮುನವಳ್ಳಿ ಪಂಚಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ರೈತಕುಲಾರಿ ದಿವಂಗತ ಕಲ್ಲೂರ ರಾಮಗೌಡರ ವೇದಿಕೆಯಲ್ಲಿ ದಿನಾಂಕ 12ರಂದು ಕಾ॥ ಕಪ್ಪಣ್ಣವರ ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನ ಆರಂಭವಾಯಿತು.

ಸಮ್ಮೇಳನದ ಉದ್ಘಾಟನೆಯನ್ನು ರೈತ ಮುಖಂಡ ಕಾ॥ ವಿ.ಎನ್.ಹಳಕಟ್ಟಿ ನೆರವೇರಿಸಿದರು. ರಾಮದುರ್ಗದ ವಿ.ಪಿ.ಕುಲಕರ್ಣಿ, ಸವದತ್ತಿಯ ಎ.ಪಿ.ಮನಗೂಳಿ ಮತ್ತು ಎಸ್.ಬಿ.ಶಿಗ್ಲಿಯವರನ್ನೊಳಗೊಂಡ ಅಧ್ಯಕ್ಷ ಮಂಡಳಿ ಕಲಾಪಗಳನ್ನು ನಿರ್ವಹಿಸಿತು.

ಕಾ॥ ಕಪ್ಪಣ್ಣನವರ ಇವರು ರೈತ ಸಂಘದ ಚಟುವಟಿಕೆಗಳು, ಹೋರಾಟದ ವಿವರಗಳನ್ನೊಳಗೊಂಡ ವರದಿ ಸಲ್ಲಿಸಿದರು. ವರದಿಯ ಮೇಲೆ ನಡೆದ ಚರ್ಚೆಯಲ್ಲಿ 12 ಜನ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಸಮ್ಮೇಳನದ ಸಮಾರೋಪ ಭಾಷಣವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯ ಸಮಿತಿಯ ಕಾರ್ಯದರ್ಶಿ ಕಾ॥ ಚಂದ್ರಶೇಖರ ಬಾಳೆ ನೆರವೇರಿಸಿ ರೈತ ಸಂಘವು ಭೂ ಸಮಸ್ಯೆಯನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಂಡು ಕಾರ್ಯಕ್ರಮ ರೂಪಿಸಬೇಕೆಂದು ಕರೆ ನೀಡಿದರು.

ಕಾ॥ ಎಸ್.ಎಚ್.ಕಪ್ಪಣ್ಣವರ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ, ಎಸ್.ಬಿ.ಶಿಗ್ಲಿ, ಪ್ರಧಾನ ಕಾರ್ಯದರ್ಶಿಯಾಗಿ ವಿ.ಪಿ.ಕುಲಕರ್ಣಿ, ಸಹಕಾರ್ಯದರ್ಶಿಯಾಗಿ ಎಲ್.ಎಸ್.ನಾಯ್ಕ ಮತ್ತು ಖಜಾಂಚಿಯಾಗಿ ಜಿ.ವಿ.ತೊರಗಲ್ ಇವರುಗಳು ಪದಾಧಿಕಾರಿಗಳುಳ್ಳ 11ಜನರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಬೆಂಗಳೂರಿನಲ್ಲಿ ನಡೆಯಲಿರುವ ಭೂ ಸಮಾವೇಶಕ್ಕೆ ಮತ್ತು ಬಳ್ಳಾರಿಯಲ್ಲಿ ಮಾರ್ಚ್ 14, 15 ಮತ್ತು 16ರಂದು ನಡೆಯಲಿರುವ ಕರ್ನಾಟಕ ಪ್ರಾಂತ ರೈತ ಸಂಘದ 9ನೇ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಚುನಾಯಿಸಲಾಯಿತು.

ಸಮ್ಮೇಳನದಲ್ಲಿ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿ ತೆರಿಗೆಯನ್ನು ಭಾರೀ ದಂಡದೊಂದಿಗೆ ವಸೂಲಿ ಮಾಡುತ್ತಿರುವುದನ್ನು ಖಂಡಿಸುವ, ಒಮ್ಮೆಲೆ ಹತ್ತಿ ಬೆಲೆ ಕುಸಿದಿದ್ದು ಕೂಡಲೇ ಬೆಂಬಲಿತ ಬೆಲೆ ನೀಡಿ ಸಿ.ಸಿ.ಆಯ್ ನವರು ಖರೀದಿಬೇಕೆಂದು ಒತ್ತಾಯಿಸುವ ಸವದತ್ತಿ ತಾಲ್ಲೂಕಿನಲ್ಲಿ ಕೆಲವು ಭಾಗದಲ್ಲಿ ಬಡ ರೈತರು ಅರಣ್ಯ ಭೂಮಿ ಸಾಗುವಳಿ ಮಾಡಿದ್ದು ಈಗ ಒಕ್ಕಲೆಬ್ಬಿಸುತ್ತಿರುವುದನ್ನು ಖಂಡಿಸುವ, ಮಲಪ್ರಭೆಗೆ ಮಹಾದಾಯಿ ನದಿ ಕೂಡಿಸಬೇಕೆಂದು ಒತ್ತಾಯಿಸುವ, ವಸತಿ ರಹಿತರಿಗೆ ನಿವೇಶನ ಮತ್ತು ಪಡಿತರ ಕಾರ್ಡ ಕೊಡಬೇಕೆಂದು ಒತ್ತಾಯಿಸುವ ಹರಿಜನ ಗಿರಿಜನ, ಅಲ್ಪಸಂಖ್ಯಾತರ ಮೇಲೆ ದಬ್ಬಾಳಿಕೆ, ದೌರ್ಜನ್ಯ ಹೆಚ್ಚುತ್ತಿರುವುದನ್ನು ಖಂಡಿಸುವ ಠರಾವುಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸಮ್ಮೇಳನದ ನಂತರ ಭಾರೀ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ. ಚಂದ್ರಶೇಖರ್ ಬಾಳೆ, ಕಪ್ಪಣ್ಣವರ, ವಿ.ಪಿ.ಕುಲಕರ್ಣಿ ಮೊದಲಾದವರು ಮಾತನಾಡಿದರು.

ಆರೇಹಳ್ಳಿಯಲ್ಲಿ ಪ್ರಚಾರ ಸಭೆ

ಸಿ.ಐ.ಟಿ.ಯು. ಕರ್ನಾಟಕ 5 ನೇಯ ರಾಜ್ಯ ಸಮ್ಮೇಳನದ ಪ್ರಚಾರದ ಅಂಗವಾಗಿ ಹಾಸನ ಜಿಲ್ಲೆಯ ತೋಟ ಕಾರ್ಮಿಕರ ಕೇಂದ್ರವಾದ ಆರೇಹಳ್ಳಿಯಲ್ಲಿ ಪ್ರಚಾರ ಸಭೆಯೊಂದನ್ನು ತಾ॥ 13-2-89ರಂದು ಕರ್ನಾಟಕ ತೋಟ ಕಾರ್ಮಿಕರ ಸಂಘದ ವತಿಯಿಂದ ನಡೆಸಲಾಯ್ತು. ಈ ಪ್ರಚಾರ ಸಭೆಯಲ್ಲಿ ಭಾಗವಹಿಸಲು ಆರೇಹಳ್ಳಿಯ ಸುತ್ತಮುತ್ತಲ 6-7 ಕಿ.ಮೀ. ದೂರದ ತೋಟಗಳಾದ ವಾಟೇಹಳ್ಳಿ, ಉತ್ತೊಳಲು, ಹಸುರುಗುಡ್ಡ, ಅಣ್ಣಾಮಲೈ, ಅನ್ನಪೂರ್ಣ, ಮೀನಾ, ಮನೋರಮ, ಶಾಂತಳ, ಮಟಸಾಗರ ಕಾಫಿ ಎಸ್ಟೇಟ್, ಈಚಲುವಳ್ಳಿ, ಗುರುಕೃಪ ಮೊದಲಾದ ತೋಟಗಳ ಕಾರ್ಮಿಕರು ವಾಟೇಹಳ್ಳಿ ತೋಟದ ಹತ್ತಿರ ಸೇರಿ ಅಲ್ಲಿಂದ ಮೆರವಣಿಗೆಯಾಗಿ ಘೋಷಣೆಗಳನ್ನು ಕೂಗುತ್ತಾ ಆರೇಹಳ್ಳಿಗೆ ಬಂದು ಅಲ್ಲಿ ಸಂತೆಮೈದಾನದಲ್ಲಿ ಸಭೆ ಸೇರಿದರು. ಸುಮಾರು 800ಕ್ಕೂ ಹೆಚ್ಚು ಕಾರ್ಮಿಕರು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದು ಇವರ ಪೈಕಿ ಅರ್ಧಕ್ಕಿಂತಲೂ ಹೆಚ್ಚು ಮಂದಿ ಮಹಿಳೆಯರಾಗಿದ್ದು, ಆರೇಹಳ್ಳಿಯ ಜನ ಹಾಗೂ ಸಂತೆಗೆ ಬಂದ ಸಾವಿರಾರು ಕಾರ್ಮಿಕರು, ರೈತರು ವೀಕ್ಷಿಸುತ್ತಿದ್ದರು.

ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿ ಸದಸ್ಯ ಕಾ॥ ವಿ.ಸುಕುಮಾರ್, ಕಾ॥ ಟಿ. ರಾಘವೇಂದ್ರ, ಕಾ॥ ವಿ.ಕೃಷ್ಣಮೂರ್ತಿ, ಕಾ॥ ಚಂದ್ರಕಲಾ, ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾ॥ ಜಿ. ಕೃಷ್ಣ ವಹಿಸಿದ್ದು, ಪ್ರಾರಂಭದಲ್ಲಿ ಕಾ॥ ಜಿ.ಪಿ. ಸತ್ಯನಾರಾಯಣ ಸ್ವಾಗತಿಸಿ, ಕೊನೆಯಲ್ಲಿ ಕಾ॥ ದೂಜ ವಂದಿಸಿದರು.

ಜಿಲ್ಲಾ ರೈತಸಮ್ಮೇಳನವನ್ನು ಯಶಸ್ವಿಗೊಳಿಸಲು ಬಂಟ್ವಾಳ ತಾಲ್ಲೂಕು ರೈತ ಸಂಘದ ನಿರ್ಧಾರ

ಬಂಟ್ವಾಳ ತಾಲ್ಲೂಕು ರೈತ ಸಂಘ (ಎ.ಐ.ಕೆ.ಎಸ್.)ನ ಸಭೆಯು ತಾ॥ 16-2-89ರಂದು ಸಂಘದ ಅಧ್ಯಕ್ಷ ಬಿ.ವಾಸುಗಟ್ಟಿಯವರ ಅಧ್ಯಕ್ಷತೆಯಲ್ಲಿ ಬಿ.ಸಿ.ರೋಡಿನಲ್ಲಿ ಸೇರಿತು.

ದಕ್ಷಿಣ ಕನ್ನಡ ಜಿಲ್ಲೆಯ ರೈತ ಸಂಘದ 9ನೇ ಸಮ್ಮೇಳನವು ಮಾರ್ಚ ತಿಂಗಳ 4 ಮತ್ತು 5 ರಂದು ಸುಳ್ಯದಲ್ಲಿ ಜರುಗಲಿರುವುದರಿಂದ ಬಂಟ್ವಾಳ ತಾಲ್ಲೂಕು ಸಮ್ಮೇಳನದಲ್ಲಿ ಸಮ್ಮೇಳನಕ್ಕೆ ಆಯ್ಕೆಗೊಂಡಿರುವ ಎಲ್ಲಾ ಪ್ರತಿನಿಧಿಗಳು ಭಾಗವಹಿಸುವಂತೆ ತೀರ್ಮಾನಿಸಿತು. ಜಿಲ್ಲಾ ಸಮ್ಮೇಳನದ ಪ್ರಚಾರವನ್ನು ತಾಲ್ಲೂಕಿನಾದ್ಯಂತ ಮಾಡಿ ತಾ॥ 5 ರಂದು ಸುಳ್ಯದಲ್ಲಿ ನಡೆಯಲಿರುವ ಜಿಲ್ಲಾ ಸಮ್ಮೇಳನದ ಬಹಿರಂಗ ಸಭೆಗೆ 200, ಜನರು ಭಾಗವಹಿಸಿರುವಂತೆ ಮಾಡಲು ತೀರ್ಮಾನಿಸಿತು.

ದೊಡ್ಡಬಳ್ಳಾಪುರ ತಾ॥ ಸಮ್ಮೇಳನ

ಫೆಬ್ರವರಿ 5 ರಂದು ತಾಲೋಕಿನ ನಾರನಹಳ್ಳಿಯಲ್ಲಿ ತಾಲೋಕು ಸಮ್ಮೇಳನ ಜರುಗಿತು. ಹಿರಿಯ ರೈತ ಮುಖಂಡರಾದ ಕಾ॥ ಮುಗವಾಳಪ್ಪ ರಾಜ್ಯ ಕಾರ್ಯದರ್ಶಿ ಕಾ॥ ಪಿ.ಜಗನ್ನಾಥ್ ಕಾ॥ ಎ.ವಿ. ರಮೇಶ್‌ರವರು ಭಾಗವಹಿಸಿ ಮಾರ್ಗದರ್ಶನ ನೀಡಿದರು. ಕಾ॥ ದೊಡ್ಡಯ್ಯ ಅಧ್ಯಕ್ಷತೆ ವಹಿಸಿದ್ದರು. ನೂತನ ತಾಲೋಕು ಸಮಿತಿಗೆ ಕಾ॥ ಮುತ್ತನರಸಯ್ಯ (ಅಧ್ಯಕ್ಷ) ಕಾ॥ ದೊಡ್ಡಯ್ಯ, ನಾರಾಯಣಚಾರ್ (ಉಪಾಧ್ಯಕ್ಷರು) ಕಾ॥ ವೆಂಕಟರಾಮ್ ಕಾರ್ಯದರ್ಶಿ ನಾರಾಯಣಗೌಡ (ಸಹ ಕಾರ್ಯದರ್ಶಿ) ಕಾ॥ ರೇಣುಕಾರಾಧ್ಯ (ಖಜಾಂಚಿ)ರವರನ್ನು ಆರಿಸಲಾಯಿತು.

ಕಾರ್ಮಿಕ ಮುಖಂಡರುಗಳ ಮೇಲೆ ಹಲ್ಲೆ ಖಂಡನೆ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಮತ್ತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿ.ಐ.ಟಿ.ಯು.) ಸಂಯುಕ್ತ ಆಶ್ರಯದಲ್ಲಿ ದಿನಾಂಕ 11-2-89ರಂದು ಕೇಂದ್ರ ಸರ್ಕಾರದ ಬೆಲೆ ಏರಿಕೆಯನ್ನು ಪ್ರತಿಭಟಿಸಿ ಮತ್ತು 9-2-89ರಂದು ಕಾರ್ಮಿಕ ಮುಖಂಡರುಗಳಾದ ಕಾ॥ ಮಷ್ಕದ್ ಇಬ್ರಾಹಿಂ ಮತ್ತು ಕಾ॥ ಮಷ್ಕದ್‌ರಫಿ (ಆರೀಫ್) ಇವರುಗಳ ಮೇಲೆ ಗೂಂಡಾಗಳು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುವ ಹೇಯ ಕೃತ್ಯವನ್ನು ಪ್ರತಿಭಟಿಸಿ ಭಾರೀ ರ್‍ಯಾಲಿಯನ್ನು (ಮೆರವಣಿಗೆ) ನಡೆಸಲಾಯಿತು.

ಕರ್ನಾಟಕ ಸಂಘದಿಂದ ಹೊರಟ ಮೆರವಣಿಗೆಯು ದೀಪಕ್ ಪೆಟ್ರೋಲ್ ಬಂಕ್, ಲಷ್ಕರ್ ಮೊಹಲ್ಲಾ, ಬಿ.ಬಿ.ಸ್ಟ್ರೀಟ್ ಸೀಗೆಹಟ್ಟಿ, ಬಸ್‌ಸ್ಟಾಂಡ್, ಬಿ.ಹೆಚ್.ರಸ್ತೆ, ಹಾಗೂ ನೆಹರೂ ರಸ್ತೆ ಮಾರ್ಗವಾಗಿ ಸಾಗಿ ಗೋಪಿ ಸರ್ಕಲ್ ಬಳಿ ಸೇರಿತು. ಮೆರವಣಿಗೆಯಲ್ಲಿ ಸಾವಿರಾರು ಯುವಜನ, ಕಾರ್ಮಿಕರು ಪಾಲ್ಗೊಂಡು ಘೋಷಣೆಗಳನ್ನು ಗಗನ ಮುಟ್ಟುವಂತೆ ಕೂಗುತ್ತಿದ್ದರು. ಸಾವಿರಾರು ಜನರು ವೀಕ್ಷಿಸುತ್ತಿದ್ದರು.

ನಂತರ ಗೋಪಿ ಸರ್ಕಲ್ ಬಳಿ ನಡೆದ ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಗಳಾದ ಕಾ॥ ಎಸ್.ಬಿ. ಶಿವಶಂಕರ್ ಅವರು ಮಾತನಾಡುತ್ತಾ ಈ ಹಲ್ಲೆಯನ್ನು ತೀವ್ರವಾಗಿ ಖಂಡಿಸಿದರು. ಗೂಂಡಾಗಿರಿಯನ್ನು ಹತ್ತಿಕ್ಕಲು ಪೊಲೀಸ್ ಇಲಾಖೆಯು ಶ್ರಮಿಸಬೇಕೆಂದು ವಿನಂತಿಸಿದರು. ಹಾಗೂ ಜನತೆ, ಕಾರ್ಮಿಕರು ಒಗ್ಗಟ್ಟಾಗಿ ಹೋರಾಡಬೇಕೆಂದು ಕರೆ ನೀಡಿದರು.

ಆರಂಭದಲ್ಲಿ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸದಸ್ಯರಾದ ಡಾ॥ ಬಿ.ಎಸ್.ದಾಸ್ ಸ್ವಾಗತಿಸಿದರು. ಕೊನೆಯಲ್ಲಿ ಕಾ॥ ಎಸ್.ಎನ್.ವಾಸುದೇವ ವಂದಿಸಿದರು.

ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು.

1. ಕೇಂದ್ರ ಸರ್ಕಾರವು ಪಡಿತರ ಅಕ್ಕಿ ಬೆಲೆ ಏರಿಸಿರುವುದನ್ನು ಸಭೆಯು ತೀವ್ರವಾಗಿ ಖಂಡಿಸಿತು. ಮತ್ತು ಬೆಲೆ ಏರಿಕೆಯನ್ನು ಕೂಡಲೇ ವಾಪಸ್ ಪಡೆಯಬೇಕೆಂದು ಸಭೆಯು ಒತ್ತಾಯಿಸಿತು.

2. 9-2-89ರಂದು ಕಾರ್ಮಿಕ ಮುಖಂಡರು ಮತ್ತು ಡಿ.ವೈ.ಎಫ್.ಐ. ಮುಖಂಡರೂ ಆದ ಕಾ॥ ಮಷ್ಕದ್ ಇಬ್ರಾಹಿಂ ಮತ್ತು ಕಾ॥ ಆರೀಫ್ ಇವರುಗಳ ಮೇಲೆ ಗೂಂಡಾಗಳು ಮಾರಕಾಸ್ತ್ರಗಳಿಂದ ನಡೆಸಿದ ಹಲ್ಲೆಯನ್ನು ತೀವ್ರವಾಗಿ ಖಂಡಿಸಿತು. ಹಾಗೂ ರಕ್ಷಣಾ ಇಲಾಖೆಯು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಗೂಂಡಾಗಳಿಗೆ ತಕ್ಕ ಕ್ರಮ ಕೈಗೊಳ್ಳಬೇಕೆಂದು ಸಭೆಯು ಒತ್ತಾಯಿಸಿತು.

ಈ ನಿರ್ಣಯದ ಪ್ರತಿಗಳನ್ನು ಮಾನ್ಯ ಮಂತ್ರಿಗಳಿಗೆ ಹಾಗೂ ರಾಜ್ಯದ ಕಾರ್ಮಿಕ ಧುರೀಣರಿಗೆ ಕಳುಹಿಸಿಕೊಡಲಾಯಿತು.

ಪ್ರಾಂತ ರೈತ ಸಂಘದ ಸಮ್ಮೇಳನಗಳು

ಉಡುಪಿ; ಕೃಷಿ ಕೂಲಿಗಾರರ ಸಮ್ಮೇಳನ

ಭೂಸುಧಾರಣಾ ಕಾಯ್ದೆಯಲ್ಲಿ ಈಗ ಇರುವ ಲೋಪದೋಷಗಳನ್ನು ತಿದ್ದುಪಡಿ ಮಾಡಬೇಕು ಹಾಗೂ ಭೂ ಪರಿಹಾರ ಕಟ್ಟಲು ಭೂ ಅಭಿವೃದ್ಧಿ ಬ್ಯಾಂಕಿನಿಂದ ರೈತರು ಪಡೆದ ಸಾಲವನ್ನು ರದ್ದುಗೊಳಿಸಬೇಕೆಂದು ದ.ಕ.ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾ॥ ಕೆ.ಆರ್.ಶ್ರೀಯಾನ್ ಒತ್ತಾಯಿಸಿದರು. ಅವರು ಫೆಬ್ರವರಿ 5 ರಂದುಉಡುಪಿ ಕೃಷಿ ಕಾರ್ಮಿಕರ ತಾಲ್ಲೂಕು ಸಮ್ಮೇಳನದಲ್ಲಿ ಮಾತನಾಡುತ್ತಿದ್ದರು. ಗ್ರಾಮೀಣ ಜನರ ಸ್ಥಿತಿ ಸುಧಾರಿಸಲು ರೈತರು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ಅವರು ಕರೆ ನೀಡಿದರು. ಶ್ರೀ ಶೀನಮೂಲ್ಯ ಧ್ವಜಾರೋಹಣ ಮಾಡಿದರು.

ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾ॥ ಅಬ್ರಹಾಂ ಕರ್ಕಡ, ಜೀವವಿಮಾ ನೌಕರ ಸಂಘದ ಕಾ॥ ವಿಶ್ವನಾಥರೈ ಸಭೆಯನ್ನುದ್ದೇಶಿಸಿ ಮಾತನಾಡಿದರು. ಡೇವಿಡ್ ಎ. ಕರ್ಕಡ ಅಧ್ಯಕ್ಷತೆ ವಹಿಸಿದ್ದರು.

ಭೂ ಪರಿಮಿತಿಗಿಂತ ಹೆಚ್ಚಿಗೆ ಇರುವ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಬಡವರಿಗೆ ಹಂಚಬೇಕು, ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿರುವ ಬಡವರಿಗೆ ದಂಡ ಹಾಕುವುದನ್ನು ನಿಲ್ಲಿಸಿ ನಿವೇಶನ ಖಾಯಂಗೊಳಿಸಬೇಕು. ಭೂಮಿ ಹಂಚುವ ಸಮಿತಿ ರಚಿಸಿ ರೈತ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ನೀಡಬೇಕು, ಫಸಲಿಗೆ ನ್ಯಾಯಬೆಲೆ, ಕನಿಷ್ಠ ಕೂಲಿ, ವರ್ಷವಿಡೀ ಕೆಲಸದ ಭದ್ರತೆ ಮುಂತಾದ ಬೇಡಿಕೆ ಕುರಿತು ಸಮ್ಮೇಳನ ಠರಾವು ಅಂಗೀಕರಿಸಿತು.

ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಕಬ್ಬು ಬೆಳೆಗಾರರಿಗೆ ನೀಡಬೇಕಾದ ಬಾಕಿಯನ್ನು ನೀಡಿ ಸಣ್ಣ ನೀರಾವರಿ ಸೌಲಭ್ಯ ಒದಗಿಸಬೇಕು ಕಬ್ಬಿಗೆ ಲಾಭದಾಯಕ ಬೆಲೆ ನೀಡಬೇಕೆಂದು ಒತ್ತಾಯಿಸಲಾಯಿತು.

ನೂತನ ಸಾಲಿಗೆ ಕಾ॥ ಗೊಡ್ವಿನ್ ಡೆನಿಸ್ ಫರ್ನಾಂಡಿಸ್ (ಅಧ್ಯಕ್ಷ) ಶೀನಮೂಲ್ಯ (ಉಪಾಧ್ಯಕ್ಷ) ರಾಮಕುಂದರ್ (ಕಾರ್ಯದರ್ಶಿ) ಉಮೇಶ್ (ಜೊತೆಕಾರ್ಯದರ್ಶಿ) ಡೇವಿಡ್, ಕರ್ಕಡ ಕೋಶಾಧಿಕಾರಿಯಾಗಿರುವ 16 ಜನರ ಸಮಿತಿ ಆಯ್ಕೆ ಮಾಡಲಾಯಿತು.

ಕೋಟೇಶ್ವರ ಗ್ರಾಮ ರೈತ ಸಮ್ಮೇಳನ

ಫೆಬ್ರವರಿ 7ರಂದು ಕೋಟೇಶ್ವರ ಗ್ರಾಮ 9ನೇ ರೈತ ಸಮ್ಮೇಳನದ ಅಧ್ಯಕ್ಷತೆಯನ್ನು ಕಾ॥ ಗೋವಿಂದ ಸೆಟ್ಟಿಗಾರ ವಹಿಸಿದ್ದರು. ಗಣಪು ಭಂಡಾರಿ ವರದಿ ಮಂಡಿಸಿದರು. ತಾಲ್ಲೂಕು ಕಾರ್ಯದರ್ಶಿ ಕಾ॥ ದಾಸಭಂಡಾರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ರೈತ ಸಂಘದ ಧ್ಯೇಯ ಧೋರಣೆ ನಡೆಸಿದ ಹೋರಾಟಗಳ ಬಗ್ಗೆ ವಿವರಿಸಿದರು. ಸಿದ್ದಾಪುರ ತಾಲ್ಲೂ' ಸಮ್ಮೇಳನ ಯಶಸ್ವಿಗೊಳಿಸಲು ಕರೆ ನೀಡಿದರು. ನೂತನ ಗ್ರಾಮ ಸಮಿತಿಗೆ ಗೋವಿಂದಶೆಟ್ಟಿಗಾರ (ಅಧ್ಯಕ್ಷ) ಕಾ॥ ಕರಿಯದೇವಾಡಿಗ ಎ.ಸೀನಾ (ಉಪಾಧ್ಯಕ್ಷರು) ಗಣಪು ಭಂಡಾರಿ (ಕಾರ್ಯದರ್ಶಿ) ಸುಧಾಕರ ಗಣಪ ದೇವಾಡಿಗ (ಜೊತೆ ಕಾರ್ಯದರ್ಶಿ) ಮುತ್ತದೇವಾಡಿಗ (ಖಜಾಂಚಿ) ಯವರನ್ನೊಳಗೊಂಡ 16 ಜನರ ಸಮಿತಿ ಆರಿಸಲಾಯಿತು.

ಬೆಲೆಏರಿಕೆಯ ವಿರುದ್ಧ ಡಿ.ವೈ.ಎಫ್.ಐ. ಧರಣಿ

ಬೆಂಗಳೂರು

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿಯು ಅಕ್ಕಿ, ಹಾಲು, ಇತರ ಅಗತ್ಯ ವಸ್ತುಗಳ ಬೆಲೆ ಏರಿಕೆಯ ವಿರುದ್ಧ ಹಾಗೂ ಕೇಂದ್ರ ಸರ್ಕಾರದಿಂದ ಪಡಿತರ ಕೋಟಾ ಕಡಿತದ ವಿರುದ್ಧ 20-2-89ರಂದು ಜಿಲ್ಲಾ ಕಛೇರಿ ಎದುರು ಡಿ.ವೈ.ಎಫ್.ಐ. ಸದಸ್ಯರು ಧರಣಿ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು.

ಧರಣಿಯನ್ನು ಉದ್ದೇಶಿಸಿ ವಿಜಯ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ಮುಖಂಡ ಶ್ರೀ ಬಾಲಕೃಷ್ಣಶೆಟ್ಟಿ, ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಶ್ರೀ ಎಸ್.ಶಿವರಾಂ ಜಿಲ್ಲಾ ಕಾರ್ಯದರ್ಶಿ ಶ್ರೀ ಟಿ.ಶಿವಶಂಕರ್, ಜಿಲ್ಲಾ ಸಮಿತಿಯ ಮುಖಂಡರುಗಳಾದ ನಂಜರಾಜು, ಮಹದೇವಕುಮಾರ್, ಗೋಪಾಲಕೃಷ್ಣ ಮುಂತಾದವರು ಜನವಿರೋಧವಾಗಿ ವರ್ತಿಸುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಖಂಡಿಸಿದರು.

ಕಾ॥.ಕೆ.ಬಾಬು

ತಾ॥ 11-2-89ರಂದು ಕಾ॥ ಕೆ. ಬಾಬುರವರು ಆಕಸ್ಮಿಕವಾಗಿ ಮರಣವಾಗಿದ್ದಾರೆ. ಇವರು ನೈಗೆ ಮಜೂರರಾಗಿದ್ದು, ಎಸ್.ಕೆ.ವೀವರ್ಸ್ ಯೂನಿಯನ್‌ನ ಸದಸ್ಯರಾಗಿ ಸಂಘಟನೆಯ ಕಾರ್ಯಕ್ರಮಕ್ಕೆ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇವರ ಮರಣದಿಂದ ಅವರ ಕುಟುಂಬದ ದುಃಖದೊಂದಿಗೆ ಎಸ್.ಕೆ. ವೀವರ್ಸ್ ಯೂನಿಯನ್ ಕೂಡಾ ಸಹ ಭಾಗಿಯಾಗಿರುವುದೆಂದು ಈ ಮೂಲಕ ಎಸ್.ಕೆ.ವೀವರ್ಸ್ ಯೂನಿಯನಿನ ಕಾರ್ಯದರ್ಶಿ ಕಾ॥ ಕೆ. ಪೂವಪ್ಪ ಸಾಲಿಯಾನ್ ತಿಳಿಸಿರುತ್ತಾರೆ

ಗೋಣಿಕೊಪ್ಪ

ಕೊಡಗು ಜಿಲ್ಲೆಯ ಗೋಣಿಕೊಪ್ಪ ನಗರದಲ್ಲಿ ಡಿ.ವೈ.ಎಫ್.ಐ.ನ ರಾಜ್ಯ ಸಮಿತಿ ಕರೆ ಅನ್ವಯ ಫೆ. 20ರಂದು 300ಕ್ಕೂ ಹೆಚ್ಚು ಜನರು ಕೇಂದ್ರ ಸರ್ಕಾರ ಇತ್ತೀಚೆಗೆ ಏರಿಸಿರುವ ಅಕ್ಕಿಯ ಬೆಲೆಯ ಹಾಗೂ ಪಡಿತರ ಅಕ್ಕಿ ವಿತರಣೆಯಲ್ಲಿನ ಕಡಿತದ ವಿರುದ್ಧ, ರಾಜ್ಯ ಸರ್ಕಾರ ಏರಿಸಿರುವ ಹಾಲಿನ ದರ ಏರಿಕೆ ವಿರುದ್ಧ ಪ್ರತಿಭಟಿಸುವ ಸಲುವಾಗಿ ದೇವರಪುರದಿಂದ 3 ಕಿ.ಮೀ. ದೂರದ ಗೋಣಿಕೊಪ್ಪ ಮಂಡಲದವರೆಗೆ ಪ್ರತಿಭಟನಾ ಪ್ರದರ್ಶನದ ನಾಯಕತ್ವವನ್ನು ಡಿ.ವೈ.ಎಫ್.ಐ. ತಾಲ್ಲೂಕು ಕಾರ್ಯದರ್ಶಿ ಸಿ.ಎ.ಸುಕುಮಾರ್ ವಹಿಸಿದ್ದರು. ಈ ಹೋರಾಟಕ್ಕೆ ಮೋಟಾರು ಕಾರ್ಮಿಕ ಸಂಘ, ಯುವ ಜನತಾ, ಸಂಘಟನೆಗಳು ಬೆಂಬಲ ಸೂಚಿಸಿ ಭಾಗವಹಿಸಿದ್ದರು. ಕೊನೆಯಲ್ಲಿ ಬೆಲೆ ಏರಿಕೆ ವಿರುದ್ಧ ಮಂಡಲಕ್ಕೆ ಮನವಿಯನ್ನು ಸಮರ್ಪಿಲಾಯಿತು.

ಮೈಸೂರು ಜಿಲ್ಲಾ ಸಮಾವೇಶ

ಭಾರತ ವಿದ್ಯಾರ್ಥಿ ಫೆಡರೇಷನ್ ಮೈಸೂರು ಜಿಲ್ಲಾ ಸಮಾವೇಶ ಜನವರಿ 29ರಂದು ಉಪನ್ಯಾಸಕ ಕೆ. ಬಸವರಾಜ್ ರವರ ಉದ್ಘಾಟನೆಯೊಂದಿಗೆ ನೆರವೇರಿತು. ಅವೈಜ್ಞಾನಿಕ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಮನೋಸ್ಥೈರ್ಯವನ್ನು ಕಳೆದುಕೊಳ್ಳುವಂತೆ ಮಾಡಿದೆ ಎಂದು ಅವರು ತಿಳಿಸಿದರು. ಮುಖ್ಯ ಅತಿಥಿಗಳಾಗಿ ರಾಜ್ಯ ಕಾರ್ಯದರ್ಶಿ ಕಾ॥ ಎಸ್.ವೈ.ಗುರುಶಾಂತ್ ಮಾತನಾಡಿ ಶೈಕ್ಷಣಿಕ ಸೌಲಭ್ಯಕ್ಕಾಗಿ ಹೋರಾಡುತ್ತಾ ರಾಷ್ಟ್ರೀಯ ಸಮಗ್ರತೆ ಐಕ್ಯತೆಗಾಗಿ ಶ್ರಮಿಸಬೇಕೆಂದು ಕರೆ ನೀಡಿದರು.

ನೂತನ ಜಿಲ್ಲಾ ಸಮಿತಿಗೆ ಕಾ॥ ವಿ.ರಾಜಶೇಖರ್ (ಸಂಚಾಲಕ) ಜಾನ್, ಆರ್.ಮಹೇಶ್ ರಾಜ, ನಾಗೇಶ್, ರಾಮಚಂದ್ರ, ಧನಂಜಯರವರುಗಳು ಜಿಲ್ಲಾ ಸಮಿತಿ ಸದಸ್ಯರಾಗಿ ಆಯ್ಕೆಗೊಂಡರು.

ನಿಮಗಿದು ಗೊತ್ತೇ ?

ಬ್ರೇನ್ ಡ್ರೇನ್ (ಪ್ರತಿಭಾ ಪಲಾಯನ) ಈ ಪದ ಮೊದಲ ಬಾರಿಗೆ ಪ್ರಯೋಗವಾದದ್ದು 1963ರಲ್ಲಿ ಬ್ರಿಟನ್ನಿನಲ್ಲಿ. ಅಮೆರಿಕಾದಲ್ಲಿ ವಿಜ್ಞಾನಿಗಳಿಗೆ, ಇಂಜಿನಿಯರ್‌ಗಳಿಗೆ, ಇತರ ತಜ್ಞರಿಗೆ ದೊರೆಯುತ್ತಿದ್ದ ಭಾರೀ ಸಂಬಳದಿಂದಾಗಿ ಪಶ್ಚಿಮ ಯುರೋಪಿನಿಂದ ಪ್ರತಿಭಾ ಪಲಾಯನ ಆರಂಭವಾಯಿತು.

ಆಗ ಕೇವಲ ಪಶ್ಚಿಮ ಯುರೋಪಿಗೆ ಸೀಮಿತವಾಗಿದ್ದ ಪ್ರತಿಭಾ ಪಲಾಯನ ಈಗ ಹೆಚ್ಚಾಗಿ ತಟ್ಟಿರುವುದು ಭಾರತದಂತಹ ದೇಶಗಳನ್ನು. ವಿಶ್ವಸಂಸ್ಥೆ ವ್ಯಾಪಾರ-ಅಭಿವೃದ್ಧಿ ಆಯೋಗ (ಅಂಕ್ಟಾಡ್)ದ ಅಂಕಿ-ಅಂಶಗಳ ಪ್ರಕಾರ ಬೆಳವಣಿಗೆ ಹೊಂದುತ್ತಿರುವ ದೇಶಗಳಿಂದ ಪಾಶ್ಚಿಮಾತ್ಯ ದೇಶಗಳಿಗೆ ಪ್ರತಿಭಾ ಪಲಾಯನ ಅಪಾರ ಸಂಖ್ಯೆಯಲ್ಲಿದೆ. ಪ್ರತಿವರ್ಷ ಸ್ನಾತಕರಾಗುವ ವಿದ್ಯಾರ್ಥಿಗಳಲ್ಲಿ 20ರಿಂದ 70 ಶೇಕಡಾದ ವರೆಗೆ.

ಪ್ರೆಸ್ ಏಶಿಯಾದ ಪ್ರಕಾರ ಭಾರತ ಒಂದು ಶತಕೋಟಿ ಡಾಲರುಗಳಿಗಿಂತಲೂ ಹೆಚ್ಚು ಹಣವನ್ನು ಈ ಪ್ರತಿಭಾ ಪಲಾಯನದಿಂದ ಕಳೆದೊಂಡಿದೆ. ಅಮೆರಿಕಾದಲ್ಲಿ ಪ್ರತಿ 20 ಡಾಕ್ಟರುಗಳಲ್ಲಿ ಒಬ್ಬ ಭಾರತದಲ್ಲಿ ತರಬೇತಿ ಪಡೆದಾತ. ಆದರೆ ಭಾರತದಲ್ಲಿ 4 ಸಾವಿರ ಮಂದಿಗೂ ಒಬ್ಬ ಡಾಕ್ಟರನಿಲ್ಲ !

ಪಾಶ್ಚಿಮಾತ್ಯ ದೇಶಗಳು ಏಕೆ ಪ್ರತಿಭಾ ಪಲಾಯನವನ್ನು ಪ್ರೋತ್ಸಾಹಿಸುತ್ತವೆ? ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಗಾಗಿ. ಲಂಡನ್ ಅರ್ಥಶಾಸ್ತ್ರ ಸಂಸ್ಥೆಯ ಪ್ರಕಾರ ಅಮೆರಿಕಾ ಈ ಪ್ರತಿಭಾ ಪಲಾಯನದಿಂದಾಗಿ ತಜ್ಞರ ತರಬೇತಿಯ ಖರ್ಚಿನಲ್ಲಿ 4ಶತಕೋಟಿ ಡಾಲರುಗಳನ್ನು ಉಳಿಸುತ್ತದೆ. ಎಲ್ಲಾ ಪಾಶ್ಚಿಮಾತ್ಯ ದೇಶಗಳೂ ಸೇರಿ 10 ಶತಕೋಟಿ ಡಾಲರು ಉಳಿಸುತ್ತವೆ.

ಬುಶ್ ಮಂತ್ರಿಮಂಡಲದಲ್ಲಿ ಬಾಂಬು ವ್ಯಾಪಾರಿಗಳು!

ಅಮೆರಿಕಾ ಮತ್ತು ಸೋವಿಯತ್ ಒಕ್ಕೂಟದ ನಡುವೆ ಐ.ಎನ್.ಎಫ್. ಸಂಧಿ ವಿಶ್ವದಲ್ಲಿ ಒಂದು ಹೊಸ ಆಸೆ ಮೂಡಿಸಿತ್ತು. ಆದರೆ ಅಮೆರಿಕಾದ ಹೊಸ ಅಧ್ಯಕ್ಷ ಬುಶ್ ತಮ್ಮ ಮಂತ್ರಿ ಮಂಡಲದ ಎರಡು ಪ್ರಮುಖ ಸ್ಥಾನಗಳಲ್ಲಿ ಶಸ್ತ್ರಾಸ್ತ್ರ ಉದ್ದಿಮೆಗೆ ಸಂಬಂಧಪಟ್ಟ ವ್ಯಕ್ತಿಗಳನ್ನು ಸೇರಿಸಿಕೊಂಡಿರುವುದು ಈ ಆಸೆ ಗ್ರಹಣ ತಂದಿದೆ.

ಜಾನ್‌ಟವರ್ ಅಮೆರಿಕಾದ ಹೊಸ ರಕ್ಷಣಾ ಕಾರ್ಯದರ್ಶಿ. ಇವರು ಕಳೆದ ಎರಡು ವರ್ಷಗಳಲ್ಲಿ ಅಮೆರಿಕಾದ ನಾಲ್ಕು ದೊಡ್ಡ ಶಸ್ತ್ರಾಸ್ತ್ರ ಉತ್ಪಾದರಿಂದ 7.5 ಲಕ್ಷ ಡಾಲರ್ ಸಲಹಾ ಶುಲ್ಕ ಪಡೆದಿದ್ದರೆಂದು ಬಯಲಾಗಿದೆ.

ಬುಶ್ ಮಂತ್ರಿಮಂಡಲದಲ್ಲಿ ಉಪ ರಕ್ಷಣಾ ಕಾರ್ಯದರ್ಶಿ ಡೊನಾಲ್ಡ್ ಅಟ್‌ವುಡ್ ಜನರಲ್ ಮೋಟಾರ್ಸ್‌ನ ಮಾಜೀ ಉಪಾಧ್ಯಕ್ಷ ಮಾತ್ರವಲ್ಲ ಅಮೆರಿಕನ್ ಸೈನಿಕ ವ್ಯವಸ್ಥೆ ಪೆಂಟಗಾನ್‌ಗೆ ಇಲೆಕ್ಟ್ರಾನಿಕ್ ಸಲಕರಣೆಗಳನ್ನು ಅತೀ ಹೆಚ್ಚು ಸಂಖ್ಯೆಯಲ್ಲಿ ಪೂರೈಸುವ ಹ್ಯೂಗೆಸ್ ಇಲೆಕ್ಟ್ರಾನಿಕ್ ಕಾರ್ಪೋರೇಷನ್‌ನ ಒಬ್ಬ ಮಾಜಿ ಅಧ್ಯಕ್ಷ ಕೂಡಾ.

ಅಮೆರಿಕಾದ ಮಿಲಿಟರಿ ವ್ಯವಸ್ಥೆ ಮತ್ತು ಶಸ್ತ್ರಾಸ್ತ್ರ ಉದ್ದಿಮೆಗಳ ನಡುವೆ ನಿಕಟ ಸಂಬಂಧ ಇಂದು ನಿನ್ನೆಯದಲ್ಲ. ಪೆಂಟಗಾನ್‌ಗೆ ಸಿಬ್ಬಂದಿ ಶಸ್ತ್ರಾಸ್ತ್ರ ಉದ್ದಿಮೆಗಳಿಂದಲೇ ಸೇರಿಸಿಕೊಳ್ಳುತ್ತಾರೆ. ಅದೇ ರೀತಿ ಈ ಮಿಲಿಟರಿ ಉದ್ದಿಮೆಗಳು ಸರ್ಕಾರದ ರಕ್ಷಣಾ ವಿಭಾಗದ ಮಾಜೀ ಅಧಿಕಾರಿಗಳಿಗೆ ತಮ್ಮಲ್ಲಿ ಆಕರ್ಷಕ ಉದ್ಯೋಗ ನೀಡುತ್ತಾರೆ.

ಲ್ಯಾಟಿನ್ ಅಮೆರಿಕಾ, ಆಫ್ರಿಕಾದ ಆರ್ಥಿಕ ಭವಿಷ್ಯ ಕರಾಳ

ವಿಶ್ವಸಂಸ್ಥೆಯ ಆರ್ಥಿಕ ಆಯೋಗಗಳ ವರದಿಗಳ ಪ್ರಕಾರ ಲ್ಯಾಟಿನ್ ಅಮೆರಿಕಾ ಮತ್ತು ಆಫ್ರಿಕಾ ಖಂಡದ ಹಲವಾರು ದೇಶಗಳ ಪರಿಸ್ಥಿತಿ 1989ರಲ್ಲಿ ಹಿಂದೆಂದಿಗಿಂತಲೂ ಕರಾಳವಾಗಿದೆ.

ಇದಕ್ಕೆ ಮುಖ್ಯ ಕಾರಣ ಸಾಲದ ಹೊರೆ. ಲ್ಯಾಟೀನ್ ಅಮೆರಿಕಾದ ದೇಶಗಳ ಸಾಲದ ಮೊತ್ತ 410 ಶತಕೋಟಿ ಡಾಲರುಗಳು. ಆಫ್ರಿಕಾದ ದೇಶಗಳ ಸಾಲಹೊರೆ 2430 ಶತಕೋಟಿ ಡಾಲರುಗಳು.

ಲ್ಯಾಟಿನ್ ಅಮೆರಿಕಾದ ದೇಶಗಳು ಕಳೆದ ವರ್ಷ 29 ಶತಕೋಟಿ ಡಾಲರ್ ಅಂದರೆ ಅವುಗಳ ರಫ್ತಿನ 25 %ನ್ನು ಸಾಲದ ಬಾಬ್ತು ಸಾಲ ನೀಡಿದ ದೇಶಗಳಿಗೆ ರವಾನಿಸಬೇಕಾಗಿಬಂದಿದೆ. ತಲಾ ಉತ್ಪಾದನೆ ಕುಸಿದುಯ ಹತ್ತು ವರ್ಷ ಹಿಂದಿನ ಮಟ್ಟಕ್ಕಿಳಿದಿದೆ.

ಆಫ್ರಿಕಾದ ದೇಶಗಳ ರಫ್ತಿನ 40% ಸಾಲ ಮರುಪಾವತಿ ಮತ್ತು ಬಡ್ಡಿಗಾಗಿ ಹೋಗಿದೆ. ಈ ವರ್ಷ ಇದು ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆಯೇ ಹೆಚ್ಚು.

ಗೌರವ, ಹಕ್ಕು, ಸ್ವಾತಂತ್ರ, ಭದ್ರತೆಯೊಂದಿಗೆ ಶಾಂತಿ



ಫಿಡೆಲ್ ಕಾಸ್ಟ್ರೊ

"ನಾವು ಸೋವಿಯತ್ ಒಕ್ಕೂಟದ ಶಾಂತಿ ಧೋರಣೆಯನ್ನು ಪೂರ್ಣವಾಗಿ ಬೆಂಬಲಿಸುತ್ತೇವೆ. ಅಷ್ಟೇ ಅಲ್ಲ, ಮೆಚ್ಚುತ್ತೇವೆ. ಈ ಧೋರಣೆಯ ವಿಜಯದ ಮಹತ್ವ ನಮಗೆ ತಿಳಿದಿದೆ. ಇದನ್ನು ಸ್ಪಷ್ಟಪಡಿಸಬೇಕಾಗಿದೆ. ಯಾಕೆಂದರೆ ಪಶ್ಚಿಮದ ಸಾಮ್ರಾಜ್ಯಶಾಹೀ ಪತ್ರಿಕೆಗಳು ಕ್ಯೂಬಾ ಮತ್ತು ಸೋವಿಯತ್ ಒಕ್ಕೂಟದ ನಡುವೆ ವೈರುಧ್ಯಕ್ಕಾಗಿ ಹುಡುಕುತ್ತಾ ಇರುತ್ತವೆ....

ತೃತೀಯ ಜಗತ್ತಿನ ದೇಶಗಳಲ್ಲಿ ಪ್ರತಿ ಮೂರು ದಿನಗಳಲ್ಲಿ ಬದುಕ ಬಹುದಾಗಿದ್ದ 1.2 ಲಕ್ಷ ಮಕ್ಕಳು ಸಾಯುತ್ತಾರೆ. ಇದು ಅವರ ನಡುವೆ ಮೂರು ದಿನಕ್ಕೊಂದಂತೆ ಸಿಡಿಯುವ ಬಾಂಬಿನಂತೆಯೇ. ಈ ದೇಶಗಳಿಗೂ ಸೋವಿಯತ್ ಒಕ್ಕೂಟದ ಶಾಂತಿ ಧೋರಣೆ ಮಹತ್ವದ್ದು.....

ವಿಶ್ವಸಂಸ್ಥೆಯಲ್ಲಿ ಕಾಮ್ರೇಡ್ ಗೊರ್ಬಚೆವ್ ಮೂರನೇ ಜಗತ್ತಿನ ಬೇಡಿಕೆ ಎತ್ತಿ ಹಿಡಿದಿರುವುದು ನಮಗೆ ಚಾರಿತ್ರಿಕ ಮಹತ್ವದ ಸಂಗತಿ. ನಾವು ಸಾಲ ರದ್ದಾಗಬೇಕೆಂದು ಹೇಳುತ್ತೇವೆ. ನೂರು ವರ್ಷಗಳವರೆಗೆ ಪಾವತಿ ಮುಂದೂಡಬೇಕೆಂದು ಗೊರ್ಬಚೆವ್ ಹೇಳಿದ್ದಾರೆ. ವಾಸ್ತವದಲ್ಲಿ ಇದು ಸಾಲ ರದ್ಧತಿಯೇ....

ಆದರೆ ಒಂದು ಪ್ರಶ್ನೆ ಕೇಳಬೇಕಾಗಿದೆ. ಶಾಂತಿಯೆಂದರೆ ಸಾಮ್ರಾಜ್ಯಶಾಹಿಗಳು ಏನು ಅರ್ಥ ಹಚ್ಚುತ್ತಾರೆ? ದೊಡ್ಡ ಶಕ್ತಿಗಳ ನಡುವೆ ಶಾಂತಿ ಮತ್ತು ತೃತೀಯ ಜಗತ್ತಿನ ದೇಶಗಳನ್ನು ಶೋಷಿಸುವ, ಬೆದರಿಸುವ, ದಮನಿಸುವ ಹಕ್ಕು- ಇದೇ ಶಾಂತಿಯ ಬಗ್ಗೆ ಅವರ ವಿಚಿತ್ರ ಪರಿಕಲ್ಪನೆ.

ನಮಗೆ ಶಾಂತಿ ಬೇಕು. ಅದಕ್ಕಾಗಿ ಶ್ರಮಿಸಬೇಕು. ಆದರೆ ಅದು ವಿಶ್ವದ ಎಲ್ಲಾ ಜನಗಳಿಗೂ ಶಾಂತಿ, ವಿಶ್ವದ ಜನಗಳಿಗೆ ಹಕ್ಕುಗಳೊಂದಿಗೆ ಶಾಂತಿ!

ವಿಶ್ವದ ಎಲ್ಲಾ ಜನಗಳಿಗೆ ಗೌರವದೊಂದಿಗೆ ಶಾಂತಿ, ಹಕ್ಕಿನೊಂದಿಗೆ ಶಾಂತಿ, ಸ್ವಾತಂತ್ರದೊಂದಿಗೆ ಶಾಂತಿ, ಭದ್ರತೆಯೊಂದಿಗೆ ಶಾಂತಿ. ನಾವು ಇಂತಹ ಶಾಂತಿ ಬಯಸಬೇಕು"

(ಕ್ಯೂಬಾ ಕ್ರಾಂತಿಯ 30ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ)

ಬಿಹಾರ: ವಿಧಾನಸಭೆಯೆದುರು ಮತಪ್ರದರ್ಶನ

ಮಾರ್ಚ್ 14ರಂದು ಬಿಹಾರ್ ವಿಧಾನಸಭೆಯೆದುರು ಬೃಹತ್ ಮತಪ್ರರ್ದಶನ ನಡೆಸಲು ಸಿ.ಪಿ.ಐ(ಎಂ)ನ ಬಿಹಾರ ರಾಜ್ಯಸಮಿತಿ ನಿರ್ಧರಿಸಿದೆ. ಮಹಿಳೆಯರು ಮತ್ತು ದುರ್ಬಲ ವಿಭಾಗಗಳ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳು, ಕಾನೂನು-ವ್ಯವಸ್ಥೆ ಕುಸಿತ, ದುಡಿಯುವ ಜನಗಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕಾಂಗ್ರೆಸ ಸಂಪೂರ್ಣ ವಿಫಲತೆಯತ್ತ ಗಮನ ಕೇಂದ್ರೀಕರಿಸಿ ರಾಜೀವ್ ಸರ್ಕಾರ ಮತ್ತು ಭಗವತ್ ಝಾ ಆಝಾದ್ ಸರ್ಕಾರದ ರಾಜೀನಾಮೆಗೆ ಅಂದು ತೀವ್ರ ಒತ್ತಾಯ ತರಲಾಗುವದು.

ಸಂವಿಧಾನದ ಆರನೇ ಶೆಡ್ಯೂಲಿನ ಪ್ರಕಾರ ಬಿಹಾರದ ಆದಿವಾಸಿಗಳಿಗೆ ಸ್ವಾಯತ್ತ ಮಂಡಳಿಯ ಸ್ಥಾಪನೆ, ಸ್ಥಳೀಯ ಸಂಸ್ಥೆಗಳಿಗೆ ತಕ್ಷಣ ಚುನಾವಣೆಗಳೂ ಸೇರಿದಂತೆ 19 ಬೇಡಿಕೆಗಳ ಮೇಲೆ ಈ ಚಳುವಳಿ ಸಂಘಟಿಸಲಾಗುತ್ತಿದೆ. ಇದು ಎ.ಐ.ಕೆ.ಎಸ್.ನ ಪ್ರಮುಖ ಮುಖಂಡರಾಗಿದ್ದ ಬಿಹಾರಿನ ಸ್ವಾಮಿ ಸಹಜನಂದರವರ ಜನ್ಮ ಶತಾಬ್ಧಿವರ್ಷ. ಈ ಸ್ಮಾರಕಾರ್ಥ ಎ.ಐ.ಕೆ.ಎಸ್. ತನ್ನ ಸದಸ್ಯತ್ವವನ್ನು ರಾಜ್ಯದಲ್ಲಿ ಐದು ಲಕ್ಷಕ್ಕೇರಿಸಲು ಹಮ್ಮಿಕೊಂಡಿರುವ ಪ್ರಚಾರಣೆಗೆ (ಮಾರ್ಚ್ 1ರಿಂದ7) ಪೂರ್ಣ ಬೆಂಬಲ ನೀಡಲು ರಾಜ್ಯಸಮಿತಿ ಕರೆ ನೀಡಿದೆ.

ಸಫ್ದರ್ ಕೊಲೆ: ಸಿ.ಬಿ.ಐ. ತನಿಖೆಗೆ ಒತ್ತಾಯ

1989ರ ಮೊದಲ ದಿನದಂದು ಸಾಹಿಂಬಾಬಾದ್‌ನಲ್ಲಿ ಪ್ರಸಿದ್ಧ ನಾಟಕ ಕಲಾವಿದ ಸಫ್ದರ್ ಹಾಶ್ಮಿ ಮತ್ತು ಸಿ.ಐ.ಟಿ.ಯು.ವಿನ ಒಬ್ಬ ಯುವಕ ಕಾರ್ಯಕರ್ತ ರಾಮ್‌ಬಹಾದ್ದೂರ್‌ರವರ ಕೊಲೆ ನಡೆದುದರ ತನಿಖೆಯನ್ನು ಅತ್ಯಂತ ಪಕ್ಷಪಾತ ಪೂರ್ಣವಾಗಿ ಹಾಗೂ ಭ್ರಷ್ಟ ರೀತಿಯಲ್ಲಿ ಉತ್ತರ ಪ್ರದೇಶ ಸರಕಾರ ನಡೆಸುತ್ತಿರುವ ಬಗ್ಗೆ ಸಿ.ಪಿ.ಐ.(ಎಂ) ದೆಹಲಿ ರಾಜ್ಯ ಸಮಿತಿ ತನ್ನ ತೀವ್ರ ಕ್ರೋಧವನ್ನು ಪತ್ರದ ಮೂಲಕ ಉತ್ತರ ಪ್ರದೇಶದ ಮುಖ್ಯಮಂತ್ರಿಗಳಿಗೆ ವ್ಯಕ್ತಪಡಿಸಿದೆ.

ಪೋಲಿಸರ ದುಷ್ಟ ಪಾತ್ರದ ಹಲವಾರು ಪುರಾವೆಗಳನ್ನು ಕೊಟ್ಟಿರುವ ಈ ಪತ್ರ ಕೊಲೆಗಡುಕರನ್ನು ರಕ್ಷಿಸಲು ಪೋಲೀಸ್ ಸರ್ವ ಪ್ರಯತ್ನ ನಡೆಸುತ್ತಿದೆಯೆಂಬುದು ಸ್ಪಷ್ಟವೆಂದು ತಿಳಿಸಿದೆ. ಉತ್ತರ ಪ್ರದೇಶ ಸರಕಾರ ನೇಮಿಸಿರುವ ತನಿಖಾ ಸಮಿತಿಯ ಉದ್ದೇಶ ಕೊಲೆಗಡುಕರನ್ನು ರಕ್ಷಿಸುವುದಾದ್ದರಿಂದ ಇದರಲ್ಲಿ ತಾನು ಭಾಗವಹಿಸುವುದಿಲ್ಲವೆಂದು ರಾಜ್ಯ ಸಮಿತಿ ತನಿಖೆ ನಡೆಸುತ್ತಿರುವ ಮಿರಾತ್ ವಿಭಾಗದ ಡೆಪ್ಯೂಟಿ ಕಮಿಶನ್‌ರವರಿಗೂ ಬರೆದು ತಿಳಿಸಿದೆ.

ಸಫ್ದರ್ ಮತ್ತು ಬಹಾದೂರ್‌ರವರ ಕೊಲೆಗಡುಕರಿಗೆ ತಕ್ಕ ಶಿಕ್ಷೆಯಾಗಬೇಕಾದರೆ, ಈ ಕೊಲೆಯಲ್ಲಿ ಶಾಮೀಲಾಗಿದ್ದ ಪೋಲೀಸ್ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಸಾಧ್ಯವಾಗಬೇಕಾದರೆ ಈ ಮೊಕದ್ದಮೆಯನ್ನು ಸಿ.ಬಿ.ಐ.ಗೆ ಹಸ್ತಾಂತರಿಸಬೇಕೆಂದು ಸಿ.ಪಿ.ಐ.(ಎಂ) ದೆಹಲಿ ರಾಜ್ಯ ಸಮಿತಿ ಒತ್ತಾಯಿಸಿದೆ.

ಮಧ್ಯಪ್ರದೇಶ-ಕಾಂಗ್ರೆ ಅಸಮರ್ಥತೆಯ ಪ್ರತೀಕ

ತಮಿಳುನಾಡು ಚುನಾವಣಾ ಸೋಲಿನ ಹಿನ್ನೆಲೆಯಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿಯ ಬದಲಾವಣೆ ಮೂಲಕ ತಾನು "ನೀತಿಮಾರ್ಗ"ವನ್ನು ಎತ್ತಿಹಿಡಿದಿದ್ದೇನೆಂದು ಕಾಂಗ್ರೆಸ್(ಐ)ನ ಕೇಂದ್ರ ಮುಖಂಡತ್ವ ಸಾರಲು ಯತ್ನಿಸಿತು. ಆದರೆ ಅದು ಮುರುಕಲು ಕಾಂಗ್ರೆಸ್(ಐ)ನ ತೀವ್ರ ಒಳಜಗಳಗಳ ಇನ್ನೊಂದು ಉದಾಹರಣೆಯಷ್ಟೆ ಎಂಬುದು ಈಗ ಎಲ್ಲರಿಗೂ ಸ್ಪಷ್ಟವಾಗಿದೆ. ಕಳೆದ ವರ್ಷ ಅರ್ಜುನ್‌ಸಿಂಗರಿಗೆ ತಲೆಬಾಗಬೇಕಾಗಿ ಬಂದಿದ್ದ ಕೇಂದ್ರ ಕಾಂಗ್ರೆ ಮುಖಂಡತ್ವಕ್ಕೆ ಸೇಡು ತೀರಿಸಿಕೊಳ್ಳಲು ಲಾಟರಿ ಹಗರಣ ಅವಕಾಶಮಾಡಿಕೊಟ್ಟಿತಷ್ಟೆ.

ಮಧ್ಯಪ್ರದೇಶ ರಾಜಕೀಯ ಪರಿಸ್ಥಿತಿ ತೀವ್ರವಾಗಿ ಬಿಗಡಾಯಿಸುತ್ತಿದೆ. ಮುಖ್ಯವಾಗಿ ಅದು ಎರಡು ಪಾಳೆಯಗಾರೀ ಪ್ರಭುಗಳ-ಅರ್ಜುನ್‌ಸಿಂಗ್ ಮತ್ತು ಮಾಧವರಾವ್ ಸಿಂಧ್ಯಾ-ಕಿತ್ತಾಟದ ರಣರಂಗವಾಗಿದೆ. ಇದಲ್ಲದೆ ಒಂದೆಡೆ ಉತ್ಪಾದಕರು ಮತ್ತು ವ್ಯಾಪಾರಿಗಳು ಇನ್ನೊಂದೆಡೆ ಭೂಮಾಲಿಕ ಹಿತಾಸಕ್ತಿಗಳ ಘರ್ಷಣೆ ಕೂಡ ರಾಜ್ಯದಲ್ಲಿನ ಗಂಭೀರ ಸನ್ನಿವೇಶದ ಇನ್ನೊಂದು ಆಯಾಮವಾಗಿದೆ.

ಈ ಮಧ್ಯೆ ಕಾಂಗ್ರೆಸ್(ಐ) ಜನರಿಂದ ಬಹಳ ದೂರ ಸರಿದು ಕೇವಲ ಸಮಾಜ-ಘಾತುಕ ಶಕ್ತಿಗಳ ಮೇಲಷ್ಟೇ ಅವಲಂಬಿಸಿಕೊಂಡಿದೆ. ಅಧಿಕಾರಿಶಾಹಿಯೂ ಇಬ್ಭಾಗಗೊಂಡಿದೆ. ಆಡಳಿತದ ಮೇಲೆ ಊಳಿಗಮಾನ್ಯ ಪ್ರಭುಗಳ ಹಿಡಿತ ಇವೆಲ್ಲದರಿಂದ ದುರ್ಬಲ ವಿಭಾಗಗಳ ಮೇಲೆ ಅತ್ಯಾಚಾರ, ಪೋಲೀಸ್ ಲಾಕಪ್‌ಗಳಲ್ಲಿ ಕೊಲೆ, ಪ್ರಜಾಪ್ರಭುತ್ವ ಹಕ್ಕುಗಳ ನಾಶ ಹೆಚ್ಚುತ್ತಲಿದೆ.ಕೇಂದ್ರ ಗೃಹಮಂತ್ರಿ ರಾಜಧಾನಿಯಲ್ಲಿದ್ದಾಗಲೇ ಆಳುವ ಪಕ್ಷದ ನೂರು ಎಂ.ಎಲ್.ಎ.ಗಳನ್ನೇ ಎರಡು ದಿನ ಲಾಕಪ್ಪಿನಲ್ಲಿಡಲಾಗಿತ್ತು ಎಂಬುದು ಈ ಕಾಂಗ್ರೆ ಆಡಳಿತದ ರಾಜ್ಯದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ಶೋಚನೀಯ ಸ್ಥಿತಿಯನ್ನು ತೋರಿಸುತ್ತದೆ.

ಬೂರ್ಜ್ವಾ-ಭೂಮಾಲೀಕ ವರ್ಗಗಳ ಅತೀ ದೊಡ್ಡ ಪಕ್ಷವಾದ ಕಾಂಗ್ರೆಸ್(ಐ) ತಾನು ಬಹುಮತದಲ್ಲಿರುವ ರಾಜ್ಯಗಳಲ್ಲಿ ಕೂಡಾ ಒಂದು ಸ್ಥಿರ ಸರ್ಕಾರ ಒದಗಿಸಲು ಅಸಮರ್ಥವಾಗಿದೆ. ಆದ್ದರಿಂದ ಜನತೆಯ ಐಕ್ಯತೆಯನ್ನಾಗಲಿ, ದೇಶದ ಸಮಗ್ರತೆಯನ್ನಾಗಲಿ ರಕ್ಷಿಸುವುದು ಸಾಧ್ಯವಿಲ್ಲ ಎಂಬ ಸಿ.ಪಿ.ಐ.(ಎಂ)ನ ವಿಶ್ಲೇಷಣೆಗೆ ಮಧ್ಯಪ್ರದೇಶ ಇನ್ನೊಂದು ಉದಾಹರಣೆ ಒದಗಿಸಿದೆ.

ಅತ್ತ ರಾಜ್ಯದಲ್ಲಿ ತಾನೇ ಏಕಮಾತ್ರ ಪರ್ಯಾಯವೆಂದು ಭಾವಿಸಿರುವ ಬಿ.ಜೆ.ಪಿ ತಾನು ಭ್ರಷ್ಟಾಚಾರ-ವಿರೋಧಿ ಹೋರಾಟಗಾರರೆಂದು ಸೋಗು ಹಾಡುತ್ತಾ ತನ್ನ ಕೋಮುವಾದೀ ಹಲ್ಲೆಗಳನ್ನು ಹೆಚ್ಚಿಸಲು ಯತ್ನಿಸುತ್ತಿದೆ. ಗ್ವಾಲೀರ್, ನಾಗ್ಡಾ, ಗುನಾ, ಅಶೋಕ ನಗರ್ ಶಿವಪುರಿ ಮೊದಲಾದೆಡೆ ಅದು ನಡೆಸಿದ ಪ್ರಯತ್ನಗಳ ನಂತರ ಪ್ರಜಾಪ್ರಭುತ್ವವಾದೀ ಜನವಿಭಾಗಗಳು ಬಿ.ಜೆ.ಪಿ ಕಾಂಗ್ರೆಗೆ ಎಂತಹ ಪರ್ಯಾಯ ಒದಗಿಸಬಲ್ಲುದು ಎಂದು ಮೆಲ್ಲ-ಮೆಲ್ಲನೇ ಅರಿತು ಕೊಳ್ಳುತ್ತಿದ್ದಾರೆ.

ಆದ್ದರಿಂದಲೇ ಎಡ ಶಕ್ತಿಗಳು ಇನ್ನು ದುರ್ಬಲವಾಗಿರುವ ಈ ರಾಜ್ಯದಲ್ಲೂ ರಾಷ್ಟ್ರೀಯ ಆಂದೋಲನ ಸಮಿತಿಯ 15 ಅಂಶಗಳ ಕಾರ್ಯಕ್ರಮಕ್ಕೆ, ಉತ್ತಮ ಸ್ಪಂದನ ಸಿಕ್ಕಿದೆ.

ಅಕ್ಕಿ ಬೆಲೆಯೇರಿಕೆ: ಮಹಿಳೆಯರ ಖಂಡನೆ

ಜನತೆಯ ಜೀವನಮಟ್ಟ ತೀವ್ರ ಹದಗೆಟ್ಟು ಅವರು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲೆಯೇ ಸಂಪೂರ್ಣ ಅವಲಂಬಿಸಬೇಕಾಗಿ ಬಂದಿರುವಾಗ ರೇಶನ್ ಅಕ್ಕಿಯ ಬೆಲೆಯನ್ನು ಮನಬಂದಂತೆ ಕೇಂದ್ರ ಸರ್ಕಾರ ಹೆಚ್ಚಿಸಿದೆಯೆಂದು ಅಖಿಲಭಾರತ ಪ್ರಜಾಪ್ರಭುತ್ವವಾದೀ ಮಹಿಳಾ ಸಂಘಟನೆ ತೀವ್ರವಾಗಿ ಖಂಡಿಸಿದೆ. ಸಾಲದೆಂಬಂತೆ ದೇಶದ ರಾಜಧಾನಿಯಲ್ಲಿ ಹಾಲಿನ ಬೆಲೆಯನ್ನು 40% ಹೆಚ್ಚಿಸಲಾಗಿದೆ. ಇನ್ನೂ ಹಲವಾರು ರಾಜ್ಯಗಳಲ್ಲಿ ಹಾಲಿನ ಬೆಲೆ ಹೆಚ್ಚಿಸಲಾಗಿದೆ. ರೇಶನ್ ವಸ್ತುಗಳ ಬೆಲೆಯೇರಿಸಿರುವುದು ಮಾತ್ರವಲ್ಲ ಅವುಗಳ ಪೂರೈಕೆಯನ್ನು ಕೂಡಾ ಸುಮಾರು ಅರ್ಧಕ್ಕಿಳಿಸಲಾಗಿದೆ ಎಂದಿರುವ ಎ.ಐ.ಡಿ.ಡಬ್ಲ್ಯೂ.ಎ. ಇದು ವಿಶ್ವಬ್ಯಾಂಕಿನ ನಿರ್ದೇಶನಗಳಿಗೆ ಕೇಂದ್ರ ಸರ್ಕಾರ ಪೂರ್ಣವಾಗಿ ತಲೆಬಗ್ಗಿಸಿದೆ ಎಂಬುದನ್ನು ತೋರಿಸುತ್ತದೆಯೆಂದಿದೆ.

ಬೆಲೆಯೇರಿಕೆಯನ್ನು ವಾಪಸು ಪಡೆದು, ಆಹಾರ ಸಾಮಗ್ರಿಗಳ ಪೂರೈಕೆಯನ್ನು ಪೂರ್ಣ ಪ್ರಮಾಣದಲ್ಲಿ ಮಾಡಿ, ನಿಯಂತ್ರಿತ ಬೆಲೆಗಳಲ್ಲಿ ಹೆಚ್ಚೆಚ್ಚು ಸಾಮಗ್ರಿಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಒದಗಿಸಬೇಕೆಂದು ಅದು ಒತ್ತಾಯಿಸಿದೆ.

KRNW / BGS-312 MAG(2) PRB DECR 319-78-79

ಪಾಲಿಟ್‌ಬ್ಯೂರೋ ಖಂಡನೆ

ಪುಟ 1ರಿಂದ

ನೆರವೇರಿಸಿದವೂ ಕೂಡಾ ತಾವು ನೆರವೇರಿಸಬೇಕಾದ ಉಳಿದೆರಡು ಅಂಶಗಳನ್ನು ಪೂರೈಸುವ ಬದಲು ಪಾಕಿಸ್ತಾನ ಮತ್ತು ಅಮೆರಿಕಾ ಬಂದುಕೋರರ ಮೂಲಕ ಅಫ್‌ಘಾನ್ ಕ್ರಾಂತಿಯ ರಕ್ಷಕರ ವಿರುದ್ಧ ಯುದ್ಧ ನಡೆಸುತ್ತಿದೆ ಎಂದರು. ಇಂದು ಪ್ರಶ್ನೆ ಅಫ್‌ಘಾನ್ ಕ್ರಾಂತಿಯ ಸಾಧನೆಗಳನ್ನು ರಕ್ಷಿಸುವುದಷ್ಟೇ ಅಲ್ಲ. ಅಫ್‌ಘಾನಿಸ್ತಾನದಲ್ಲಿ ರಕ್ತಪಾತ ತಡೆಯುವ ಪ್ರಶ್ನೆಯೂ ಇದೆ. ಇದರಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಭಾರತೀಯ ಜನತೆಯ ಹೋರಾಟ ಶೀಲ ಸೌಹಾರ್ದತೆ ಅಗತ್ಯ. ಅಫ್‌ಘಾನಿಸ್ತಾನದಲ್ಲಿ ಶಾಂತಿಯುತ ಪರಿಹಾರದ ವಿರುದ್ಧ ಅಮೆರಿಕನ್ ಮತ್ತು ಪಾಕಿಸ್ತಾನೀ ಹಸ್ತಕ್ಷೇಪ ಭಾರತಕ್ಕೂ ಗಂಭೀರ ಬೆದರಿಕೆ ಎಂದೂ ಸುರ್ಜಿತ್ ವಿವರಿಸಿದರು.

ಮತಪ್ರದರ್ಶನ ಪೂರ್ಣವಾಗಿ ಶಾಂತಿಯುತವಾಗಿದ್ದರೂ ಪೊಲೀಸರು ಇಡೀ ಪ್ರದೇಶದಲ್ಲೆಲ್ಲಾ ಆವರಿಸಿ ಪಾಕಿಸ್ತಾನ ಮತ್ತು ಅಮೆರಿಕಾದ ರಾಯಭಾರಿ ಕಚೇರಿಗಳತ್ತ ಸಾಗಿದ ಮತಪ್ರದರ್ಶಕರನ್ನೆಲ್ಲಾ ಬಂಧಿಸಿದರು.

ಸೋವಿಯತ್ ಸೈನಿಕರು ತಮ್ಮ ಅಂತರ್‌ರಾಷ್ಟ್ರೀಯ ಕರ್ತವ್ಯ ನೆರವೇರಿಸಿ ವಾಪಸಾಗುತ್ತಿದ್ದಂತೆ ಅಮೆರಿಕಾದ ಅತ್ಯಾಧುನಿಕ ಶಸ್ತ್ರಾಸ್ತ್ರ ಹೊತ್ತ ಬಂದುಕೋರರ ದುಷ್ಮನ್‌ಗಳ ರಾಕೆಟ್‌ಗಳು ಹೆಚ್ಚಾಗುತ್ತಾ ಬಂದವು. ಮುಗ್ಧಮಕ್ಕಳು, ಮ[illegible]ಯರು, ಇತರರು ಅದಕ್ಕೆ ಬಲಿ[illegible]ದರು. ಪಾಕಿಸ್ತಾನೀ ಸೈನಿಕರು ದುಶ್ಮನ್‌ಗಳ ವೇಷದಲ್ಲಿ ಅಫ್‌ಘಾನಿಸ್ತಾನದೊಳಗೆ ನುಗ್ಗಲಾರಂಭಿಸಿದ ವರದಿಗಳೂ ಬಂದಿವೆ. ಈ ಹಸ್ತಕ್ಷೇಪಗಳ ವಿರುದ್ಧ ಪಾಕಿಸ್ತಾನವನ್ನು ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷ ನೇರವಾಗಿ ಎಚ್ಚರಿಸುವ ಸ್ಥಿತಿಯೂ ಬಂದಿದೆ. ಅತ್ತ ಕಳೆದೆರಡು ವರ್ಷಗಳಿಂದ ಹೊಂದಾಣಿಕೆಯ ಸ್ನೇಹ ಹಸ್ತ ಚಾಚುತ್ತಾ ಶಾಂತಿಯುತ ಪರಿಹಾರಕ್ಕೆ ಸರ್ವ ಪ್ರಯತ್ನ ನಡೆಸಿದ ನಜೀಬ್ ಸರ್ಕಾರ ಸ್ನೇಹ ಹಸ್ತವನ್ನು ಹಿಂತೆಗೆದುಕೊಳ್ಳದೇನೇ ದುಷ್ಮನ್ ಬಂದುಕೋರರಿಂದ ದೇಶದ ರಕ್ಷಣೆಗೆ ಬಿಗಿಕ್ರಮ ಕೈಗೊಳ್ಳಬೇಕಾಗಿ ಬಂದಿದೆ. ಅಫ್‌ಘಾನಿಸ್ತಾನ ಜನತಾ ಪ್ರಜಾಪ್ರಭುತ್ವ ಪಕ್ಷ (ಪಿ.ಡಿ.ಪಿ.ಎ.)ದ ಸದಸ್ಯರಿಗೆ ಸೈನ್ಯ ಸೇರಲು ಕರೆ ನೀಡಲಾಗಿದೆ. ಇದಕ್ಕೆ ಪಕ್ಷದ ಸದಸ್ಯರಿಂದ ಮಾತ್ರವಲ್ಲ, ಜನಸಾಮಾನ್ಯರಿಂದಲೂ ಉತ್ತಮ ಸ್ಪಂದನ ದೊರೆತಿದೆಯೆಂದು ವರದಿಯಾಗಿದೆ.

ಅಮಾಲಿ ಕಾರ್ಮಿಕ ಸಂಘದ ನಾಯಕರ ಮೇಲೆ ಗೂಂಡಾ ಹಲ್ಲೆ

ಶಿವಮೊಗ್ಗದ ಅಮಾಲಿ ಕಾರ್ಮಿಕ ಸಂಘ (ಸಿ.ಐ.ಟಿ.ಯು.)ವಿನ ಜನಪ್ರಿಯತೆ ಸಹಿಸದ ಎ.ಐ.ಟಿ.ಯು.ಸಿ.ಯ ತಿರುಕಪ್ಪ ನೇತೃತ್ವದ ಸಂಘದ ಗೂಂಡಾಗಳು ಸಿ.ಐ.ಟಿ.ಯು.ನ ಸಕ್ರಿಯ ಕಾರ್ಯಕರ್ತ ಹಾಗೂ ಸಿ.ಪಿ.ಐ.(ಎಂ) ಶಿವಮೊಗ್ಗ ಪ್ರಾದೇಶಿಕ ಸಮಿತಿ ಸದಸ್ಯರಾದ ಕಾ॥ ಅಹಮ್ಮದ್ ಇಬ್ರಾಹಿಂ ಹಾಗೂ ಮಹಮ್ಮದ್ ರಫೀಕ್‌ರವರ ಮೇಲೆ ಚೂರಿಯಿಂದ ಹಲ್ಲೆ ನಡೆಸಿ ತೀವ್ರ ಗಾಯಗೊಳಿಸಿದ್ದಾರೆ. ವಿಷಯ ತಿಳಿದ ಅಮಾಲಿಗಳು ಆಸ್ಪತ್ರೆ ಎದುರು ಸಾಲುಗಟ್ಟಿ ನಿಂತು ರಕ್ತ ನೀಡಲು ಧಾವಿಸಿದರು. ಇಷ್ಟೆಲ್ಲಾ ಹಲ್ಲೆ ಹಿಂಸಾಚಾರ ನಡೆದರೂ ಸಿ.ಐ.ಟಿ.ಯು. ಸಂಘದ 12ಜನ ಕಾರ್ಯಕರ್ತರನ್ನು ಪೊಲೀಸರು ಬಂಧಿಸಲಾಗಿದೆ.

ಈ ಗೂಂಡಾ ಹಲ್ಲೆಯನ್ನು ಪ್ರತಿಭಟಿಸಿ ಸಿ.ಪಿ.ಐ.(ಎಂ), ಸಿ.ಐ.ಟಿ.ಯು., ಡಿ.ವೈ.ಎಫ್.ಐ. ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಜನವರಿ 9ರಂದು ಶಿವಮೊಗ್ಗದ ಕರ್ನಾಟಕ ಸಂಘದ ಬಳಿಯಿಂದ ಸಾವಿರಾರು ಜನರ ಬೃಹತ್ ಮೆರವಣಿಗೆಯೊಂದನ್ನು ನಡೆಸಿ ಗೋಪಿ ಸರ್ಕಲ್ ಬಳಿ ಬಹಿರಂಗ ಸಭೆ ನಡೆಸಲಾಯಿತು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಎಸ್.ಬಿ. ಶಿವಶಂಕರ್‌ರವರು ಮಾತನಾಡಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ಗೂಂಡಾಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಪೊಲೀಸ್ ಅಧಿಕಾರಿಗಳನ್ನು ಅವರು ಒತ್ತಾಯಿಸಿದರು. ಜನತೆ, ಕಾರ್ಮಿಕರು ಇಂತಹ ಹಲ್ಲೆಗಳನ್ನು ಎದುರಿಸಿ ಹೋರಾಡಬೇಕೆಂದು ಕರೆ ನೀಡಿದರು. ಡಿ.ವೈ.ಎಫ್.ಐ. ನಾಯಕ ಕಾ॥ ಬಿ.ಎಸ್. ದಾಸ್ ಹಾಗೂ ವಾಸುದೇವ್ ಮಾತನಾಡಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬೆಲೆ ಏರಿಕೆ ನೀತಿಯನ್ನು ಇದೇ ಸಂದರ್ಭದಲ್ಲಿ ಖಂಡಿಸಲಾಯಿತು. ಹಾಗೂ ಬೆಲೆ ಏರಿಕೆಯನ್ನು ಕೂಡಲೇ ಹಿಂತೆಗೆದುಕೊಳ್ಳಲು ಹಸಿರು ಕಾರ್ಡ್ ವಿತರಣೆಯಲ್ಲಿ ಆಗಿರುವ ತಾರತಮ್ಯ ಬಗೆಹರಿಸಬೇಕೆಂದು ಹಾಗೂ ಕಾರ್ಮಿಕ ಮುಖಂಡರ ಮೇಲೆ ನಡೆದ ಹಲ್ಲೆ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಸಭೆ ನಿರ್ಣಯ ಅಂಗೀಕರಿಸಿತು.

ಉಡುಪಿ ತಾಲ್ಲೂಕು ಜನರಲ್ ವರ್ಕರ್ಸ್ ಯೂನಿಯನ್ ಸಭೆ

ಶೋಷಣೆ ಸುಲಿಗೆಗೆ ಆಧಾರದವಾಗಿರುವ ಕಂಟ್ರಾಕ್ಟ್ ಪದ್ಧತಿಯನ್ನು ರದ್ದುಗೊಳಿಸಿದರೆ ಮಾತ್ರ ಕಾರ್ಮಿಕರ ಹಿತಗಳ ರಕ್ಷಣೆಯಾದೀತು ಎಂದು ದಿನಾಂಕ 19-2-89ರಂದು ಉಡುಪಿಯ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಭವನದಲ್ಲಿ ಸೇರಿದ ಉಡುಪಿ ತಾಲ್ಲೂಕು ಜನರಲ್ ವರ್ಕರ್ಸ್ ಯೂನಿಯನ್ 17ನೇ ವಾರ್ಷಿಕ ಮಹಾಸಭೆಯಲ್ಲಿ ಸರ್ಕಾರವನ್ನು ಒತ್ತಾಯಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಪಿ.ವಿಶ್ವನಾಥ ರೈ ವಹಿಸಿದ್ದರು. ಅಂಗಡಿ, ಹೋಟೇಲುಗಳು, ಸಣ್ಣಪುಟ್ಟ ಉದ್ದಿಮೆಗಳು ಕಟ್ಟಡ ನಿರ್ಮಾಣ, ರಸ್ತೆ ಕಂಟ್ರಾಕ್ಟರರ ಕೈಕೆಳಗೆ ದುಡಿಯುತ್ತಿರುವ ನೂರಾರು ಕಾರ್ಮಿಕರನ್ನು ಸಂಘಟಿಸಿ ಅವರುಗಳಿಗೆ ಕಾನೂನಿನ ಸವಲತ್ತುಗಳು ಸಿಗುವಂತಾಗಲು ಸಂಘಟನೆ ಬೆಳೆಸುವಂತೆ ನಿರ್ಧರಿಸಲಾಯಿತು.

ಉಡುಪಿಯ ನ್ಯಾಯವಾದಿ ಶಿರ್ವಾಡಿ ವಿಲಿಯಂ ಪಿಂಟೋರವರು ಮಾತನಾಡಿ ಸಂಘಟನೆಯ ಮಹತ್ವವನ್ನು ಒತ್ತಿ ಹೇಳಿದರು: ಛಿದ್ರಕಾರಿ ಶಕ್ತಿಗಳ ಐಕ್ಯಭಂಜಕ ನೀತಿಯನ್ನು ಸೋಲಿಸಿದರೆ ಮಾತ್ರ ದೇಶದ ಐಕ್ಯತೆ ಮತ್ತು ಸಮಗ್ರತೆಗಳನ್ನು ರಕ್ಷಿಸಲು ಸಾಧ್ಯವಿದೆ" ಎಂದರು.

ಮುಂದಿನ ವರ್ಷಕ್ಕೆ ಪಿ.ವಿಶ್ವನಾಥರೈ ಅಧ್ಯಕ್ಷರು, ಶ್ರೀಮತಿ ಗೋಪಿ ಮತ್ತು ರವೀಂದ್ರ ಆಚಾರ್ ಉಪಾಧ್ಯಕ್ಷರುಗಳು ಡೇವಿಡ್ ಎ.ಕರ್ಕಡ ಕಾರ್ಯದರ್ಶಿ ಗೋಡ್ವಾನ್ ಡೆನಿಸ್ ಫರ್ನಾಂಡೀಸ್ ಜತೆ ಕಾರ್ಯದರ್ಶಿ ಎನ್.ಸಾಧು ಅಮೀನ್ ಕೋಶಾಧಿಕಾರಿಯಾಗಿ 15 ಮಂದಿ ಸದಸ್ಯರಿರುವ ಸಮಿತಿಯನ್ನು ಆರಿಸಲಾಯಿತು.

ಮುಖ್ಯಮಂತ್ರಿಗಳ ಸಭೆ

ಪುಟ 1ರಿಂದ

ಕೇಂದ್ರ ಸರ್ಕಾರದ ಈ ವಿಷಯದಲ್ಲಿ ಕಾಲೆಳೆಯುತ್ತಾ ಬಂದಿತ್ತು. ಈ ಸಭೆಯಲ್ಲಿ ಕಾಂಗ್ರೆಯೇತರ ಮತ್ತು ಕಾಂಗ್ರೆ ಮುಖ್ಯಮಂತ್ರಿಗಳ ಐಕ್ಯ ಹೋರಾಟದ ಫಲವಾಗಿ ಕೇಂದ್ರ ಸರ್ಕಾರ ಮಳೆಗಾಲ ಅಧಿವೇಶನದಲ್ಲಿ ಅಗತ್ಯ ಶಾಸನವನ್ನು ಮಂಡಿಸಲು ಒಪ್ಪಿಕೊಳ್ಳಬೇಕಾಯಿತು. ಇದರಿಂದ ಕೇಂದ್ರ ಸರ್ಕಾರಕ್ಕೇನೂ ನಷ್ಟವಾಗುವುದಿಲ್ಲ. ಆದರೆ ರಾಜ್ಯಗಳಿಗೆ ಸಂಪನ್ಮೂಲಕ್ಕೆ ಗಮನಾರ್ಹ ಕೊಡುಗೆಯಾಗಲಿದೆ.

ರೈಲ್ವೇ ಮೂಲಕ ಸರಕು ರವಾನೆಯಲ್ಲಿ ತೆರಿಗೆ ವಸೂಲಿಗೆ ರೈಲ್ವೇ ಆಡಳಿತದ ಅಸಹಕಾರ, ರಾಜ್ಯ ಸರ್ಕಾರಗಳಿಗೆ ಕೊಡಬೇಕಾದ ಹಣವನ್ನು ತಡೆಹಿಡಿಯಲಾಗುವುದು ಎಂಬ ಪ್ರಧಾನ ಮಂತ್ರಿಗಳ ಬೆದರಿಕೆಯ ವಿರುದ್ಧವೂ ಕಾಂಗ್ರೆಯೇತರ ಮುಖ್ಯಮಂತ್ರಿಗಳು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು.

ಈ ಸಭೆಯ ಕಲಾಪಗಳ ಹಿನ್ನೆಲೆಯಲ್ಲಿ, ನೀತಿ ನಿರೂಪಣಾ ವಿಷಯಗಳ ಬಗ್ಗೆ ಸರಿಯಾದ ಚರ್ಚೆ ನಡೆಯಲು ಸಂವಿಧಾನದ 268ನೇ ಕಲಂ ಹೇಳಿರುವಂತೆ ಅಂತರ-ರಾಜ್ಯ ಮಂಡಳಿ ರಚಿಸಬೇಕೆಂಬ ದೇಶದ ಪ್ರಜಾಪ್ರಭುತ್ವವಾದಿಗಳ ಒತ್ತಾಯಕ್ಕೆ ಇನ್ನಷ್ಟು ಬಲ ಬಂದಿದೆ. ಸರ್ಕಾರಿಯಾ ಆಯೋಗ ವರದಿ ಕೂಡಾ ಈ ಕಲಮನ್ನು ಬಳಸಬೇಕಾದ, ಎಲ್ಲಾ ಮುಖ್ಯಮಂತ್ರಿಗಳ ಸಮ್ಮತಿಯನ್ನು ಕೇಂದ್ರ ಪಡೆಯಬೇಕೆಂದು ವಿಧಿಸುವ ಅಗತ್ಯವನ್ನು ಒತ್ತಿ ಹೇಳಿದೆ.

ಕೃಷಿ ಕೂಲಿಕಾರರ ಮೇಲೆ ಜನತಾದಳ ಬೆಂಬಲಿಗರ ಹಲ್ಲೆ ಖಂಡನೆ

ಗಂಗಾವತಿ ತಾಲ್ಲೂಕು ಗೋನಾಳ್ ಪ್ರದೇಶದ ನಾಲಾ ಭರ್ಮಾ ಭೂಮಿಯನ್ನು ಹಲವು ವರ್ಷಗಳಿಂದ ಭಟ್ರಹಂಚಿನಾಳ ಕ್ಯಾಂಪ್‌ನ ಕೃಷಿ ಕಾರ್ಮಿಕ ಕುಟುಂಬಗಳು ಸಾಗುವಳಿ ಮಾಡುತ್ತಿದ್ದ ಭೂಮಿಯಲ್ಲಿ ಜನವರಿ 15 ರಂದು ಸಸಿ ಹಾಕಲಾಯಿತು. ವಿಷಯ ತಿಳಿದ ಭೂಮಾಲೀಕರಾದ ಸತ್ಯನಾರಾಯಣ, ಸೂರ್ಯರಾವ್, ಕಲಕಮೂರ್ತಿ (ಹೇರೂರು ಮಂಡಲ ಪಂಚಾಯಿತಿಯ ಜನತಾದಳ ಸದಸ್ಯರು) ಸುಮಾರು 50ಮಂದಿ ಗೂಂಡಾಗಳೊಡನೆ ಬಂದು ನೆಟ್ಟ ಸಸಿಗಳನ್ನು ಧ್ವಂಸ ಮಾಡಿದರು. ತಡೆಯಲು ಬಂದ ಹೆಂಗಸರನ್ನು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ನಡೆಸಿದರು. ಲಚುಮಮ್ಮ ಎಂಬುವರಿಗೆ ಗಾಯಗಳಾಗಿವೆ. ಮತ್ತೊಮ್ಮೆ ಜನವರಿ 20ರಂದು ಬಂದ ಮರು ಆಕ್ರಮಣ ನಡೆಸಲು ಪ್ರಯತ್ನ ನಡೆಯಿತು.

ಕೃಷಿ ಕಾರ್ಮಿಕರ ಮೇಲೆ ಜನತಾದಳದ ಬೆಂಬಲಿಗರು ನಡೆಸುತ್ತಿರುವ ಹಲ್ಲೆಯನ್ನು ಸಿ.ಪಿ.ಐ.(ಎಂ) ಗಂಗಾವತಿ ತಾಲ್ಲೂಕು ಸಮಿತಿ ತೀವ್ರವಾಗಿ ಖಂಡಿಸಿ ಹಲ್ಲೆ ನಡೆಸಿದವರ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಕೃಷಿ ಕೂಲಿಗಾರರು ಸಾಗುವಳಿ ಮಾಡುತ್ತಿರುವ ಭೂಮಿ ಸಕ್ರಮಗೊಳಿಸಿ ಹಕ್ಕು ಪತ್ರ ನೀಡಬೇಕೆಂದು ಹಾಗೂ ಪೊಲೀಸ್ ರಕ್ಷಣೆ ನೀಡಬೇಕೆಂದು ಪಕ್ಷದ ಕಾರ್ಯದರ್ಶಿ ಕಾ॥ ಬಾಲಪ್ಪನವರು ಒತ್ತಾಯಿಸಿದ್ದಾರೆ.

ಸಾರ್ವಜನಿಕ ವಲಯ

ಪುಟ 5 ರಿಂದ

ಹೀಗೆ ಅತಿ ಸುಲಭ ಬೆಲೆಯಲ್ಲಿ ತನ್ನ ಅನುಕೂಲತೆಗಳನ್ನೂ ಪಡೆವ ಖಾಸಗಿ ವಲಯ ತಾನು ಉತ್ಪಾದಿಸುವ ವಸ್ತುಗಳಿಗೆ ಆರ್ಥಿಕ ಸಮರ್ಥನೆಗೆ ನಿಲುಕಲಾರದಷ್ಟು ದೊಡ್ಡ ಬೆಲೆಯನ್ನು ಕೇಳುತ್ತದೆ. ಇಂತಹ ಶೋಷಣಾತ್ಮಕ ಸಂಬಂಧವನ್ನು ಗಮನಿಸದೇ ಹೋದಲ್ಲಿ ನಾವು ಈ ಎರಡೂ ವಲಯಗಳ ಆರ್ಥಿಕ ಕಾರ್ಯ ನಿರ್ವಹಣೆಯನ್ನೂ ಹೋಲಿಸುವುದು ಅರ್ಥಹೀನವಾಗುತ್ತದೆ. ಯಾವುದೇ ಬೆಲೆ ಹತೋಟಿ ಕ್ರಮಗಳಿಂದ ಖಾಸಗೀ ವಲಯ ನುಣುಚಿಕೊಳ್ಳುತ್ತದೆ. ಆದರೆ ಸಾರ್ವಜನಿಕ ವಲಯ ಎಲ್ಲ ಕ್ರಮಗಳಿಗೂ ಒಳಗಾಗುತ್ತದೆ. ಖಾಸಗಿ ವಲಯಕ್ಕೆ ತೆರಿಗೆ ತಪ್ಪಿಸಿಕೊಳ್ಳಲು ಹಲವು ದಾರಿಗಳಿವೆ.

ಸಾರ್ವಜನಿಕ ವಲಯದ ಕಾರ್ಯಕ್ಷಮತೆ ಅದರ ಸಂಘಟನೆಯನ್ನು ಬೆಳೆಸುವ ಸಾಮರ್ಥ್ಯ ಮತ್ತು ಕಾರ್ಯ ಕುಶಲತೆಯಲ್ಲಿದೆ. ಸಾರ್ವಜನಿಕ ವಲಯದ (ಬಿಹೆಚ್‌ಇಎಲ್ ಭಾರತ್ ಹೆವಿ ಎಲೆಕ್ಟ್ರಿಕಲ್ ಲಿಮಿಟೆಡ್)ಗೆ ಸಮಾನವಾದದ್ದು ಖಾಸಗೀ ವಲಯದಲ್ಲಾವುದೂ ಇಲ್ಲ. ಹಾಗೇ ಹೆಚ್‌ಎಂಟಿ, ಓಎನ್‌ಜಿ ಐಟಿಐ, ಬಿಇಎಲ್ ಇತ್ಯಾದಿಗಳು. ಇವು ಹಾಗೂ ಇಂತಹ ಹಲವು ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಮಹತ್ಸಾಧನೆಗಳೆಂದು ನಮ್ಮ ಬೂರ್ಜ್ವಾ ವರ್ಗವೇ ಹೊಗಳಿದೆ.

ಇವುಗಳಿಗೆ ಸಮಾನಾದ್ದನ್ನು ನಮ್ಮ ಖಾಸಗೀ ವಲಯ ಇಂದು, ಜವಳಿಯಲ್ಲಾಗಲಿ, ಆಟೋಮೊಬೈಲ್‌ಗಳಲ್ಲಾಗಲಿ, ಮನರಂಜನಾ ಎಲೆಕ್ಟ್ರಾನಿಕ್ಸ್‌ನಲ್ಲಾಗಲೀ ಸಾಧಿಸುವುದು ಸಾಧ್ಯವಾಗಿಲ್ಲ. ಪ್ರೋತ್ಸಾಹ ಮತ್ತು ಸಹಾಯಧನ ಇವೆರಡನ್ನೂ ಕೊಟ್ಟಾಗಲೂ ಅವ ಂದ ಅದು ಸಾಧ್ಯವಾಗಿಲ್ಲ.

ಖಾಸಗೀ ವಲಯ ಕೆಲವು ಯಶಸ್ಸುಗಳನ್ನು ಪಡೆದಿದ್ದರೆ ಅದಕ್ಕೆ ಪರೋಕ್ಷವಾಗಿ ಸಾರ್ವಜನಿಕ ವಲಯದ ಸಹಾಯ ಇದ್ದೇ ಇರುತ್ತದೆ. ಖಾಸಗೀ ವಲಯದ ಲಾಭವೆಂದರೆ ಸಾರ್ವಜನಿಕ ವಲಯದ ಹಾನಿ ಎಂಬುದು ಸ್ಪಷ್ಟ. ಆದ್ದ ಂದ ಸಾರ್ವಜನಿಕ ವಲಯವಿಲ್ಲದ ಭಾರತವನ್ನು ಊಹಿಸುವುದೂ ಕಷ್ಟವಾಗುತ್ತದೆ.


ಪಂಚಾಯತ್ ರಾಜ್ಯ

ಪುಟ 2ರಿಂದ

ಜಿಲ್ಲಾ ಮತ್ತು ಬ್ಲಾಕ್ ಯೋಜನಾ ಸಮಿತಿಗಳು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಹಾಯವಾಗುವಂತೆ ಅಗತ್ಯವಾದ ಆಡಳಿತ ಮತ್ತು ತಾಂತ್ರಿಕ ಸಿಬ್ಬಂದಿ ನೆರವನ್ನು ಒದಗಿಸಿಕೊಡಲಾಗಿದೆ. ರಾಜ್ಯ ಮಟ್ಟದಲ್ಲಿ ಆದ್ಯತೆ ಮತ್ತು ಹಣಕಾಸು ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾರ್ಗದರ್ಶನ ನೀಡಲಾಗುವುದು. ಬ್ಲಾಕ್ ಮಟ್ಟದ ಕಾರ್ಯಕ್ರಮಗಳನ್ನು ಪಂಚಾಯತ್ ಸದಸ್ಯರ ನೆರವಿನಿಂದ ಬ್ಲಾಕ್ ಸಮಿತಿಗಳೇ ರೂಪಿಸಿಕೊಳ್ಳುತ್ತವೆ. ನಂತರ ಬ್ಲಾಕ್ ಯೋಜನೆಗಳನ್ನು ಜಿಲ್ಲಾ ಯೋಜನೆಗಳೊಂದಿಗೆ ವಿಲೀನಗೊಳಿಸಲಾಗುತ್ತದೆ. ಇನ್ನು ಮುಂದೆ ರಾಜ್ಯದ ಒಟ್ಟು ವೆಚ್ಚದಲ್ಲಿ ಶೇ. 50ರಷ್ಟನ್ನು ಜಿಲ್ಲಾ ಮತ್ತು ಬ್ಲಾಕ್ ಮಟ್ಟದಲ್ಲಿ ನಿರ್ಧರಿಸಲಾಗುತ್ತದೆ. ಪ್ರಜಾಸತ್ತಾತ್ಮಕವಾಗಿ ಪಂಚಾಯತ್‌ಗಳಿಗೆ ಆಯ್ಕೆಗೊಂಡ ಶ್ರೀಸಾಮಾನ್ಯರನ್ನೊಳಗೊಂಡಂತೆ ವಿಕೇಂದ್ರಿಕರಣದ ಮೂಲಕ ಯೋಜನೆಗಳನ್ನು ರೂಪಿಸುವುದರ ದಿಸೆಯಲ್ಲಿ ಇಡೀ ರಾಷ್ಟ್ರದಲ್ಲೇ ಇದೊಂದು ಮಹತ್ವದ ಹೆಜ್ಜೆಯಾಗಿದೆ.

(ಕೃಪೆ-ಯೋಜನಾ)

ಕರಿಯರ ಹಾಡು



-ತಿಮ್ಮನಹಳ್ಳಿ ವೇಣುಗೋಪಾಲ್

Printed & Published by P.Ramachandra Rao on behalf of Communist Party of India (Marxist) Karnataka State Committee, K.V.Temple Street, Sulthanpet, Bangalore-560053. Editor: P.Ramachandra Rao Managing Editor N.K.Upadhyaya
Managerial Office: Shobha Lodge Complex, 5th Main Road, Gandhinagar, Bangalore-560009